ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

# ಧಾರ್ಮಿಕ ಜೀವನ ಎಂದರೆ ?




ರಚನೆ:

ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

# ಧಾರ್ಮಿಕ ಜೀವನ ಎಂದರೆ?



**ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ**

**ಕನ್ನಡಕ್ಕೆ ಅನುವಾದ: ಹಗದೂರು ಶ್ರೀನಿವಾಸ**

**ಪ್ರತಿಗಳು ದೊರೆಯುವ ಸ್ಥಳ**


**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಧ್ಯಾನ ಮಂದಿರ

ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**pmckannadashop.org**

**ಹೆಚ್ಚಿನ ಮಾಹಿತಿಗಾಗಿ pmckannadatv.org**

**DHARMIKA JEEVANA ENDARE?**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು–560066<br>ಮೊ: 9449695503 |
| ಪ್ರತಿಗಳು | : | 500 |
| ಬೆಲೆ | : | 60 ರೂ. |
| ಪುಟಗಳು | : | 48 |


"ಭಗವಂತನ ಕುರಿತು ತಿಳಿದುಕೊಳ್ಳುವ ಅರ್ಹತೆ ಬಂದಾಗ ಮಾತ್ರವೇ ಸದ್ಗುರುವು ನಮ್ಮ ಜೀವನದಲ್ಲಿ ಬರುತ್ತಾನೆ"
"ಸುತ್ತಲೂ ಇರುವ ಪ್ರಪಂಚ ನಿತ್ಯವು ಪ್ರಲೋಭನಗಳಿಗೆ ಗುರಿ ಮಾಡುತ್ತಾ ಇರುತ್ತದೆ.
"ಮಾಯೆಯೊಂದರ ಆಟ ಜೀವನದಲ್ಲಿ ಯಾವಾಗ ನಿಲ್ಲುತ್ತದೆ ಎಂದರೆ ಸರಿಯಾದ ಸಾಧನೆ ಮಾಡಿದಾಗ, ಸರಿಯಾದ ಜ್ಞಾನವನ್ನು ಹೊಂದಿದಾಗ"
"ವಿಚಾರವು ಏಕೆ ಬರುತ್ತದೆ ಎಂದರೆ ವಿಚಾರಣೆ ಇಲ್ಲದಿರುವುದರಿಂದಲೇ"
"ಅಂತರಂಗವು ಅಶುದ್ಧವಾಗಿರುವಾಗ ಸತ್ಯದ ಅರಿವಾಗದು"
"ಅಂತರಂಗದಲ್ಲಿರುವ ಪ್ರಜ್ಞೆ ಉತ್ತಮವಾಗಿ ವ್ಯಕ್ತವಾಗಬೇಕೆಂದರೆ ಧ್ಯಾನ ಸಾಧನೆಯನ್ನು ಚೆನ್ನಾಗಿ ಮಾಡಬೇಕು.

– "ಬ್ರಹ್ಮ ವಿದ್ವರಿಷ್ಠ" ತಟವರ್ತಿ ರಾಜ್ಯಲಕ್ಷ್ಮಿ

# ಧಾರ್ಮಿಕ ಜೀವನ ಎಂದರೆ?

ನೀವು ಎಷ್ಟೋ ದಿನಗಳಿಂದ ಈ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದೀರಿ, ಎಷ್ಟೋ ವಿಷಯಗಳನ್ನು ಕಲಿಯುತ್ತಿದ್ದೀರಿ. ಆದರೆ ನೀವು ಕಲಿಯಬೇಕಾದದ್ದು ಇನ್ನೂ ಬಹಳಷ್ಟಿದೆ ಎಂದು ಅನಿಸುತ್ತಲೇ ಇರುತ್ತದೆ. ಈ ಜ್ಞಾನ ಎಂಬುದು ಅನಂತವಾದುದು. ಆದರೆ ಕೆಲವರ ಅಭಿಪ್ರಾಯದಲ್ಲಿ ಕೆಲವು ವಿಷಯಗಳು ವ್ಯರ್ಥ ಎಂದುಕೊಳ್ಳುತ್ತಾರೆ. ಆದರೆ ಸೃಷ್ಟಿಕರ್ತನ ಸೃಷ್ಟಿಯಲ್ಲಿ ಸೃಷ್ಟಿಸಿದ ಯಾವುದೂ ವ್ಯರ್ಥವಲ್ಲ, ಆದ್ದರಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುತ್ತಾ ಅವುಗಳಿಂದ ಪಾಠಗಳನ್ನು ಕಲಿಯಬೇಕು.

ಈ ಧ್ಯಾನ ಜೀವನದಲ್ಲಿ ಇನ್ನೂ ಮುಂದೆ ಮುಂದೆ ಬೆಳೆಯಬೇಕು ಅಂದುಕೊಂಡರೆ, ಏನನ್ನು ಆಚರಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಪುರಾತನ ಕಾಲದಿಂದ ಮಹಾತ್ಮರು, ಮಹರ್ಷಿಗಳು ಮಾನವರಿಗೆ ವಿಧಿ–ವಿಧಾನಗಳನ್ನು ಬೋಧಿಸಿದ್ದಾರೆ.

ಯಾರು ಧಾರ್ಮಿಕವಾದ ಜೀವನವನ್ನು ನಡೆಸುತ್ತಾರೋ ಅವರಿಗೆ ಮಾತ್ರ ದುಃಖ ನಿವಾರಣೆಯಾಗುತ್ತದೆ. ಧಾರ್ಮಿಕವಾದ ಜೀವನ ಎಂದರೆ ಧರ್ಮವಂತವಾದ ಜೀವನ. ಅದಕ್ಕಾಗಿಯೇ ಬುದ್ಧನು "ಧರ್ಮಂ ಶರಣಂ ಗಚ್ಛಾಮಿ" ಎಂದು ಹೇಳಿದ್ದಾನೆ. ಅಂದರೆ ಯಾರು ಧರ್ಮವನ್ನು ಶರಣು ಹೋಗುತ್ತಾರೋ ಅವರು ಶ್ರೇಷ್ಠರಾಗುತ್ತಾರೆ. ಧರ್ಮವನ್ನು ಶರಣು ಹೋದವನೇ ಸತ್ಯವನ್ನು ತಿಳಿದುಕೊಳ್ಳಬಲ್ಲ.

ನೀವು ಅಂದುಕೊಳ್ಳಬಹುದು ನಾನು ಆತ್ಮ, ಅಂದರೆ ಭಗವಂತ ಎಂದು ತಿಳಿದುಕೊಂಡಿದ್ದೇನೆ, ವಿಗ್ರಹವು ದೇವರಲ್ಲ ಎಂದು ತಿಳಿದುಕೊಂಡಿದ್ದೇನೆ, ಸತ್ಯವನ್ನು ತಿಳಿದುಕೊಂಡಿದ್ದೇನೆ, ಆದರೆ ಆ ಸತ್ಯವನ್ನು ಏಕೆ ದರ್ಶಿಸಲು ಸಾಧ್ಯವಾಗುತ್ತಿಲ್ಲ? ಅಂದರೆ ಅದಕ್ಕೆ ಕಾರಣ, ಧರ್ಮವನ್ನು ಆಚರಿಸಿದರೆ ಮಾತ್ರ ಸತ್ಯದ ದರ್ಶನವಾಗುತ್ತದೆ ಎಂದು ಮಹಾತ್ಮರು ಹೇಳಿದ್ದಾರೆ. ಹಾಗಾದರೆ ಧರ್ಮವನ್ನು ಹೇಗೆ ಆಚರಿಸಬೇಕು? ಅಸಲಿಗೆ ಧರ್ಮ ಎಂದರೆ ಏನು? ಎಂಬ ವಿಷಯಗಳನ್ನು ತಿಳಿದುಕೊಳ್ಳಬೇಕು.

ಸತ್ಯವನ್ನು ತಿಳಿದುಕೊಳ್ಳಬೇಕೆಂದರೆ ಧರ್ಮಯುತವಾದ ಜೀವನ ನಡೆಸಬೇಕು ಎಂದು ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಬುದ್ಧನು "ಧರ್ಮಂ ಶರಣಂ ಗಚ್ಛಾಮಿ" ಎಂದು ಹೇಳಿದ್ದಾನೆ. ಪ್ರತಿಯೊಬ್ಬರ ಮನಸ್ಸಿನ ಆಧಾರದ ಮೇಲೆ ಶರೀರವು ಮಾಡುವ ಕೆಲಸಗಳಿರುತ್ತವೆ. ಆದ್ದರಿಂದ, ನೀನು ನಿನ್ನ ಮನಸ್ಸನ್ನು ಧಾರ್ಮಿಕವಾಗಿ ಇಟ್ಟು–ಕೊಂಡರೆ, ನೀನೇ ಧರ್ಮದ ಪ್ರತಿರೂಪವಾಗುತ್ತೀಯ ಎಂದು ತಿಳಿದುಕೊಳ್ಳಬೇಕು.

ಪೂರ್ವಕಾಲದಲ್ಲಿ ಧರ್ಮವನ್ನು ಆಚರಿಸುವವರನ್ನು 'ಶುದ್ಧ ಧರ್ಮ'ದವರು ಎನ್ನುತ್ತಿದ್ದರಂತೆ. ಯಾರು ಮನಸ್ಸನ್ನು ಪರಿಶುದ್ಧವಾಗಿ ಇಟ್ಟುಕೊಳ್ಳುತ್ತಾರೋ ಅವರನ್ನು 'ಧರ್ಮಾತ್ಮರು' ಎಂದು ಕರೆಯುತ್ತಿದ್ದರು.

ಆನಂತರ ಆರ್ಯರು, ಅನಾರ್ಯರು ಎಂಬ ವಿಭಾಗಗಳು ಬಂದವು. ಆರ್ಯರು ಎಂದರೆ ಎಲ್ಲರಿಗೂ ಒಳ್ಳೆಯದನ್ನು ಮಾಡುವವರು, ಅನಾರ್ಯರು ಎಂದರೆ ಎಲ್ಲರಿಗೂ ತೊಂದರೆ ಕೊಡುವವರು ಎಂದು ಎರಡಾಗಿ ವಿಭಜಿಸಲಾಯಿತು. ಕಾಲಕ್ರಮೇಣ ಈ ಧರ್ಮವನ್ನೇ ಧರ್ಮ ಮತ್ತು ಅಧರ್ಮ ಎಂದು ಕರೆಯಲಾಯಿತು. ಈಗ ಅನೇಕ ಜಾತಿಗಳು, ಮತಗಳು ಮತ್ತು ವರ್ಣಗಳು ಬಂದಿವೆ. ಮೆಲ್ಲಗೆ ಧರ್ಮದ ರೂಪರೇಷೆಗಳನ್ನೇ ಬದಲಾಯಿಸಿಬಿಟ್ಟಿದ್ದಾರೆ.

ಅಂದರೆ, ಕ್ರಿಶ್ಚಿಯನ್ ಧರ್ಮ, ಮುಸ್ಲಿಂ ಧರ್ಮ, ಹಿಂದೂ ಧರ್ಮ ಎಂದಲ್ಲದೆ, ಧರ್ಮವನ್ನು ಜಾತಿಯ ಆಧಾರದ ಮೇಲೆ ಸೃಷ್ಟಿಸುತ್ತಿದ್ದಾರೆ. ನಮ್ಮ ಜಾತಿ–ನಿಮ್ಮ ಜಾತಿ, ನಮ್ಮ ಮತ–ನಿಮ್ಮ ಮತ ಎಂದು ಧರ್ಮಗಳನ್ನು ಬದಲಾಯಿಸುತ್ತಿದ್ದಾರೆ. ಆದರೆ ಯಾವ ಮತದಲ್ಲಿ ಹುಟ್ಟಿದರೂ, ಯಾವ ಜಾತಿಯಲ್ಲಿ ಹುಟ್ಟಿದರೂ ಧರ್ಮ ಎಂಬುದು ಮನಸ್ಸಿನ ಮೇಲೆ ಮತ್ತು ನಮ್ಮ ಗುಣದ ಮೇಲೆ ಆಧಾರಪಟ್ಟಿರುತ್ತದೆ.

ನೋಡಿ, ಬೆಂಕಿಯ ಧರ್ಮ ಸುಡುವುದು, ಬೆಂಕಿಯ ಧರ್ಮ ಶಾಖ (ಬಿಸಿ), ಬೆಂಕಿಯಲ್ಲಿ ಕೈ ಇಟ್ಟರೆ ಅದರ ಧರ್ಮದಂತೆ ಅದು ಸುಡುತ್ತದೆ. ಹಾಗೆಯೇ ಮಂಜಿನ (ಐಸ್) ಧರ್ಮ ತಂಪು. ಧರ್ಮ ಎಂಬುದು ಜಾತಿ ಅಥವಾ ಮತಗಳಿಂದ ಬಂದಿದ್ದಲ್ಲ.

ಸೂರ್ಯನ ಧರ್ಮ ಶಾಖವನ್ನು ನೀಡುವುದು, ಚಂದ್ರನ ಧರ್ಮ ತಂಪನ್ನು ನೀಡುವುದು. ನೀರಿನ ಧರ್ಮ ಎಲ್ಲರಿಗೂ ಉಪಯುಕ್ತವಾಗುವುದು.

ಹಾಗೆಯೇ ಪ್ರತಿ ಗಿಡವೂ ತನ್ನ ಧರ್ಮವನ್ನು ತಾನು ಪಾಲಿಸುತ್ತದೆ. ಆದರೆ ಮನುಷ್ಯನೇ ಬುದ್ಧಿ ಹೆಚ್ಚಾಗಿ ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಮಾಡಬೇಕಾದ ಕೆಲಸಗಳನ್ನು ಬಿಡುತ್ತಾ, ತನ್ನ ಸ್ವಂತ ಅಧಿಕಾರವನ್ನು ಚಲಾಯಿಸುತ್ತಿದ್ದಾನೆ. ಹಾಗಾದರೆ ಧಾರ್ಮಿಕ ವ್ಯಕ್ತಿ ಯಾರು ಎಂದರೆ – ಧರ್ಮವನ್ನು ಆಚರಿಸುವವನೇ ಧಾರ್ಮಿಕ ವ್ಯಕ್ತಿ ಎಂದು ನಾವು ಹೇಳಿಕೊಳ್ಳುತ್ತಿದ್ದೇವೆ.

ನೋಡಿ, ಉಸಿರಿರುವ ಯಾವುದೇ ಜೀವಿಯನ್ನು ಹಿಂಸಿಸಬಾರದು ಎಂಬ ಪರಮ ಸತ್ಯವನ್ನು ಗುರುವಿನ ಬಳಿ ಕಲಿಯಬೇಕು. ಏಕೆಂದರೆ ಆ ಜೀವಿಗಳೆಲ್ಲವೂ ಅನುಭವಗಳಿಗಾಗಿ ಈ ಭೂಮಿಯ ಮೇಲೆ ಹುಟ್ಟಿವೆ ಹೊರತು ನೀವು ತಿನ್ನುವುದಕ್ಕಲ್ಲ ಎಂಬ ಒಂದು ಪರಮ ಧರ್ಮವನ್ನು ತಿಳಿದುಕೊಂಡು ಧಾರ್ಮಿಕವಾದ ಜೀವನವನ್ನು ನಡೆಸಬೇಕು. ಇಲ್ಲಿ ಗಮನಿಸಿ, ಯಾರು ಧಾರ್ಮಿಕವಾದ ಜೀವನವನ್ನು ನಡೆಸುತ್ತಾರೋ ಅವರ ಜೀವನದಲ್ಲಿ ದುಃಖವಿರುವುದಿಲ್ಲ.

ದುಃಖ ಮತ್ತು ಧಾರ್ಮಿಕತೆ ಒಟ್ಟಾಗಿ ಇರಲು ಸಾಧ್ಯವಿಲ್ಲ ಎಂದು ಮಹಾತ್ಮರು

ಹೇಳುತ್ತಾರೆ. ನೀನು ಧಾರ್ಮಿಕವಾದ ಜೀವನವನ್ನು ನಡೆಸಲು ಸಾಧ್ಯವಾದರೆ ನಿನ್ನ ಜೀವನದಲ್ಲಿ ಎಲ್ಲಿಯೂ ದುಃಖವಿರುವುದಿಲ್ಲ. ನಿನಗೆ ಇನ್ನೂ ದುಃಖ ಬರುತ್ತಿದೆ ಎಂದರೆ ನಿನ್ನ ಜೀವನದಲ್ಲಿ ಎಲ್ಲೋ ತಪ್ಪು ನಡೆಯುತ್ತಿದೆ ಎಂದರ್ಥ, ಅದನ್ನು ಸರಿಪಡಿಸಿಕೊಳ್ಳಬೇಕು.

ಹಾಗೆಯೇ ನೀವು ಧ್ಯಾನ ಜೀವನಕ್ಕೆ ಬಂದ ನಂತರವೂ ಇನ್ನೂ ದುಃಖ ಪಡುತ್ತಿದ್ದೀರಿ ಎಂದರೆ ಕರ್ಮಗಳಿರಬಹುದು ಅಥವಾ ಹಲವು ಕಾರಣಗಳಿರಬಹುದು. ಅದಕ್ಕಾಗಿಯೇ ಎದ್ದ ಸಮಯದಿಂದ ರಾತ್ರಿ ಮಲಗುವವರೆಗೆ ಮಾತಿನ ಮೂಲಕವಾಗಲಿ ಅಥವಾ ಕೃತಿಯ ಮೂಲಕವಾಗಲಿ ನಿಮ್ಮಿಂದ ತಪ್ಪು ನಡೆಯಬಾರದು. ಹಾಗೆ ನಡೆದರೆ ಅದು ಧಾರ್ಮಿಕವಾದ ಜೀವನ ನಡೆಸುತ್ತಿರುವಂತೆ ಅಲ್ಲ. ಧಾರ್ಮಿಕವಾದ ಜೀವನದಲ್ಲಿ ದುಃಖ ಎಂದಿಗೂ ಇರುವುದಿಲ್ಲ, ಧಾರ್ಮಿಕ ಜೀವನ ನಡೆಸುವವನಿಗೆ ಧ್ಯಾನವು ಚೆನ್ನಾಗಿ ಸಿದ್ಧಿಸುತ್ತದೆ. ಕಾರಣ ಅವನು ಧರ್ಮಕ್ಕೆ ಬದ್ಧನಾಗಿದ್ದಾನೆ, ಹೇಗೆ ಬದುಕಬೇಕೋ ಹಾಗೆ ಬದುಕುತ್ತಿದ್ದಾನೆ, ಹೇಗೆ ಉಣ್ಣಬೇಕೋ ಹಾಗೆ ಉಣ್ಣುತ್ತಿದ್ದಾನೆ. ಅದೇ ಧಾರ್ಮಿಕವಾದ ಜೀವನ, ಅವನು ಧರ್ಮವನ್ನು ಕಲಿತವನು. ಯಾರಿಗೆ ಸತ್ಯದ ಮೇಲೆ ಆಸಕ್ತಿ ಇದೆಯೋ, ಅಂದರೆ ಆತ್ಮದ ಮೇಲೆ ಆಸಕ್ತಿ ಇದೆಯೋ, ಅಂತಹವನು ಧಾರ್ಮಿಕ ಜೀವನ ನಡೆಸುತ್ತಾನೆ. ಇದನ್ನೇ ಬುದ್ಧನು ಹೇಳಿದ್ದಾನೆ, ಪತ್ರಿಜೀ ಅವರು ಹೇಳಿದ್ದಾರೆ ಮತ್ತು ಮಹಾತ್ಮರು ಹೇಳಿದ್ದಾರೆ.

**"ನೀನು ಧರ್ಮವನ್ನು ರಕ್ಷಿಸಿದರೆ, ಆ ಧರ್ಮವೇ ದೈವವಾಗಿ ನಿನ್ನನ್ನು ರಕ್ಷಿಸುತ್ತದೆ"** ಎಂದು. ನಿನಗೆ ದೈವದ ಕೃಪೆ ಬೇಕೆಂದರೆ ಈ ಭೂಮಿಯ ಮೇಲೆ ಧಾರ್ಮಿಕವಾದ ಜೀವನ ನಡೆಸಬೇಕು, ಧರ್ಮದಿಂದ ಬದುಕಬೇಕು. ನೀವು ಧರ್ಮಯುತವಾಗಿ ಬದುಕಲು ಸಾಧ್ಯವಾದರೆ, ಧ್ಯಾನದಲ್ಲಿ ಪ್ರಗತಿಯನ್ನು ಸಾಧಿಸಬಹುದು. ಅದಕ್ಕಾಗಿಯೇ ಬುದ್ಧನು ಧರ್ಮದ ವಿಶಿಷ್ಟತೆಯನ್ನು ಅಷ್ಟು ದೊಡ್ಡದಾಗಿ ಹೇಳಿದ್ದಾನೆ – "ಧರ್ಮಂ ಶರಣಂ ಗಚ್ಛಾಮಿ" ಎಂದು. ಅಂದರೆ ಧರ್ಮವನ್ನು ಶರಣು ಹೋಗು, ಧರ್ಮದಲ್ಲಿ ಬದುಕು, ಧರ್ಮವಾಗಿಯೇ ಇರು ಎಂದು ಅರ್ಥ. ಧರ್ಮವಂತವಾದ ಜೀವನವೇ ದುಃಖವಿಲ್ಲದ ಸ್ಥಿತಿ ಎಂದು ಮಹಾತ್ಮರು ಹೇಳಿದ್ದಾರೆ. ಸದ್ಭಾವನೆಗಳು, ಸದಾಲೋಚನೆಗಳು ಮತ್ತು ಸೇವೆಯನ್ನು ಹೊಂದಿರುವವರು ಧರ್ಮವಂತ ಜೀವನವನ್ನು ನಡೆಸುತ್ತಾರೆ. ಕೆಟ್ಟ ಭಾವನೆಗಳು ಮತ್ತು ಕೆಟ್ಟ ಆಲೋಚನೆಗಳು ಇರುವವರು ಅಧರ್ಮದ ಹಾದಿಯಲ್ಲಿ ಬದುಕುತ್ತಾರೆ.

ಯಾವುದೇ ಆಗಲಿ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಇರುತ್ತದೆ; ಅದಕ್ಕಾಗಿ ಧ್ಯಾನ ಮಾಡಬೇಕು. ಶಕ್ತಿಯನ್ನು ಹೆಚ್ಚಿಸಿಕೊಳ್ಳದಿದ್ದರೆ ಸತ್ಯವನ್ನು ದರ್ಶಿಸಲು

ಸಾಧ್ಯವಿಲ್ಲ, ಧರ್ಮವನ್ನು ಆಚರಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಧನೆ ಮಾಡಿ ಶಕ್ತಿಯನ್ನು ಹೆಚ್ಚಿಸಿಕೊಂಡಾಗ ಏನು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಯುತ್ತದೆ. ನೀವು ಲೌಕಿಕ ಜೀವನದಲ್ಲಿ ಧರ್ಮದ ಹಾದಿಯಲ್ಲಿದ್ದರೆ, ಆಗ ನಿಮ್ಮ ಸಾಧನೆಯು ಸರಿಯಾಗಿ ಸಾಗುತ್ತದೆ. ಅಂತಹ ಧಾರ್ಮಿಕ ಜೀವನ ನಡೆಸಿದಾಗ ನಿಮ್ಮ ಧ್ಯಾನ ಸಾಧನೆಯು ಬಹಳ ಚನ್ನಾಗಿ ಕುದುರುತ್ತದೆ.

ಗುರುಗಳು "ಶ್ವಾಸದ ಮೇಲೆ ಗಮನ" (ಉಸಿರಾಟದ ಮೇಲೆ ಗಮನ) ಇಡಲು ಹೇಳಿದ್ದಾರೆ. ನಿಮ್ಮ ಮನಸ್ಸಿನ ಚಂಚಲ ಸ್ಥಿತಿಯನ್ನು ನಿಶ್ಚಲಗೊಳಿಸುವ ಶಕ್ತಿ ಹೊರಗೆಲ್ಲೂ ಇಲ್ಲ, ಅದು ಕೇವಲ "ಶ್ವಾಸದ ಮೇಲೆ ಗಮನ"ಕ್ಕೆ ಮಾತ್ರ ಇದೆ. ನಿಮ್ಮ ಶ್ವಾಸವೇ ನಿಮ್ಮ ಮನಸ್ಸನ್ನು ನಿಯಂತ್ರಿಸಬಲ್ಲದು.

ಗುರುಗಳು ಹೇಳಿದ್ದನ್ನು ಆಚರಿಸುವವನೇ ಧಾರ್ಮಿಕ ಜೀವನಕ್ಕೆ ಅರ್ಹನು ಮತ್ತು ಧರ್ಮವನ್ನು ಆಚರಿಸುವವನು. ಅವರು ಎಲ್ಲವನ್ನೂ ಅನುಭವಿಸಿ, ಶೋಧಿಸಿ ಈ ಧ್ಯಾನವು ಶ್ರೇಷ್ಠವಾದುದೆಂದು ಬೋಧಿಸಿದರು. ಆದ್ದರಿಂದ ಗುರುಗಳು ತೋರಿಸಿದ ಮಾರ್ಗದಲ್ಲಿ ಧಾರ್ಮಿಕ ಜೀವನ ನಡೆಸುತ್ತಾ, ಅಂದರೆ ಹಿಂಸೆಯನ್ನು ನಿಲ್ಲಿಸಿ "ಹಂಸ"ವನ್ನು (ಶ್ವಾಸವನ್ನು) ಹಿಡಿದು ದೈವತ್ವವನ್ನು ತಿಳಿಯುವ ಹಾದಿಯಲ್ಲಿ ಸಾಗಬೇಕು.

ಒಂದೇ ವಿಷಯ – ಧರ್ಮದ ಜೀವನ ನಡೆಸುವವನೇ ಧರ್ಮಾತ್ಮನಾಗುತ್ತಾನೆ ಮತ್ತು ಆ ಧರ್ಮಾತ್ಮನೇ ಸತ್ಯವನ್ನು ತಿಳಿಯುವ ಅರ್ಹತೆ ಪಡೆಯುತ್ತಾನೆ ಎಂದು ತಿಳಿದುಕೊಳ್ಳಬೇಕು.

**"ನೀನು ಧರ್ಮವನ್ನು ರಕ್ಷಿಸಿದರೆ, ಆ ಧರ್ಮವೇ ನಿನ್ನನ್ನು ದೈವದ ರೂಪದಲ್ಲಿ ರಕ್ಷಿಸುತ್ತದೆ"** ಎಂದು ಹಿರಿಯರು ಹೇಳಿದ್ದಾರೆ. ತಿರುಮಲದಲ್ಲಿ ಕೂಡ ಅನೇಕ ಕಡೆಗಳಲ್ಲಿ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಘೋಷವಾಕ್ಯವನ್ನು ಬರೆಯಲಾಗಿದೆ. ಹಾಗಾದರೆ, ದೈವದಂತೆ ರಕ್ಷಿಸಬೇಕಾದ ಧರ್ಮವನ್ನು ಆಚರಿಸಿದರೂ ನಮಗೆ ದುಃಖ ಏಕೆ ಬರುತ್ತದೆ? ಅಂದರೆ, ನೀವು ಖಂಡಿತವಾಗಿಯೂ ಧರ್ಮವನ್ನು ಪಾಲಿಸುತ್ತಿಲ್ಲ ಎಂದೇ ಅರ್ಥಮಾಡಿಕೊಳ್ಳಬೇಕು. ನಿಮ್ಮ ಜೀವನದಲ್ಲಿ ದುಃಖವಿದೆ ಎಂದರೆ, ನಾನು ಇನ್ನು ಧರ್ಮಯುತವಾದ ಜೀವನವನ್ನು ನಡೆಸುತ್ತಿಲ್ಲ ಎಂದು ತಿಳಿದುಕೊಳ್ಳಬೇಕು. ಧರ್ಮವನ್ನು ಆಚರಿಸುವುದು ಎಂದರೆ ನಿಮ್ಮಲ್ಲಿರುವ ಸತ್ಯವನ್ನು ತಿಳಿದುಕೊಳ್ಳುವುದು. ಯಾವಾಗ ನೀವು ಧರ್ಮವನ್ನು ಆಚರಿಸುತ್ತೀರೋ, ಆಗ ಸತ್ಯಕ್ಕೆ ಹತ್ತಿರವಾಗುತ್ತೀರಿ. ಧರ್ಮ ಎಂದರೆ ನೀವು ಬದುಕುವ ಒಂದು ಕಲೆ. ಇದನ್ನು ಬದುಕುವ ಕಲೆ ಎಂದು ಏಕೆ ಕರೆದರೆಂದರೆ, ನಮ್ಮ ಜೀವನ ವಿಧಾನವು ಧರ್ಮಬದ್ಧವಾಗಿರಬೇಕು.

ಪ್ರತಿ ವಿಷಯದಲ್ಲಿ, ಪ್ರತಿ ಕ್ಷಣವೂ ಧರ್ಮಯುತವಾದ ಜೀವನವನ್ನು ನಡೆಸಲು ಸಾಧ್ಯವಾದರೆ ಅದನ್ನೇ 'ಜೀವನ ಕಲೆ' ಎಂದು ಕರೆಯುತ್ತಾರೆ.

ನೀವು ಸಂತೋಷವಾಗಿರುತ್ತಾ, ಪಕ್ಕದವರನ್ನು ಕೂಡ ಸಂತೋಷವಾಗಿರುವಂತೆ ಮಾಡುವುದೇ ಧರ್ಮಯುತ ಜೀವನ. "ಮತ್ತೆ ಧರ್ಮಯುತ ಜೀವನ ನಡೆಸುತ್ತಿರುವ ನಮಗೆ ಕಷ್ಟಗಳು ಏಕೆ ಬರುತ್ತಿವೆ?" ಎಂದು ಪ್ರಶ್ನಿಸಿಕೊಂಡರೆ, ಅದಕ್ಕೆ "ಪೂರ್ವ ಜನ್ಮ ಕೃತಂ ಪಾಪಂ" (ಹಿಂದಿನ ಜನ್ಮದಲ್ಲಿ ಮಾಡಿದ ಪಾಪ) ಎಂದು ಹೇಳಲಾಗಿದೆ. ಪತ್ರೀಜಿಯವರು ಕೂಡ "ಸಣ್ಣ ಸಣ್ಣ ಪಾಪಗಳನ್ನು ಮಾಡಿದರೆ ಸಣ್ಣ ಸಣ್ಣ ರೋಗಗಳು, ದೊಡ್ಡ ಪಾಪಗಳನ್ನು ಮಾಡಿದರೆ ದೊಡ್ಡ ರೋಗಗಳು ಬರುತ್ತವೆ; ಅಸಲು ಪಾಪವೇ ಇಲ್ಲದಿದ್ದರೆ ರೋಗವೇ ಇರುವುದಿಲ್ಲ" ಎಂದು ಹೇಳಿದ್ದಾರೆ.

ಇನ್ನೂ ಕಷ್ಟಗಳು, ಕಣ್ಣೀರು ಇವೆ ಎಂದರೆ, "ಇವು ನಾನು ಕಳೆದ ಜನ್ಮದಲ್ಲಿ ಮಾಡಿದ ಕರ್ಮದ ಫಲಗಳು" ಎಂದು ತಿಳಿದುಕೊಳ್ಳಬೇಕು. ಇವುಗಳನ್ನು ಈ ಜನ್ಮದಲ್ಲಿ ಅನುಭವಿಸಿದರೆ ತೀರಿಹೋಗುತ್ತವೆ ಎಂದು ಭಾವಿಸಿ, ಎಷ್ಟೇ ಕಷ್ಟಗಳು ಬಂದರೂ ನಾನು ಧರ್ಮಬದ್ಧವಾಗಿಯೇ ಬದುಕುತ್ತೇನೆ ಎಂದು ನಿರ್ಧರಿಸಿದರೆ ಆ ಕಷ್ಟಗಳನ್ನು ನೀವು ಜಯಿಸಬಹುದು. ಆದರೆ, ಆ ಕಷ್ಟಗಳನ್ನು ತಾಳಲಾರದೆ ಮತ್ತೆ ಅಧರ್ಮದ ಹಾದಿ ಹಿಡಿದರೆ ಹೊಸ ಕರ್ಮಗಳು ಬೆನ್ನತ್ತುತ್ತವೆ.

ಕಷ್ಟಗಳಲ್ಲೂ ಸಂತೋಷವಾಗಿರುತ್ತಾ, ಧರ್ಮದಿಂದ ಬದುಕಲು ಸಾಧ್ಯವಾದಾಗಲೇ ಮನುಷ್ಯನಿಗೆ ತೃಪ್ತಿ ಸಿಗುತ್ತದೆ. ಈಗ ನೋಡಿ, ನೀವು ಯಾರನ್ನಾದರೂ ಮೋಸ ಮಾಡಿದಿರಿ ಎಂದರೆ ಒಂದು ವೇಳೆ ನೀವು ತಪ್ಪು ದಾರಿಯಲ್ಲಿ ನಡೆದರೆ, ಅಲ್ಲಿಂದ ಮುಂದೆ ನಿಮಗೆ ಪ್ರಶಾಂತತೆ ಇರುವುದಿಲ್ಲ, ತೃಪ್ತಿಯು ಮರೆಯಾಗುತ್ತದೆ. ನೀವು ನಷ್ಟ ಅನುಭವಿಸಿದರೂ ಅಥವಾ ಕಷ್ಟಪಟ್ಟರೂ ಸಹ, ಧರ್ಮವಂತ ಜೀವನವನ್ನು ನಡೆಸಿದರೆ ಆ ಸಂತೋಷವೇ ಬೇರೆಯಾಗಿರುತ್ತದೆ.

ಧರ್ಮಯುತವಾಗಿ ಬದುಕಿದಾಗ ಆನಂದ ಏಕೆ ಬರುತ್ತದೆ? ಏಕೆಂದರೆ ಅಂತಹ ಜೀವನವನ್ನು ಭಗವಂತನು ಮೆಚ್ಚುತ್ತಾನೆ. ಭಗವಂತನು ಯಾವುದೇ ಪ್ರಾಣಿಗೆ ನೀಡದ 'ಬುದ್ಧಿ'ಯನ್ನು ಮಾನವನಿಗೆ ನೀಡಿದ್ದಾನೆ. ಆ ಬುದ್ಧಿಯ ಮೂಲಕ ನಿತ್ಯ ಮತ್ತು ಅನಿತ್ಯ ವಸ್ತುಗಳ ವಿವೇಚನೆ ಅಂದರೆ ಯಾವುದು ಸತ್ಯ, ಯಾವುದು ಅಸತ್ಯ, ಯಾವುದು ಶಾಶ್ವತ ಮತ್ತು ಯಾವುದು ತಾತ್ಕಾಲಿಕ ಎಂದು ಗ್ರಹಿಸುವ ವಿವೇಚನೆ ನಿಮಗೆ ಬರಬೇಕು. ಬುದ್ಧಿಯಿಂದ ವಿಚಾರ ಮಾಡಿದಾಗ ಮಾತ್ರ ಇಂತಹ ವಿವೇಚನೆ ಸಿದ್ಧಿಸುತ್ತದೆ.

ಈ ಧ್ಯಾನ ಮಾರ್ಗಕ್ಕೆ ಬಂದ ನೀವು ಗುರುಗಳ ಮೂಲಕ ಕರ್ಮ ಸಿದ್ಧಾಂತವನ್ನು

ಕಲಿತಾಗ, "ಒಂದು ತಪ್ಪು ಕೆಲಸ ಮಾಡಿದರೂ ಅಥವಾ ಒಂದು ಪಾಪದ ಕೆಲಸ ಮಾಡಿದರೂ ಅದು ಅಧರ್ಮದ ಕೆಲಸ; ನಾನು ಅಧರ್ಮದಿಂದ ಬದುಕಬಾರದು" ಎಂದು ತಿಳಿದು ಧರ್ಮದ ಹಾದಿಯಲ್ಲಿ ಬದುಕಿದಾಗ ಮಾತ್ರ ಆನಂದ ಲಭಿಸುತ್ತದೆ. ಇರುವುದರಲ್ಲೇ ತೃಪ್ತಿಯಿಂದ ಬದುಕುತ್ತಾ, ಪಕ್ಕದವರು ಕೂಡ ಆನಂದವಾಗಿರುವಂತೆ ಪ್ರಯತ್ನಿಸಬೇಕು. ಅನೇಕರು ತಾವು ಮಾತ್ರ ಆನಂದವಾಗಿರಬೇಕು ಎಂದು ಬಯಸುತ್ತಾರೆ ಆದರೆ ಪಕ್ಕದವರು ಆನಂದವಾಗಿರಬೇಕೆಂದು ಅಂದುಕೊಳ್ಳುವುದಿಲ್ಲ. ಅಂತಹ ಜೀವನವು ಧರ್ಮವಂತ ಜೀವನವಲ್ಲ. ಸತ್ಯವನ್ನು ಅಂದರೆ ಆತ್ಮವನ್ನು ದರ್ಶಿಸಬೇಕೆಂದರೆ ಧರ್ಮವಂತ ಜೀವನ ಅತ್ಯಗತ್ಯ.

ನೀವು ಧರ್ಮವಂತ ಜೀವನ ನಡೆಸಬೇಕೆಂದರೆ ಹಗೆತನ, ಪ್ರತೀಕಾರ ಮತ್ತು ದ್ವೇಷಗಳು ಎಂದಿಗೂ ಇರಬಾರದು. ಸಹಜವಾಗಿ ಕೆಲವರು ಇತರರು ತಮಗೆ ಹಾನಿ ಮಾಡಿದಾಗ ಅಥವಾ ಅನ್ಯಾಯ ಮಾಡಿದಾಗ ಅವರ ಮೇಲೆ ಕೋಪದಿಂದ ಕುದಿಯುತ್ತಾರೆ. "ಅವನ ಮೇಲೆ ಯಾವಾಗ ಸೇಡು ತೀರಿಸಿಕೊಳ್ಳಲಿ?" ಎಂದು ಯೋಚಿಸುತ್ತಾರೆ. ಆದರೆ ಅವನು ಯಾವುದೋ ಅಜ್ಞಾನದಿಂದ ತಪ್ಪು ಮಾಡಿದ್ದಾನೆ, ನಮಗೆ ಜ್ಞಾನವಿರುವಾಗ ಅವನ ಮೇಲೆ ಪ್ರತೀಕಾರ ತೀರಿಸಿಕೊಂಡು ಮತ್ತೆ ಹೊಸ ಕರ್ಮಗಳನ್ನು ಏಕೆ ಮೈಮೇಲೆ ಎಳೆದುಕೊಳ್ಳಬೇಕು? ನಾನು ಕಳೆದ ಜನ್ಮದಲ್ಲಿ ಅವನಿಗೆ

ನಾನು ಯಾವುದೋ ಅನ್ಯಾಯ ಮಾಡಿರಬಹುದು, ಅದಕ್ಕೇ ಈ ಜನ್ಮದಲ್ಲಿ ಅವನೊಂದಿಗೆ ನನಗೆ ವಿರೋಧ ಉಂಟಾಗಿದೆ, ಅದಕ್ಕೇ ಅವನು ಹೀಗಿದ್ದಾನೆ" ಎಂದು ಶಾಂತವಾಗಿ ಇರಬೇಕು. ಹಗೆ, ಪ್ರತಿಕಾರ ಇಲ್ಲದಿದ್ದರೆ ಧರ್ಮವನ್ನು ರಕ್ಷಿಸಿದಂತಾಗುತ್ತದೆ.

ನಿಮಗೆ ಮಹಾಭಾರತದಲ್ಲಿ ನಡೆದ ಒಂದು ಸಣ್ಣ ಘಟನೆಯನ್ನು ಹೇಳುತ್ತೇನೆ. ಧರ್ಮರಾಜನನ್ನು 'ಧರ್ಮರಾಜ' ಎಂದು ಏಕೆ ಕರೆದರು? ಎನ್ನುವುದನ್ನು ತಿಳಿದುಕೊಳ್ಳೋಣ. ಪಾಂಡವರು ವನವಾಸ ಮಾಡುವ ಸಮಯದಲ್ಲಿ ಕೌರವರು ಪಾಂಡವರನ್ನು ನೋಡಲು ಬಂದರಂತೆ. ಹಾಗೆ ಬಂದಾಗ ಅವರು (ಪಾಂಡವರು) ಬಹಳ ಸುಖವಾಗಿ ಇರುವುದನ್ನು ನೋಡಿ ಅವರ ಮೇಲೆ ಕೌರವರಿಗೆ ತುಂಬಾ ಅಸೂಯೆ ಉಂಟಾಯಿತು. ಅಲ್ಲಿ ಒಂದು ಕೊಳವಿತ್ತು, ಆ ಕೊಳವು ಗಂಧರ್ವರದಾಗಿತ್ತು. ದುರ್ಯೋಧನನು ಅಣ್ಣತಮ್ಮಂದಿರ ಜೊತೆಗೂಡಿ ಆ ಕೊಳದಲ್ಲಿ ಸ್ನಾನ ಮಾಡಿ, ಇಷ್ಟಬಂದಂತೆ ಅಬ್ಬರಿಸಿ ಹೊರಬಂದರು.

ಮತ್ತೆ ಗಂಧರ್ವರು ಸುಮ್ಮನಿರುತ್ತಾರೆಯೇ? ಬಂದು ಕೌರವರನ್ನು ಬಂಧಿಸಿ

ಗಂಧರ್ವ ಲೋಕಕ್ಕೆ ಕರೆದೊಯ್ಯುವಾಗ ಆ ವಿಷಯ ಧರ್ಮರಾಜನಿಗೆ ತಿಳಿಯಿತು. ಆಗ ಭೀಮನಿಗೆ "ಕೌರವರನ್ನು ಬಿಡಿಸಿಕೊಂಡು ಬಾ" ಎಂದು ಹೇಳುತ್ತಾನೆ. ಆಗ ಭೀಮನು "ಅದೇನಣ್ಣಾ, ಅವರು ನಮ್ಮ ಶತ್ರುಗಳು, ನಮಗೆ ಎಷ್ಟೋ ಕಷ್ಟಗಳನ್ನು ಕೊಡುತ್ತಿದ್ದಾರೆ, ಅವರ ಮೇಲೆ ನೀನು ದಯೆ ತೋರಿಸುತ್ತೀಯಲ್ಲ ಏಕೆ?" ಎಂದು ಕೇಳಿದಾಗ, ಧರ್ಮರಾಜನು "ಯಾರೇ ಆಗಲಿ ಅವರು ಆಪತ್ತಿನಲ್ಲಿದ್ದಾರೆ, ಆಪತ್ತಿನಲ್ಲಿ ಇರುವವರನ್ನು ರಕ್ಷಿಸುವುದು ಕ್ಷತ್ರಿಯ ಧರ್ಮ. ನಾನು ಕ್ಷತ್ರಿಯನು, ನನ್ನ ಎದುರಿರುವವರು ಆಪತ್ತಿನಲ್ಲಿದ್ದಾಗ ರಕ್ಷಿಸಬೇಕು. ಆದ್ದರಿಂದ ನಾವು ಇರುವಲ್ಲಿ ಅವರನ್ನು ರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ" ಎಂದು ಭೀಮನನ್ನು ಕಳುಹಿಸಿ ಕೌರವರನ್ನು ರಕ್ಷಿಸುವುದು ನಡೆಯಿತು. ಇಲ್ಲಿ ನೀವು ಗಮನಿಸಿದರೆ, ಧರ್ಮರಾಜನು "ಇವರಿಗೆ ಭಲೇ ಶಿಕ್ಷೆಯಾಯಿತು" ಎಂದು ಕೌರವರ ಮೇಲೆ ಹಗೆ, ಪ್ರತಿಕಾರ ತೀರಿಸಿಕೊಳ್ಳದೆ ತನ್ನ ಧರ್ಮವೇನು? ಎಂಬುದನ್ನು ನಿರ್ವಹಿಸಿದನು, ಅದಕ್ಕೇ ಆತ ಧರ್ಮರಾಜನಾದನು.

ಧರ್ಮವನ್ನು ಆಚರಿಸಬೇಕೆಂದರೆ ಹಗೆ, ಪ್ರತಿಕಾರ ಎನ್ನುವವು ಇರಬಾರದು. ಹಾಗೆ ಯಾವಾಗ ಇರಲು ಸಾಧ್ಯವೆಂದರೆ ನಿಮ್ಮ ಮನಸ್ಸು ನಿರ್ಮಲವಾಗಿದ್ದಾಗ ಮಾತ್ರ. ಟಿವಿ9 ನಲ್ಲಿ ಪತ್ರೀಜಿಯವರ ಬಗ್ಗೆ ಪ್ರಸಾರವಾದಾಗ ಅವರು ಎಷ್ಟೋ ಸಹನೆಯಿಂದ ಇದ್ದರು, ಯಾಕೆಂದರೆ "ಅವನು ನೀಚ ಸ್ವಭಾವದವನು, ಎದುರಿಗಿರುವ ಮನುಷ್ಯನ ಮೇಲೆ ಕೆಸರು ಚೆಲ್ಲುವುದು ಅವನ ಧರ್ಮ, ಆದರೆ ನಾನು ಯೋಗಿಯಾದ್ದರಿಂದ ಎಲ್ಲರನ್ನೂ ಕ್ಷಮಿಸುವುದು ನನ್ನ ಧರ್ಮ" ಎಂದು ಅಂದುಕೊಂಡರಾಗಲಿ, ಅವರು ಒಂದು ಮಾತನ್ನೂ ಆಡಲಿಲ್ಲ, ಮೌನವಾಗಿ ಇದ್ದರು.

ಆ ಸಂದರ್ಭದಲ್ಲಿ ಪತ್ರೀಜಿಯವರು ನನ್ನೊಂದಿಗೆ ಒಂದು ವಿಷಯ ಹೇಳಿದರು "ಮೂರ್ಖರು ನಿಮ್ಮ ಎದುರಿಗೆ ಇದ್ದಾಗ ನೀವು ಅವರನ್ನು ಏನೂ ಮಾಡದಿದ್ದರೂ ಅಕಾರಣವಾಗಿ ಬಾಧಿಸುತ್ತಿದ್ದಾರೆ ಅಂದರೆ ಅವರನ್ನು ಬಿಟ್ಟುಬಿಡಬೇಕು ಎಂದರು. ಏಕೆಂದರೆ ಅವರು ಅಜ್ಞಾನದಿಂದ, ಮೂರ್ಖತನದಿಂದ ಇದ್ದಾರೆ. ಅವರು ಆ ರೀತಿ ಇರಲು ಕಾರಣ ಅವರ ಗುಣ, ಅವರ ಮನಸ್ಸು ಅಶುದ್ಧವಾಗಿದೆ, ಅವರು ಧರ್ಮಬದ್ಧವಾಗಿ ಬದುಕುತ್ತಿಲ್ಲ" ಎಂದು ಹೇಳಿದರು.

ಪತ್ರೀಜಿಯವರನ್ನು ನೋಡಿ, ತಾವು ಧರ್ಮದಲ್ಲಿ ಬದುಕುತ್ತಾ ಸಹಜೀವಿಗಳನ್ನು ಕೂಡ ರಕ್ಷಿಸಬೇಕು ಎಂಬ ಉದ್ದೇಶದಿಂದ ನಮ್ಮೆಲ್ಲರಿಗೂ ಶಾಖಾಹಾರದ ಬಗ್ಗೆ ಎಷ್ಟೋ ಬೋಧಿಸಿದರು, ಅದು ಅವರ ಧರ್ಮವೆಂದು ಭಾವಿಸಿದರು. ಮಾನವ ಧರ್ಮ ಅಂದರೆ ಏನು? ಮಾನವನಾಗಿ ಹುಟ್ಟಿದ ಪ್ರತಿಯೊಬ್ಬರೂ ತಾನು ಯಾರೆಂದು

ತಿಳಿಯಬೇಕು, ಭಗವಂತ ಯಾರೆಂದು ತಿಳಿಯಬೇಕು. ಕೊನೆಗೆ ತಾನೇ ಭಗವಂತ ಎಂದು ತಿಳಿದುಕೊಳ್ಳಬೇಕು, ಇದೇ ಮಾನವಧರ್ಮ. ಪತ್ರೀಜಿಯವರು ಧರ್ಮದಲ್ಲಿ ಬದುಕಿದ್ದರಿಂದ ಅವರ ಮೂಲಕ ಕ್ಷಮಿಸುವುದು ಅಂದರೆ ಏನು ಎಂದು ಕಲಿತರು. ಸಹಜೀವಿಗಳು ಕೂಡ ಆತ್ಮಸ್ವರೂಪಿಗಳೇ ಎಂದು ತಿಳಿದುಕೊಂಡು, ಅವುಗಳಿಗೂ ಬದುಕುವ ಹಕ್ಕಿದೆ, ಅವುಗಳನ್ನು ರಕ್ಷಿಸುವುದು ಮಾನವಧರ್ಮ ಎಂದು ತಿಳಿದುಕೊಂಡರು. ಈ ಸೃಷ್ಟಿಯಲ್ಲಿ ಎಲ್ಲಾ ಜೀವಿಗಳಿಗಿಂತ ಶಕ್ತಿವಂತನಾದ ಮಾನವನು, ಮಿಕ್ಕ ಎಲ್ಲಾ ಜೀವಿಗಳನ್ನು ರಕ್ಷಿಸಬೇಕು ಎಂದು ಪತ್ರೀಜಿಯವರು ತಿಳಿಸಿದರು. ಮನಸ್ಸನ್ನು ನಿರ್ಮಲವಾಗಿ ಇಟ್ಟುಕೊಂಡರೆ ಪ್ರೇಮ, ದಯೆ, ಸಮಭಾವ, ಸಹಾನುಭೂತಿ ಎಂಬ ಲಕ್ಷಣಗಳು ಬರುತ್ತವೆ. ಸಹಜೀವಿಗಳನ್ನು ಪ್ರೀತಿಸಬೇಕು. ಏಕೆಂದರೆ? ಅವು ಕೂಡ ನಿಮ್ಮಂತೆಯೇ ಆ ಪರಮಾತ್ಮ ಸ್ವರೂಪಿಗಳೇ ಎಂದು ನೀವು ಪತ್ರಿಜಿಯವರ ಹತ್ತಿರ ತಿಳಿದುಕೊಂಡಿರಿ.

ಅಂತೆಯೇ, ನಿನಗಿಂತ ಕೆಳಗಿನವರ ಮೇಲೆ ಕರುಣೆ ತೋರಿಸಬೇಕು. ಅಂದರೆ, ಎದುರಿಗಿರುವವರು ನಿನಗಿಂತ ಹಣದಲ್ಲಿ ಅಥವಾ ಅಧಿಕಾರದಲ್ಲಿ ಅಶಕ್ತರಾಗಿದ್ದರೆ, ದಯೆಯಿಂದ ಅವರಿಗೆ ಸ್ವಲ್ಪ ಸಹಾಯ ಮಾಡಬೇಕು. ಅದರಂತೆ, "ನಾನೇ ದೊಡ್ಡವನು" ಎಂದು ಅನೇಕರು ಅಂದುಕೊಳ್ಳುತ್ತಿರುತ್ತಾರೆ. ಆದರೆ ಎಲ್ಲರೂ ಆತ್ಮಗಳೇ ಎಂದು ನೀನು ತಿಳಿದುಕೊಂಡ ದಿನ, ಎಲ್ಲರ ಮೇಲೆ ಸಮಾನ ಭಾವನೆಯನ್ನು ತೋರಿಸುತ್ತೀಯ. ಯಾರಿಗಾದರೂ ಕಷ್ಟ ಬಂದಾಗ, "ಅಯ್ಯೋ, ಇವರು ಅಜ್ಞಾನದಿಂದ ತಪ್ಪುಗಳನ್ನು ಮಾಡಿ, ಪಾಪಗಳನ್ನು ಮಾಡಿ ಕಷ್ಟಕ್ಕೀಡಾಗುತ್ತಿದ್ದಾರೆ" ಎಂದು ಸಹಾನುಭೂತಿ ತೋರಿಸಬೇಕು. ಇಂತಹ ಗುಣಗಳು ಯಾವಾಗ ಬರುತ್ತವೆ ಎಂದರೆ, ಮನಸ್ಸನ್ನು ನಿರ್ಮಲವಾಗಿ ಇಟ್ಟುಕೊಂಡ ದಿನದಂದು ಇಂತಹ ಧರ್ಮಗಳನ್ನು ಆಚರಿಸುತ್ತಾರೆ.

ಇನ್ನೂ ಕೆಲವರು ಮೂರ್ಖರು, ಪಕ್ಕದವರು ನಾಶವಾದರೂ ಪರವಾಗಿಲ್ಲ ಎಂದು ಅವರನ್ನು ಪೀಡಿಸುತ್ತಾರೆ. ಇದು ಕೂಡ ಅಧರ್ಮದ ಲಕ್ಷಣ. ಇಂತಹವರು ಪಕ್ಕದವರ ಬಗ್ಗೆ ಯೋಚಿಸುವುದೇ ಇಲ್ಲ. ಆದರೆ ಪಕ್ಕದವರ ಬಗ್ಗೆ ಯೋಚಿಸುವ ಬುದ್ಧಿ ಕೇವಲ ಮಾನವನಿಗೆ ಮಾತ್ರ ಇದೆ, ಉಳಿದ ಯಾವ ಜೀವಿಗಳಿಗೂ ಇಲ್ಲ. ಮನಸ್ಸು ಅಶುದ್ಧವಾಗಿದ್ದರೆ ಅಧರ್ಮದಲ್ಲಿ ಇರುತ್ತಾರೆ, ಮನಸ್ಸು ಶುದ್ಧವಾಗಿದ್ದರೆ ಧರ್ಮವಂತ ಜೀವನವನ್ನು ನಡೆಸುತ್ತಾರೆ. ನಿಮ್ಮ ಮನಸ್ಸು ಶುದ್ಧವಾಗಿದ್ದಾಗ ಪಕ್ಕದವರ ಮೇಲೆ ಪ್ರೀತಿ, ಕರುಣೆ ಮತ್ತು ಸಹಾನುಭೂತಿ ತೋರಿಸುತ್ತೀರಿ, ಅಂದರೆ ಧರ್ಮವನ್ನು ಆಚರಿಸುತ್ತೀರಿ. ಒಂದು ವೇಳೆ ಮನಸ್ಸು ಅಶುದ್ಧವಾಗಿದ್ದರೆ ಹಗೆತನ,

ಸೇಡು ಮತ್ತು ದ್ವೇಷದೊಂದಿಗೆ ಇರುತ್ತೀರಿ. ಧರ್ಮವು ನಮಗೆ ಏನು ಕಲಿಸುತ್ತದೆ ಎಂದರೆ ಸಹಜೀವಿಗಳೊಂದಿಗೆ ಹೇಗಿರಬೇಕು? ಉಳಿದ ಪ್ರಾಣಿ–ಪಕ್ಷಿಗಳೊಂದಿಗೆ ಹೇಗೆ ವರ್ತಿಸಬೇಕು? ಒಂದು ಒಳ್ಳೆಯ ಜೀವನವನ್ನು ಹೇಗೆ ನಡೆಸಬೇಕು? ಎಂಬ ವಿಷಯಗಳನ್ನು ಕಲಿಸುತ್ತದೆ.

ಉಳಿದ ಜೀವಿಗಳು ಕೂಡ ನನ್ನಂತೆಯೇ ಆ ಪರಮಾತ್ಮನಿಂದ ಆತ್ಮವಾಗಿ ಭೂಮಿಯ ಮೇಲೆ ಬಂದವುಗಳೇ. ದೇಹಗಳು ಬೇರೆಯಾಗಿ ಕಾಣಿಸುತ್ತವೆಯೇ ಹೊರತು ಎಲ್ಲರೂ ಒಂದೇ. ನೀವು ಆತ್ಮ ಎಂಬ ಅರಿವು ನಿಮಗಿದೆ. ಹಾಗೆಯೇ ಆತ್ಮವಾದ ನೀವು ಭಗವಂತನೆಂದು ತಿಳಿದುಕೊಳ್ಳಬೇಕೆಂದರೆ ಧರ್ಮಯುತವಾಗಿ ಬದುಕಬೇಕು. ಧರ್ಮಯುತವಾಗಿ ಬದುಕಿದ ದಿನ ಶಾಂತಿಯನ್ನು ಪಡೆಯುತ್ತೀರಿ. ಶಾಂತಿಯನ್ನು ಪಡೆಯಬೇಕೆಂದರೆ ಎದುರಿಗಿರುವವರನ್ನು ನೋಯಿಸದೆ ಇರಬೇಕು. ಅಜ್ಞಾನದಿಂದ, ಅಹಂಕಾರದಿಂದ ಎದುರಿನವರನ್ನು ನೋಯಿಸಿದರೆ ಆತ್ಮಕ್ಕೆ ವೇದನೆಯಾಗುತ್ತದೆ. ನೀವು ಸುಖವಾಗಿ ಬದುಕುವುದು ಮಾತ್ರವಲ್ಲದೆ, ಪಕ್ಕದವರೂ ಸಹ ಸುಖವಾಗಿ ಬದುಕುವಂತೆ ಮಾಡುವುದೇ ಧರ್ಮ; ಅದೇ ಪರಿಪೂರ್ಣವಾದ ಶುದ್ಧತ್ವ.

ಪರಿಪೂರ್ಣವಾದ ಶುದ್ಧತ್ವ ಎಂಬುದು ಒಂದೇ ದಿನದಲ್ಲಿ ಬರುವುದಿಲ್ಲ. ಧರ್ಮಯುಕ್ತ ಜೀವನವನ್ನು ನಡೆಸುತ್ತಾ, ದಿನನಿತ್ಯ ನಿಮ್ಮ ಮನಸ್ಸಿನ ಕೊಳಕು ಭಾವನೆಗಳನ್ನು ಧ್ಯಾನದ ಮೂಲಕ ಹೋಗಲಾಡಿಸಿಕೊಳ್ಳಬೇಕು. ಪ್ರತಿದಿನ ಸಾಧನೆ ಮಾಡುತ್ತಿರುವ ನೀವು ರಾವಣಾಸುರನಂತಾಗಲಿ ಅಥವಾ ಕುಂಭಕರ್ಣನಂತಾಗಲಿ ಇರಬಾರದು; ಕನಿಷ್ಠ ವಿಭೀಷಣನಂತೆ ಬದಲಾಗಬೇಕು. ಏಕೆಂದರೆ, ವಿಭೀಷಣನು ಕೆಟ್ಟದ್ದನ್ನು ಮಾಡಬಾರದು ಎಂದು ಹೇಳಿದವನು. ಧ್ಯಾನ ಮಾಡುತ್ತಿರುವ ಪ್ರತಿಯೊಬ್ಬರೂ ಪರಿಪೂರ್ಣ ಶುದ್ಧತ್ವವನ್ನು ತಲುಪಲಾರರು. ಯಾವ ಕ್ಷಣದಲ್ಲಿ ನಿಮ್ಮ ಮನಸ್ಸು ಧರ್ಮಕ್ಕೆ ಬದ್ಧವಾಗುತ್ತದೆಯೋ, ಯಾವಾಗ ನೀವು ಧರ್ಮಯುಕ್ತ ಜೀವನವನ್ನು ನಡೆಸುತ್ತೀರೋ, ಆಗಲೇ ನೀವು ಪರಿಪೂರ್ಣ ಶುದ್ಧತ್ವವನ್ನು ತಲುಪಿದಂತೆ. ಧರ್ಮವನ್ನು ಬೋಧಿಸುವವರಿಗೆ ಪ್ರಕೃತಿಯ ಸಹಕಾರ ಸದಾ ಇರುತ್ತದೆ. ಏಕೆಂದರೆ ಧರ್ಮವನ್ನು ಬೋಧಿಸುವುದೆಂದರೆ ಸತ್ಯಕ್ಕೆ ಹತ್ತಿರವಾಗುವುದು ಎಂದರ್ಥ. ಬಾಹ್ಯವಾಗಿ ಪ್ರಕೃತಿಯು ನಮಗೆ ಹೆಜ್ಜೆಹೆಜ್ಜೆಗೂ ಸಹಕರಿಸುತ್ತಾ, ನಮ್ಮ ಜೀವನದಲ್ಲಿ ಒಳ್ಳೆಯ ಫಲಿತಾಂಶಗಳು ಬರುವಂತೆ ನೋಡಿಕೊಳ್ಳುತ್ತದೆ. ನಾವು ಧರ್ಮವನ್ನು ಆಚರಿಸಿದಾಗ ಮಾತ್ರ ಇತರರಿಗೆ ಧೈರ್ಯವಾಗಿ ಬೋಧಿಸಬಲ್ಲೆವು. ಅದಕ್ಕಾಗಿಯೇ ಹಿರಿಯರು "ಆಚರಿಸಿ ಹೇಳುವವನೇ ಆಚಾರ್ಯ" ಎಂದು

ಹೇಳಿದ್ದಾರೆ. ಈ ಮಾರ್ಗಕ್ಕೆ ಬಂದವರೆಲ್ಲರೂ "ಧ್ಯಾನ ಮಾಡಿ, ಮಾಂಸಾಹಾರವನ್ನು ತ್ಯಜಿಸಿ" ಎಂದು ಎಲ್ಲರಿಗೂ ಹೇಳುತ್ತಿರುತ್ತಾರೆ. ಆದರೆ ತಾನು ಆಚರಿಸದೆ ಯಾವುದೇ ವಿಷಯವನ್ನು ಇತರರಿಗೆ ಬೋಧಿಸಿದಾಗ ಪ್ರಕೃತಿಯು ಅದನ್ನು ಒಪ್ಪುವುದಿಲ್ಲ.

ನೀವು ಧ್ಯಾನಮಯ ಹಾಗೂ ಧರ್ಮಮಯ ಜೀವನವನ್ನು ನಡೆಸಲು ಪ್ರಾರಂಭಿಸಿದಾಗಿನಿಂದ ಪ್ರಕೃತಿಯು ನಿಮ್ಮನ್ನು ತಾಯಿಯಂತೆ ಕಾಪಾಡುತ್ತದೆ. ಅದಕ್ಕಾಗಿಯೇ ಯಾವಾಗಲೂ ಪ್ರಕೃತಿಯನ್ನು ತಾಯಿಗೆ ಹೋಲಿಸುತ್ತಾರೆ, ಸ್ತ್ರೀ ತತ್ವಕ್ಕೆ ಹೋಲಿಸುತ್ತಾರೆ. ಅಂದರೆ ನಿಮ್ಮನ್ನು ಕಾಪಾಡುವುದು, ಬಾಲ್ಯದಿಂದಲೂ ಸಾಕಿ ಸಲಹುವುದು ತಾಯಿ. ಅದೇ ರೀತಿ ಪ್ರಕೃತಿಯು ನಮ್ಮ ಬಾಹ್ಯ ಅಗತ್ಯಗಳನ್ನೆಲ್ಲಾ ತೀರಿಸಲು ಯಾವಾಗಲೂ ಸಿದ್ಧವಾಗಿರುತ್ತದೆ. ಯಾವ ಕ್ಷಣದಲ್ಲಿ ನೀವು ಧರ್ಮಾಚರಣೆಯನ್ನು ಪ್ರಾರಂಭಿಸುತ್ತೀರೋ, ಅಂದಿನಿಂದ ನಿಮಗೆಲ್ಲವೂ ವಿಜಯಗಳೇ ಆಗುತ್ತವೆ; ಪರಾಜಯವಾಗಲಿ, ಅಪಜಯವಾಗಲಿ ಇರುವುದಿಲ್ಲ. ಧರ್ಮವಾಗಿ ಬದುಕುವವನು ಮೊದಲನೆಯದಾಗಿ ಸತ್ಯಕ್ಕೆ ಹತ್ತಿರವಾಗುತ್ತಾನೆ, ಎರಡನೆಯದಾಗಿ ಧೈರ್ಯವಂತ ಜೀವನ ನಡೆಸುತ್ತಾನೆ, ಮೂರನೆಯದಾಗಿ ಆನಂದಮಯ ಜೀವನವನ್ನು ಅನುಭವಿಸುತ್ತಾನೆ. ಅದಕ್ಕಾಗಿಯೇ ಧರ್ಮನಿಷ್ಠರಾಗಿ, ಆನಂದವಾಗಿರುವವರ ಸುತ್ತಮುತ್ತ ಇರಲು ಎಲ್ಲರೂ ಇಷ್ಟಪಡುತ್ತಾರೆ.

ಆದರೆ ಅಧರ್ಮಿಯನ ನೆರಳನ್ನು ಕೂಡ ಸ್ಪರ್ಶಿಸಲು ಯಾರೂ ಇಷ್ಟಪಡುವುದಿಲ್ಲ. ಹಾಗಾದರೆ ಈ ಭೂಮಿಯ ಮೇಲೆ ಧರ್ಮದ ಮೌಲ್ಯ ಎಂತಹುದು ಎಂಬುದನ್ನು ತಿಳಿದುಕೊಳ್ಳಬೇಕು. ಕೆಲವರು ಹೇಳುತ್ತಾರೆ, ಅಧರ್ಮವಾಗಿರುವವರ ಸುತ್ತಲೂ ಜನರು ಸೇರಿದರೂ ಅದು ತಾತ್ಕಾಲಿಕ ಎಂದು. ಅದು ಕೇವಲ ತಾತ್ಕಾಲಿಕ ಆನಂದಗಳು, ತಾತ್ಕಾಲಿಕ ಭೋಗಗಳು ಮತ್ತು ತಾತ್ಕಾಲಿಕ ಸಂತೋಷಗಳನ್ನು ಮಾತ್ರ ನೀಡುತ್ತದೆ. ನೀವು ಗಮನಿಸಿ ನೋಡಿ: "ಧರ್ಮಕ್ಕೆ ಆಯಸ್ಸು ಬಹಳ ದೊಡ್ಡದು, ಅಧರ್ಮಕ್ಕೆ ಆಯಸ್ಸು ಬಹಳ ಚಿಕ್ಕದು." ಅಧರ್ಮಿಯು ತಾತ್ಕಾಲಿಕವಾಗಿ ಜಯಗಳಿಸಿದರೂ, ಶಾಶ್ವತವಾದ ದುಃಖದಲ್ಲಿರುತ್ತಾನೆ. ಆದರೆ ಧರ್ಮನಿಷ್ಠನು ತಾತ್ಕಾಲಿಕವಾಗಿ ಕಷ್ಟಗಳನ್ನು ಅನುಭವಿಸಿದರೂ, ಶಾಶ್ವತವಾದ ಆನಂದದಲ್ಲಿರುತ್ತಾನೆ.

ಸತ್ಯ ಹರಿಶ್ಚಂದ್ರನು ತನ್ನ ಧರ್ಮಕ್ಕೆ ಬದ್ಧನಾಗಿದ್ದನು. ತಾನು ಸುಳ್ಳು ಹೇಳುವುದಿಲ್ಲ ಎಂದು ಮಾತು ಕೊಟ್ಟಿದ್ದನು, ಅದೇ ಅವನ ಕಷ್ಟಗಳಿಗೆ ಕಾರಣವಾಯಿತು. ವಿಶ್ವಾಮಿತ್ರನು ಹರಿಶ್ಚಂದ್ರನಿಂದ ಸುಳ್ಳು ಹೇಳಿಸಲು ಎಷ್ಟೇ ಪ್ರಯತ್ನಿಸಿದರೂ, ಹರಿಶ್ಚಂದ್ರನು ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಎಷ್ಟೋ ಕಷ್ಟಗಳನ್ನು ಅನುಭವಿಸಿದನೇ ಹೊರತು

ಅಧರ್ಮದ ಹಾದಿ ಹಿಡಿಯಲಿಲ್ಲ. ಹಾಗೆಯೇ ಧರ್ಮರಾಜನೂ ಸಹ ಧರ್ಮಕ್ಕೇ ಕಟ್ಟುಬಿದ್ದನೇ ಹೊರತು ಅಧರ್ಮದ ಕಡೆಗೆ ಹೋಗಲಿಲ್ಲ ಎಂದೇ ಅವರು ಧರ್ಮರಾಜರಾದರು.

ಈ ರೀತಿಯಾಗಿ ನೋಡಿದರೆ ಧರ್ಮದಿಂದ ಬದುಕುವಾಗ ತಾತ್ಕಾಲಿಕವಾದ ಕಷ್ಟಗಳು ಬರಬಹುದು, ಆದರೆ ಶಾಶ್ವತವಾದ ಆನಂದದ ಸ್ಥಿತಿಯಲ್ಲಿ ಇರುತ್ತಾರೆ. ಈ ಮಾರ್ಗಕ್ಕೆ ಬಂದ ನೀವು "ಶ್ವಾಸದ ಮೇಲೆ ಗಮನ" ಇಟ್ಟು ಗಂಟೆಗಟ್ಟಲೆ ಧ್ಯಾನ ಮಾಡುತ್ತಿದ್ದೀರಿ, ಆದರೆ ಪ್ರತಿಯೊಬ್ಬರೂ ತಾವು ಧರ್ಮದಿಂದ ಬದುಕುತ್ತಿದ್ದೇವೆಯೇ? ಇಲ್ಲವೇ? ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಧರ್ಮ ಎಂಬುದು ಸನಾತನವಾದದ್ದು. ಇದು ಇಂದು ಹೊಸದಾಗಿ ಹುಟ್ಟಿದ್ದಲ್ಲ; ಹಿಂದೆ ಇತ್ತು, ಈಗಲೂ ಇದೆ ಮತ್ತು ಮುಂದೆಯೂ ಇರುತ್ತದೆ. ಸನಾತನ ಎಂದರೆ ಯಾವುದೋ ಒಂದು ಕಾಲದಲ್ಲಿದ್ದು ಇನ್ನೊಂದು ಕಾಲದಲ್ಲಿ ಇಲ್ಲದಿರುವುದಲ್ಲ, ಯಾವಾಗಲೂ ಇರುವುದೇ ಸನಾತನ. ಅದಕ್ಕಾಗಿಯೇ ಧರ್ಮವನ್ನು ಆಚರಿಸುವವನು ದೈವಕ್ಕೆ ಹತ್ತಿರವಾಗುತ್ತಾನೆ, ದೈವಕ್ಕೆ ಪ್ರಿಯನಾಗುತ್ತಾನೆ. ಸರಿಯಾದ ಧ್ಯಾನ ಮಾಡಿ ನಿಮ್ಮಲ್ಲಿನ ದುರ್ಗುಣಗಳನ್ನು ತೊಲಗಿಸಿಕೊಂಡು ಧರ್ಮಯುತವಾದ ಜೀವನ ನಡೆಸಿದರೆ, ಈ ಜನ್ಮದಲ್ಲಿಯೇ ದೈವವನ್ನು ದರ್ಶಿಸುವ ಶಕ್ತಿಯನ್ನು ಮತ್ತು ಸತ್ಯವನ್ನು ದರ್ಶಿಸುವ ಶಕ್ತಿಯನ್ನು ಪಡೆಯುತ್ತೀರಿ. ಯಾವಾಗ ನೀವು ಈ ಮಾರ್ಗಕ್ಕೆ ಬಂದು ದೈವಕ್ಕಾಗಿ ಅನ್ವೇಷಣೆ ಮಾಡುತ್ತೀರೋ, ಅಂದಿನಿಂದಲೇ ನೀವು ಧರ್ಮನಿಷ್ಠರಾಗಿರಬೇಕು ಮತ್ತು ಈ ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳಬೇಕು. ಪ್ರತಿದಿನ ರಾತ್ರಿ ನಿದ್ರಿಸುವ ಮೊದಲು, "ನಾನು ಇಂದು ಯಾವುದಾದರೂ ತಪ್ಪು ಮಾಡಿದ್ದೇನಾ? ಯಾವುದಾದರೂ ಪಾಪ ಮಾಡಿದ್ದೇನಾ? ಯಾರಿಗಾದರೂ ದ್ರೋಹ ಮಾಡಿದ್ದೇನಾ?" ಎಂದು ಪ್ರತಿಯೊಬ್ಬರೂ ವಿಚಾರಿಸಿಕೊಳ್ಳಬೇಕು (ಆತ್ಮವಿಮರ್ಶೆ ಮಾಡಿಕೊಳ್ಳಬೇಕು).

ಏಕೆಂದರೆ? ಬುದ್ಧ ಭಗವಾನರು ಹೀಗೆ ಹೇಳಿದ್ದಾರೆ: **"ತಿಳಿಯದೆ ಮಾಡಿದ ತಪ್ಪುಗಳಿಗೆ ಸಣ್ಣ ಶಿಕ್ಷೆ, ತಿಳಿದೂ ಮಾಡಿದರೆ ಆ ತಪ್ಪುಗಳಿಗೆ ದೊಡ್ಡ ಶಿಕ್ಷೆ"**. ಅದಕ್ಕಾಗಿಯೇ ಮನಸ್ಸನ್ನು ಶುದ್ಧವಾಗಿಟ್ಟುಕೊಂಡು ಧರ್ಮವನ್ನು ಆಚರಿಸಬೇಕು. ನಿಮ್ಮಿಂದ ಒಂದು ಇರುವೆಗೂ ಸಹ ಅಪಕಾರವಾಗದಂತೆ ನೋಡಿಕೊಳ್ಳಬೇಕು. ಈ ರೀತಿಯಾಗಿ ಯಾರಿಗೂ ತೊಂದರೆ ನೀಡದೆ ಧರ್ಮವನ್ನು ಆಚರಿಸಿದರೆ ನೀವು ದೈವಕ್ಕೆ ಹತ್ತಿರವಾಗುತ್ತೀರಿ. ಅದಕ್ಕಾಗಿಯೇ ಅಂತರಂಗದಲ್ಲಿ ಧ್ಯಾನ, ಬಹಿರಂಗದಲ್ಲಿ ಧರ್ಮ – ಈ ಎರಡೂ ನಿಮ್ಮನ್ನು ದೈವಕ್ಕೆ ಹತ್ತಿರ ಮಾಡುತ್ತವೆ ಎಂದು ತಿಳಿದುಕೊಳ್ಳಬೇಕು.

# ಅಧರ್ಮವಾಗಿ ಬದುಕಲು ಕಾರಣಗಳೇನು? ಅಧರ್ಮದಿಂದ ಬದುಕುವುದರಿಂದ ಆಗುವ ನಷ್ಟಗಳೇನು?

ಮಾನವರು ಅಧರ್ಮವಾಗಿ ಏಕೆ ಬದುಕುತ್ತಿದ್ದಾರೆ? ಅಧರ್ಮವಾಗಿ ಜೀವಿಸಲು ಕಾರಣವೇನು? ಹಾಗೆಯೇ ಅಧರ್ಮವಾಗಿ ಬದುಕುವವರು ಎಂತಹ ಫಲಿತಾಂಶವನ್ನು ಅನುಭವಿಸಬೇಕಾಗುತ್ತದೆ? ಎಂಬ ವಿಷಯಗಳ ಬಗ್ಗೆ ತಿಳಿದುಕೊಳ್ಳೋಣ.

ಈ ಧ್ಯಾನ ಮಾರ್ಗಕ್ಕೆ ಬಂದ ನೀವು ಧರ್ಮವಾಗಿ ಬದುಕಲು ಸಾಧ್ಯವಾದರೆ, ಧ್ಯಾನವು ಉತ್ತಮವಾಗಿ ಸಿದ್ಧಿಸುತ್ತದೆ ಮತ್ತು ದೈವಕ್ಕೆ ಹತ್ತಿರವಾಗುತ್ತೀರಿ. ಒಂದು ವೇಳೆ ಅಧರ್ಮ ಮಾರ್ಗದಲ್ಲಿ ಬದುಕಿದರೆ, ಆ ಕರ್ಮಫಲಗಳನ್ನು ಅನುಭವಿಸಲು ಭೂಮಿಯ ಮೇಲೆ ಮತ್ತೆ ಜನ್ಮ ಪಡೆಯಬೇಕಾಗುತ್ತದೆ. ಅಷ್ಟೇ ಅಲ್ಲದೆ, ಅಧರ್ಮ ಮಾರ್ಗದಲ್ಲಿದ್ದಾಗ ಆ ಜನ್ಮದಲ್ಲಿ ಎಷ್ಟು ಕಷ್ಟಗಳು ಎದುರಾಗುತ್ತವೆ! ಎಷ್ಟು ಸಂಕಟಗಳು ಬರುತ್ತವೆ! ಎಂಬ ಬಗ್ಗೆ ಇಂದು ತಿಳಿದುಕೊಳ್ಳೋಣ.

ಧರ್ಮ ಯಾವುದೆಂದು ತಿಳಿದಿದ್ದರೂ ಕೆಲವರು ಏಕೆ ಅಧರ್ಮವಾಗಿ ಬದುಕುತ್ತಾರೆ? ಅಂದರೆ, ಅವರ ಮನಸ್ಸು ಮಲಿನವಾಗಿ, ಅಶುದ್ಧವಾದಾಗ ಅಧರ್ಮ ಮಾರ್ಗದಲ್ಲಿ ಬದುಕುವವರು ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಅಂತಹವರು ಹೊರಗಡೆಗೆ ಎಷ್ಟೋ ಒಳ್ಳೆಯ ಮಾತುಗಳನ್ನು ಆಡುತ್ತಾರೆ, ಆದರೆ ಮನಸ್ಸು ಮಲಿನವಾಗಿರುವುದರಿಂದ ಅಧರ್ಮ ಮಾರ್ಗದಲ್ಲೇ ಬದುಕುತ್ತಿರುತ್ತಾರೆ. ಮನಸ್ಸು ಶುದ್ಧವಾಗಿದ್ದರೆ ಧರ್ಮದಲ್ಲಿ ಇರುತ್ತಾರೆ, ಅಶುದ್ಧವಾಗಿದ್ದರೆ ಅಧರ್ಮ ಮಾರ್ಗದಲ್ಲಿ ಇರುತ್ತಾರೆ. ಇನ್ನು ಈ ಅಧರ್ಮ ಮಾರ್ಗದಲ್ಲಿ ಇರುವವರು ಯಾವಾಗಲೂ ಎದುರಿಗಿರುವವರಿಗೆ ಕೇಡು (ಹಾನಿ) ಮಾಡುತ್ತಲೇ ಇರುತ್ತಾರೆ.

ಇಂತಹವರು ನಾವು ಇತರರಿಗೆ ಕೇಡು ಮಾಡಿದೆವು ಎಂದು ಭಾವಿಸುತ್ತಾರೆ, ಆದರೆ ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಿದ್ದೇವೆ ಎಂಬ ವಿಷಯ ಅವರಿಗೆ ತಿಳಿಯುವುದಿಲ್ಲ. ಅಂದರೆ 'ನಾನು ಲಾಭ ಪಡೆಯುತ್ತಿದ್ದೇನೆ' ಎಂದು ಅವರು ಅಂದುಕೊಳ್ಳುತ್ತಾರೆ, ಆದರೆ ಯಾವಾಗ ಎದುರಿಗಿದ್ದವರಿಗೆ ಹಾನಿ ಮಾಡುತ್ತಾರೋ, ಆಗ ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಅವರಿಗೆ ತಿಳಿಯುವುದಿಲ್ಲ. ಏಕೆಂದರೆ? ಅದರ ಮೂಲಕ ತನಗೆ ಬರುವ ಕಷ್ಟಗಳು ಅವನಿಗೆ ಗೊತ್ತಿಲ್ಲ. ಅವನಿಂದ ಎದುರಿಗಿರುವವನು ತಾತ್ಕಾಲಿಕವಾಗಿ ನಷ್ಟ ಅನುಭವಿಸಬಹುದು, ಆದರೆ ತಾನು ದುಃಖದ ಕಡೆಗೆ ಹೆಜ್ಜೆ ಹಾಕುತ್ತಿದ್ದೇನೆ ಎಂಬ ವಿಷಯ ಅವನಿಗೆ ತಿಳಿಯದು.

**"ಧರ್ಮವು ತುಂಬಾ ಶ್ರೇಷ್ಠವಾದುದು, ಹರಿತವಾದ ವಜ್ರಾಯುಧದಂತೆ." "ಧರ್ಮವು ಧರ್ಮಿಷ್ಠರನ್ನು ರಕ್ಷಿಸುತ್ತದೆ, ಅಧರ್ಮಿಗಳನ್ನು ಶಿಕ್ಷಿಸುತ್ತದೆ."** ಅಧರ್ಮಿಯು ತನಗೆ

ತಾನೇ ಶಿಕ್ಷೆ ವಿಧಿಸಿಕೊಳ್ಳುತ್ತಾನೆ. ಏಕೆಂದರೆ, ತಾನು ಎದುರಿಗಿರುವವರನ್ನು ಮೋಸ ಮಾಡಿದೆ ಎಂದು ಅವನು ಅಂದುಕೊಳ್ಳುತ್ತಾನೆ, ಆದರೆ ಅಜ್ಞಾನದಲ್ಲಿ ಬದುಕುತ್ತಾ, ಹಳೆಯ ವಾಸನೆಗಳು (ಸಂಸ್ಕಾರಗಳು) ಮತ್ತು ಹಳೆಯ ನಡವಳಿಕೆಗಳಿಂದ ಅವನ ಮನಸ್ಸು ಮಲಿನವಾಗಿ, ಅವನು ಮಾಡುವ ಪಾಪ ಕರ್ಮಗಳ ಮೂಲಕ ತನಗೆ ಬೀಳುವ ಶಿಕ್ಷೆಯನ್ನು ತಾನೇ ವಿಧಿಸಿಕೊಂಡಂತೆ ಆಗುತ್ತದೆ!

ಇದಕ್ಕೆ ಕಾರಣ ಅವನು ಅಧರ್ಮದ ಹಾದಿಯಲ್ಲಿ ಬದುಕುತ್ತಿರುವುದು. ಆದರೆ ಜ್ಞಾನವಂತನು ಧರ್ಮದ ಹಾದಿಯಲ್ಲಿ ಬದುಕುತ್ತಾನೆ. ಈ ವಿಷಯ ತಿಳಿದ ಮೇಲೆ ಎಲ್ಲರೂ ಧರ್ಮದ ಹಾದಿಯಲ್ಲೇ ಇರುತ್ತಾರೆ. ಆದರೆ ಇವುಗಳನ್ನು ತಿಳಿದುಕೊಂಡರೂ ಆಚರಿಸಲು ಎಷ್ಟೋ ನಿಗ್ರಹ ಶಕ್ತಿ (ಸ್ವಯಂ ನಿಯಂತ್ರಣ) ಇರಬೇಕು. ಅಂತಹ ನಿಗ್ರಹ ಶಕ್ತಿಯನ್ನು ಸಂಪಾದಿಸಿಕೊಳ್ಳಲು ಧ್ಯಾನ ಒಂದೇ ಮಾರ್ಗ. ಜ್ಞಾನ ಪಡೆಯಬೇಕೆನ್ನುವ ಜ್ಞಾನಿಗಳು ಅಪ್ಪಿತಪ್ಪಿಯೂ ಅಧರ್ಮದ ಹಾದಿಗೆ ಹೋಗುವುದಿಲ್ಲ.

ಸಿಟ್ಟು ಯಾವಾಗ ಬರಬೇಕೆಂದರೆ ಅಧರ್ಮವು ಮಿತಿ ಮೀರಿದಾಗ ಮಾತ್ರ, ಅಷ್ಟೇ ಹೊರತು ಸಣ್ಣಪುಟ್ಟ ವಿಷಯಗಳಿಗಲ್ಲ. ಹೀಗೆ ಅಧರ್ಮವಾಗಿ ಬದುಕುವವರ ಹತ್ತಿರ ಅಥವಾ ಕೋಪಿಷ್ಠರ ಹತ್ತಿರ ಹೋಗಲು ಯಾರಾದರೂ ಭಯಪಡುತ್ತಾರೆ. ಆದರೆ ಅಧರ್ಮದ ಹಾದಿಯಲ್ಲಿ ಬದುಕಿದರೆ ಭಗವಂತನ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಧರ್ಮದ ಹಾದಿಯಲ್ಲಿ ಬದುಕುವವರಿಗೆ "ನೀನು ಪಾಪ ಮಾಡುತ್ತಿದ್ದೀಯಾ, ಸತ್ತ ನಂತರ ನರಕಕ್ಕೆ ಹೋಗುತ್ತೀಯಾ" ಎಂದು ಹೇಳಿದರೆ, ಅದಕ್ಕೆ ಅವರು "ಸತ್ತ ಮೇಲೆ ಏನಾದರೆ ನನಗೇನು, ಈಗ ನಾನು ಸುಖವಾಗಿದ್ದೇನಲ್ಲ" ಎಂದು ಹೇಳುತ್ತಾರೆ. ಅಂದರೆ ಸತ್ತ ಮೇಲೆ ಏನಾಗುತ್ತದೆ ಎಂಬುದು ಅವರಿಗೆ ತಿಳಿಯದು. ಜ್ಞಾನಿಗಳು ಬೋಧಿಸಿದರೂ ಅವರ ತಲೆಗೆ ಏರುವುದಿಲ್ಲ, ಆದ್ದರಿಂದ ಅವರು ಅಧರ್ಮದ ಪರವಾಗಿಯೇ ಇರುತ್ತಾರೆ ಮತ್ತು ಅಧರ್ಮದಿಂದಲೇ ಬದುಕುತ್ತಾರೆ. ಸಾಮಾನ್ಯವಾಗಿ ಅಧರ್ಮವಾಗಿ ಬದುಕಿದರೆ ಸತ್ತ ಮೇಲೆ ಅನುಭವಿಸಬೇಕಾಗುತ್ತದೆ ಎಂದು ಅಂದುಕೊಳ್ಳುತ್ತಾರೆ, ಆದರೆ ಬದುಕಿರುವಾಗಲೇ ಅವರಿಗೆ ವೇದನೆ ತಪ್ಪದು, ಸುಖ ಶಾಂತಿಗಳು ಇರುವುದಿಲ್ಲ. ಅಂತವರು ನೆಮ್ಮದಿಯಾಗಿ ನಿದ್ರಿಸಲಾರರು, ಶಾಂತಿಯಿಂದ ಬದುಕಲಾರರು.

ಅಧರ್ಮ ಕಾರ್ಯಗಳನ್ನು ಮಾಡಿದ ಕೂಡಲೇ ಶಿಕ್ಷೆ ಆಗುವುದಿಲ್ಲ. ಆದರೆ ಎರಡು, ಮೂರು ತಪ್ಪುಗಳ ನಂತರ ಅವರ ಪತನ ಪ್ರಾರಂಭವಾಗುತ್ತದೆ. ಒಂದು ವೇಳೆ ಅವರು ಅಧರ್ಮದ ಕಡೆಯೇ ಇದ್ದರೆ, ಆಗ ಪ್ರಕೃತಿಯು ಕಠಿಣವಾದ ಶಿಕ್ಷೆಯನ್ನು ನೀಡುತ್ತದೆ. ಬಹಳಷ್ಟು ಜನರು ಏನೆಂದುಕೊಳ್ಳುತ್ತಾರೆ ಎಂದರೆ?

"ಸತ್ತ ಮೇಲೆ ಏನಾಗುತ್ತದೋ ನಮಗೇನು ಗೊತ್ತು, ಈಗ ಇಷ್ಟ ಬಂದಿದ್ದನ್ನು ತಿನ್ನೋಣ" ಎಂದು ಮೂಕ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುತ್ತಾ ಎಂಜಾಯ್ ಮಾಡುತ್ತಾ ಬದುಕುವವರು ಬಹಳಷ್ಟು ಮಂದಿ ಇದ್ದಾರೆ. ಅವರು ಮಾಂಸ ತಿನ್ನುವುದು ತಪ್ಪು ಎಂದು ತಿಳಿದಿದ್ದರೂ ಸಹ, ಎಷ್ಟೋ ಪ್ರಾಣಿಗಳನ್ನು ಕೊಂದು ಸಂಭ್ರಮಗಳು, ಸಮಾರಂಭ, ಆಚರಣೆಗಳನ್ನು ಮಾಡುತ್ತಾರೆ. ಆ ಭಗವಂತನು ಎಷ್ಟೋ ಕರುಣಾಮಯಿ, ದಯಾಮಯಿ, ಆದ್ದರಿಂದ ಪುರಾಣಗಳ ಮೂಲಕ, ಇತಿಹಾಸಗಳ ಮೂಲಕ ಧರ್ಮ ಎಂದರೆ ಏನು ಎಂದು, ಸದ್ಗುರುಗಳ ಮೂಲಕ ನಮಗೆ ಬೋಧಿಸಿದ್ದಾರೆ. ಅಷ್ಟೇ ಅಲ್ಲದೆ ಸತ್ಯ ಅಂದರೆ ಏನು? ಅಸತ್ಯ ಅಂದರೆ ಏನು? ಈ ಸತ್ಯವನ್ನು ನೀನು ತಲುಪಬೇಕಾದರೆ ಧರ್ಮಬದ್ಧವಾದ ಜೀವನವನ್ನು ನಡೆಸಬೇಕು, ಅಧರ್ಮದ ಜೀವನವನ್ನು ತಪ್ಪಿಯೂ ನಡೆಸಬಾರದು ಎಂದು ಗುರುಗಳು ಎಚ್ಚರಿಸುತ್ತಲೇ ಇದ್ದಾರೆ. ಆದರೆ ನೀವು ಅದನ್ನು ಕಿವಿಗೆ ಹಾಕಿಕೊಳ್ಳದಿದ್ದರೆ ದುಃಖವನ್ನು ಅನುಭವಿಸುತ್ತೀರಿ.

ಹಳೆಯ ಸಂಸ್ಕಾರಗಳು, ಹಳೆಯ ವಾಸನೆಗಳ ಕಾರಣದಿಂದ ಅಧರ್ಮವಾಗಿ ಇರಬಹುದು, ಆದರೆ ಆ ಭಗವಂತನು ಪ್ರಕೃತಿಯ ಮೂಲಕ ಎಷ್ಟೋ ಅವಕಾಶಗಳನ್ನು ನೀಡುತ್ತಾನೆ. ಅಷ್ಟರ ಒಳಗೂ ನಿನ್ನಲ್ಲಿ ಬದಲಾವಣೆ ಬರದಿದ್ದರೆ ಶಿಕ್ಷೆ ಆಗಿಯೇ ತೀರುತ್ತದೆ. ನೀವು ಎದುರಿನವರಿಗೆ ಹೇಳುವ ಪ್ರತಿಯೊಂದನ್ನು ಮೊದಲು ನೀವು ಆಚರಿಸಬೇಕು. ನೀವು ಅಧರ್ಮವಾಗಿ ಇದ್ದರೆ ದೈವಕ್ಕೆ ದೂರವಾಗುತ್ತೀರಿ, ದೈವಕ್ಕೆ ದೂರವಾಗುವುದೆಂದರೆ ಎಷ್ಟೇ ವರ್ಷ ಸಾಧನೆ ಮಾಡಿದರೂ, ಆತ್ಮಕ್ಕಾಗಿ ಎಷ್ಟೇ ತಪಿಸಿದರೂ ನಿಮ್ಮ ಆತ್ಮಶಕ್ತಿ ಹೆಚ್ಚಿಸಿಕೊಳ್ಳೊದಿಲ್ಲ. ಒಂದು ತಪ್ಪು ಮಾಡಿ ಧ್ಯಾನದಲ್ಲಿ ಕುಳಿತರೆ, ಅದೇ ತಪ್ಪು ಪದೇ ಪದೇ ನೆನಪಿಗೆ ಬರುತ್ತದೆ. "ಏಕೆ ಮಾಡಿದೆ? ಏಕೆ ಮಾಡಿದೆ?" ಎಂಬ ಆತ್ಮಘೋಷ (ಒಳಮನಸ್ಸಿನ ಕೂಗು) ಕೇಳಿಸುತ್ತದೆ. "ಅವನೂ ಕೂಡ ಆತ್ಮನೇ ಅಲ್ಲವೇ, ಅವನೂ ಭಗವಂತನ ಸ್ವರೂಪವೇ ಅಲ್ಲವೇ, ದೇಹ ಧರಿಸಿ ಸಾಧನೆಗಾಗಿ ಬಂದವನಿಗೆ ಏಕೆ ಅನ್ಯಾಯ ಮಾಡಿದೆ? ಅವನನ್ನು ಏಕೆ ನೋಯಿಸಿದೆ?" ಎಂಬ ಆತ್ಮಘೋಷ ಕಾಡುತ್ತಿರುತ್ತದೆ. ಅದಕ್ಕಾಗಿಯೇ ಯಾವಾಗಲೂ ಧರ್ಮವನ್ನು ಪ್ರೀತಿಸುವವನು, ಧರ್ಮವನ್ನು ಆಚರಿಸುವವನು ಮತ್ತು ಧರ್ಮಯುತ ಜೀವನ ನಡೆಸುವವನು ದೈವಕ್ಕೆ ಹತ್ತಿರವಾಗುತ್ತಾನೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ, ಅಧರ್ಮದ ಜೀವನ ನಡೆಸುವವನಿಗೆ ಧರ್ಮದಿಂದ ಬರುವ ಯಾವುದೇ ಲಾಭಗಳು ಸಿಗುವುದಿಲ್ಲ. ಅದಕ್ಕಾಗಿಯೇ ಅಧರ್ಮದ ಜೀವನ ಎಂದರೆ ಕಷ್ಟಗಳ ಜೀವನ, ರೋಗಗಳ ಜೀವನ, ಬಾಧೆಗಳ ಜೀವನ ಮತ್ತು ಅಶಾಂತಿಯ ಜೀವನ. ಇಂತಹವರು ತಾತ್ಕಾಲಿಕವಾಗಿ ಸ್ವಲ್ಪ ಲಾಭವನ್ನು ಪಡೆಯಬಹುದು, ಆದರೆ ಅದು ಶಾಶ್ವತವಲ್ಲ.

ಹಾಗಾದರೆ ಜನರು ಏಕೆ ಹೀಗೆ ಅಧರ್ಮವಾಗಿ ಜೀವಿಸುತ್ತಾರೆ ಎಂದರೆ ಅದಕ್ಕೆ ಐದು ಮುಖ್ಯ ಕಾರಣಗಳಿವೆ:

1) **ಮಿತಿಮೀರಿದ ಮಮಕಾರ (ಅತಿಯಾದ ವ್ಯಾಮೋಹ)**
2) **ಮಿತಿಮೀರಿದ ಅಹಂಕಾರ**
3) **ಹಗೆ ಮತ್ತು ಪ್ರತೀಕಾರ (ಸೇಡು)**
4) **ದುಷ್ಟರ ಸಾಂಗತ್ಯ (ಕೆಟ್ಟವರ ಸ್ನೇಹ)**
5) **ಮಿತಿಮೀರಿದ ಕಾಮ (ಅತಿಯಾದ ಆಸೆ/ವ್ಯಾಮೋಹ)**

ಈ ಐದು ಕಾರಣಗಳಿಂದ ಮನಸ್ಸು ಅಶುದ್ಧವಾಗುತ್ತದೆ. ಮನಸ್ಸು ಅಶುದ್ಧವಾದಾಗ ಮನುಷ್ಯ ಅಧರ್ಮದ ಹಾದಿಯಲ್ಲಿ ಸಾಗುತ್ತಾನೆ.

ಪ್ರತಿಯೊಂದರ ಬಗ್ಗೆ ಉದಾಹರಣೆಯೊಂದಿಗೆ ವಿವರಣೆ:

**1) ಮಿತಿಮೀರಿದ ಮಮಕಾರ:** ಧೃತರಾಷ್ಟ್ರನು ತನ್ನ ಮಕ್ಕಳಾದ ಕೌರವರ ಮೇಲಿನ ಅತಿಯಾದ ಮಮಕಾರದಿಂದ ಎಷ್ಟೋ ತಪ್ಪುಗಳನ್ನು ಮಾಡಿದನು. ವಾಸ್ತವವಾಗಿ ಆ ರಾಜ್ಯ ಅವನದ್ದಲ್ಲ, ಆದರೂ ಮಕ್ಕಳ ಮೇಲಿನ ವ್ಯಾಮೋಹದಿಂದ "ನನ್ನ ಮಕ್ಕಳೇ ಚೆನ್ನಾಗಿರಬೇಕು, ನನ್ನ ಮಕ್ಕಳೇ ಚಕ್ರವರ್ತಿಗಳಾಗಬೇಕು" ಎಂದು ಬಯಸಿದನು. ಸಾರ್ವಭೌಮರಾಗಬೇಕೆಂಬ ಸ್ವಾರ್ಥದಿಂದ ಅಧರ್ಮಿಯಾಗಿ ಬದುಕಿದನು. ಧರ್ಮದ ಅರಿವಿದ್ದರೂ ಪಕ್ಕದವರ ಮಾತನ್ನು ಕೇಳಲಿಲ್ಲ. ವಿದುರನು "ಅಣ್ಣಾ, ನೀನು ಮಾಡುತ್ತಿರುವುದು ತಪ್ಪು, ತಪ್ಪು ಮಾಡುತ್ತಿದ್ದೀಯಾ" ಎಂದು ಪದೇ ಪದೇ ಹೇಳುತ್ತಿದ್ದರೂ, ಆತನ ಮಾತನ್ನು ಕಡೆಗಣಿಸಿ ಮಕ್ಕಳ ಮೇಲಿನ ಅತಿಯಾದ ವ್ಯಾಮೋಹದಿಂದ ಎಷ್ಟೊಂದು ತಪ್ಪುಗಳನ್ನು ಮಾಡಿದನು. ಪಾಂಡವರನ್ನು ಎಷ್ಟೊಂದು ಕಷ್ಟಕ್ಕೀಡು ಮಾಡಿದನು ದುರ್ಯೋಧನ. ಅಂದರೆ ರಾಜನಾಗಿ ಆತ ಆಜ್ಞೆ ನೀಡಿದ್ದರಿಂದಲೇ ಅಲ್ಲವೇ? ಮಕ್ಕಳ ಮೇಲಿನ ಅತಿಯಾದ ವ್ಯಾಮೋಹದಿಂದ ಯಾರ ಸಲುವಾಗಿ ಅಧರ್ಮ ಮಾಡಿದನೋ, ನೂರು ಜನ ಮಕ್ಕಳಲ್ಲಿ ಒಬ್ಬನೂ ಉಳಿಯಲಿಲ್ಲ.

ಅಂದರೆ ಪ್ರಕೃತಿಯು ಗಮನಿಸುತ್ತಿದೆ. ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡುತ್ತಾ ಹೋದರೆ, ಪ್ರಕೃತಿಯು ನೀಡುವ ಶಿಕ್ಷೆಯಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನೋಡಿ, ಒಂದು ತಪ್ಪು ಮಾಡಿದಾಗ ಸಿಕ್ಕಿಬೀಳದಿದ್ದರೂ, ತಪ್ಪುಗಳನ್ನು ಮಾಡುತ್ತಲೇ ಹೋದರೆ ಅವನ ಜೀವನವೇ ಒಂದು ತಪ್ಪಾದ ಜೀವನವಾಗುತ್ತದೆ.

**2) ಮಿತಿಮೀರಿದ ಅಹಂಕಾರ:** ಮಿತಿಮೀರಿದ ಅಹಂಕಾರದಿಂದ ದುರ್ಯೋಧನನು ನಾಶವಾದನು. ನೋಡಿ, "ನನ್ನ ತಂದೆ ಚಕ್ರವರ್ತಿ, ನಾನು ಏನೇ ಮಾಡಿದರೂ

ನಡೆಯುತ್ತದೆ, ನಾನು ಯುವರಾಜ, ಚಕ್ರವರ್ತಿಯ ಕುಮಾರನಾದ್ದರಿಂದ ನನ್ನ ಮಾತೇ ಶಾಸನ" ಎಂದು ಪಾಂಡವರ ಮೇಲಿನ ಅಸೂಯೆಯಿಂದ ಸೂಜಿಯ ಮೊನೆಯಷ್ಟು ಜಾಗವನ್ನೂ ಕೊಡುವುದಿಲ್ಲ ಎಂದನು. ಅಧರ್ಮದಿಂದ ಕಪಟ ದ್ಯೂತವನ್ನು ಆಡಿದ್ದಲ್ಲದೆ, ತನ್ನವರನ್ನೇ ಕೊಲ್ಲಲು ಪ್ರಯತ್ನಿಸುವುದು ಎಂತಹ ಕ್ರೌರ್ಯ? ಲಕ್ಕದ ಮನೆಯಲ್ಲಿ ಇಟ್ಟು ಕೊಲ್ಲಲು ಸಂಚು ರೂಪಿಸಿದನು, ಭೀಮನಿಗೆ ಬಾಲ್ಯದಲ್ಲೇ ವಿಷ ಆಹಾರ ನೀಡಿದನು. ಇಷ್ಟೊಂದು ಅಧರ್ಮದ ಕೆಲಸಗಳನ್ನು ಮಾಡಿ ಪಾಂಡವರನ್ನು ಪೀಡಿಸಿ, ಕಡೆಗೆ ಸೂಜಿಯ ಮೊನೆಯಷ್ಟು ಜಾಗವನ್ನೂ ಕೊಡುವುದಿಲ್ಲ ಎಂದು ಅಹಂಕಾರ ಪಟ್ಟನು. ಆದರೆ ಇಂದು ಆತ ಭೂಮಿಯ ಮೇಲೆ ಇದ್ದಾನೆಯೇ? ಸೂಜಿಯ ಮೊನೆಯಷ್ಟು ಜಾಗವನ್ನು ಆಳಲು ಆತ ಪ್ರಾಣದೊಂದಿಗೆ ಉಳಿಯಲಿಲ್ಲ. ಇವೆಲ್ಲವೂ ತಿಳಿದುಕೊಳ್ಳಬೇಕಾದ ವಿಷಯಗಳು. ಅಧರ್ಮದ ದಾರಿಯಲ್ಲಿ ಬದುಕಿದವರು ಹೇಗೆ ಅರ್ಧಾಂತರವಾಗಿ ಮರಣ ಹೊಂದಿದರು ಎಂಬುದನ್ನು ತಿಳಿದುಕೊಳ್ಳಬೇಕು.

**3) ಹಗೆ ಮತ್ತು ಪ್ರತೀಕಾರ:** ಹಗೆ ಹಾಗೂ ಪ್ರತೀಕಾರದ ಕಿಚ್ಚಿನಿಂದ ಶಕುನಿಯು ಕುದಿಯುತ್ತಿದ್ದನು. ಏಕೆಂದರೆ, ಗಾಂಧಾರಿಯ ಜಾತಕದಲ್ಲಿ ವೈಧವ್ಯ ದೋಷವಿದ್ದ ಕಾರಣ, ಮೊದಲು ಆಕೆಗೆ ಒಂದು ಬಾಳೆಗಿಡದೊಂದಿಗೆ ಮದುವೆ ಮಾಡಿ, ನಂತರ ಆ ಗಿಡವನ್ನು ಕತ್ತರಿಸಿ ಹಾಕಿ ಗಾಂಧಾರಿಯನ್ನು ಧೃತರಾಷ್ಟ್ರನಿಗೆ ನೀಡಿ ವಿವಾಹ ಮಾಡಿದ್ದರು. ಇದನ್ನು ದುರ್ಯೋಧನನು ಅವಮಾನವೆಂದು ಭಾವಿಸಿದನು. ಒಬ್ಬ ವಿಧವೆಯನ್ನು ನನ್ನ ತಂದೆಗೆ ಕಟ್ಟಿ ಹಾಕಿದ್ದಾರೆ ಎಂದು ಕೋಪಗೊಂಡು, ತನ್ನ ತಾತ ಹಾಗೂ ಸೋದರಮಾವಂದಿರನ್ನೆಲ್ಲಾ ಸೆರೆಮನೆಗೆ ಹಾಕಿದನು. ಅವರಿಗೆ ಆಹಾರವಾಗಿ ದಿನಕ್ಕೆ ಕೇವಲ 100 ತುತ್ತುಗಳನ್ನು ಮಾತ್ರ ನೀಡುತ್ತಿದ್ದರು. ಆ ತುತ್ತುಗಳನ್ನೆಲ್ಲ ಶಕುನಿ ಒಬ್ಬನೇ ತಿಂದು ಬದುಕಿ ಹೊರಬಂದನು.

ಕೌರವನಾದ ದುರ್ಯೋಧನನ ವಂಶವು ನಿರ್ನಾಮವಾಗಬೇಕೆಂದು ಶಕುನಿಯು ತನ್ನ ಸಂಬಂಧವನ್ನು ಬಳಸಿಕೊಂಡು ದುರ್ಯೋಧನನ ಪಕ್ಕದಲ್ಲೇ ಇದ್ದು, ಅವನನ್ನು ಯುದ್ಧಕ್ಕೆ ಪ್ರೇರೇಪಿಸಿ, ಆ ಯುದ್ಧದಲ್ಲಿ ಕೌರವರೆಲ್ಲರೂ ನಾಶವಾಗುವಂತೆ ಮಾಡಿದನು. ಹಗೆ ಎಂದರೆ ತನ್ನ ತಂದೆ–ತಾಯಿ ಮತ್ತು ಸಹೋದರರನ್ನು ದುರ್ಯೋಧನನು ಕೊಂದಿದ್ದಾನೆ ಎಂದು ಶಕುನಿ ಸೇಡು ತೀರಿಸಿಕೊಳ್ಳಲು ನಿರ್ಧರಿಸಿ ಕೌರವ ವಂಶವನ್ನೇ ನಾಶ ಮಾಡಿದನು. ಸರಿ, ಕಡೆಗೆ ಶಕುನಿಯಾದರೂ ಬದುಕಿ ಉಳಿದನೇ? ಇಲ್ಲ, ಅವನೂ ನಾಶವಾದನು.

**4) ದುಷ್ಟರ ಸಾಂಗತ್ಯ (ದುಷ್ಟರ ಸಹವಾಸ):** ನೀವು ಎಷ್ಟೇ ಒಳ್ಳೆಯವರಾಗಿದ್ದರೂ,

ದುಷ್ಟರು ಪದೇ ಪದೇ ಹೇಳುವ ಕೆಟ್ಟ ಮಾತುಗಳು ನಿಮ್ಮ ತಲೆಗೆ ಹತ್ತುತ್ತಿರುತ್ತವೆ. ಆಗ ನೀವು ಕೂಡ ತಪ್ಪು ಹಾದಿಯಲ್ಲಿ ಜೀವಿಸಲು ಪ್ರಾರಂಭಿಸುತ್ತೀರಿ. ಕೆಟ್ಟವರೊಂದಿಗೆ ಸ್ನೇಹ ಮಾಡಿದರೆ ಕೆಟ್ಟ ಆಲೋಚನೆಗಳೇ ಬರುತ್ತವೆ. ಅದಕ್ಕಾಗಿಯೇ ಯಾವಾಗಲೂ ಸಜ್ಜನರ ಸಹವಾಸ ಮಾಡಬೇಕು ಹೊರತು ದುರ್ಜನರ ಸಹವಾಸ ಮಾಡಬಾರದು ಎಂದು ಹಿರಿಯರು ಹೇಳುತ್ತಾರೆ. ಅಂತಹ ದುಷ್ಟರ ಸಹವಾಸದಿಂದಲೇ ಕರ್ಣನು ನಾಶವಾದನು. ಕರ್ಣನನ್ನು ನೋಡಿ, ಅವನು ಅರ್ಜುನನಿಗಿಂತಲೂ ಬುದ್ಧಿವಂತನಾಗಿದ್ದನು ಮತ್ತು ಬಿಲ್ವಿದ್ಯೆಯಲ್ಲಿ ಅರ್ಜುನನಿಗೆ ಸಮಾನನಾಗಿದ್ದನು. ಆದರೆ ದುರ್ಯೋಧನನಂತಹ ದುಷ್ಟರ ಸಹವಾಸದಿಂದಾಗಿ, ಅವರು ಅಧರ್ಮ ಮಾಡುತ್ತಿದ್ದರೂ ಅವರನ್ನು ಪ್ರೋತ್ಸಾಹಿಸಿದನೇ ಹೊರತು ಬೇಡ ಎಂದು ತಡೆಯಲಾಗಲಿಲ್ಲ.

ಸೂರ್ಯ ಭಗವಾನನ ಶಕ್ತಿಯಿಂದ ಜನಿಸಿದವನು ಕರ್ಣ. ಕರ್ಣನು ಮರಣ ಹೊಂದುವ ಸಮಯದಲ್ಲಿ ಶ್ರೀಕೃಷ್ಣನನ್ನು ಹೀಗೆ ಕೇಳಿದನು: "ನಾನು ಎಲ್ಲರಿಗೂ ದಾನಗಳನ್ನು ಮಾಡಿದೆ, 'ದಾನಶೂರ ಕರ್ಣ' ಎಂಬ ಬಿರುದನ್ನೂ ಪಡೆದೆ. ಅಂತಿಮವಾಗಿ ನನ್ನ ಕವಚ–ಕುಂಡಲಗಳನ್ನೂ ದಾನ ಮಾಡಿದೆ. ಕೇಳಿದವರಿಗೆ ಇಲ್ಲ ಎನ್ನದೆ ನೀಡಿ ಎಷ್ಟೋ ಪುಣ್ಯ ಸಂಪಾದಿಸಿದೆ. ಪರಶುರಾಮರಂತಹವರಿಂದ ಬಿಲ್ವಿದ್ಯೆ ಕಲಿತೆ, ಎಷ್ಟೋ ಅಸ್ತ್ರಗಳನ್ನು ಸಂಪಾದಿಸಿದೆ. ಆದರೂ ನಾನು ಅರ್ಜುನನ ಕೈಯಲ್ಲಿ ಸೋಲಲು ಕಾರಣವೇನು? ಹೀಗೆ ನಾನು ನೆಲಕ್ಕೆ ಉರುಳಲು ಕಾರಣವೇನು? ಇಷ್ಟೊಂದು ಶಾಪಗಳನ್ನು ಅನುಭವಿಸಲು ಕಾರಣವೇನು?" ಎಂದು ಶ್ರೀಕೃಷ್ಣನನ್ನು ಪ್ರಶ್ನಿಸಿದನು. ಅದಕ್ಕೆ ಶ್ರೀಕೃಷ್ಣನು ಹೀಗೆ ಉತ್ತರಿಸಿದನು: "ನೀನು ಮಾಡಿದ ಒಂದೇ ಒಂದು ತಪ್ಪು ಏನೆಂದರೆ, ದುಷ್ಟರ ಸಾಂಗತ್ಯ ಮಾಡಿದ್ದು ಮತ್ತು ಅಧರ್ಮದ ಪರವಾಗಿ ನಿಂತಿದ್ದು. ನಿನ್ನಂತಹ ಶ್ರೇಷ್ಠ ವ್ಯಕ್ತಿ ತಮ್ಮ ಪಕ್ಕದಲ್ಲಿದ್ದಾನೆ ಎಂಬ ಧೈರ್ಯದಿಂದಲೇ ಅವರು ಮಿತಿಮೀರಿ ಪಾಪಗಳನ್ನು ಮಾಡಿದರು. ಆದ್ದರಿಂದ ನೀನು ಎಷ್ಟೇ ದಾನಗಳನ್ನು ಮಾಡಿದ್ದರೂ, ಎಷ್ಟೇ ಪುಣ್ಯ ಸಂಪಾದಿಸಿದ್ದರೂ, ದುಷ್ಟರ ಸ್ನೇಹ ಮತ್ತು ಅಧರ್ಮದ ಬೆಂಬಲದಿಂದಾಗಿ ನೀನು ಅರ್ಜುನನ ಕೈಯಲ್ಲಿ ಸೋಲಬೇಕಾಯಿತು ಮತ್ತು ಇಷ್ಟೊಂದು ಶಾಪಗಳಿಗೆ ಗುರಿಯಾಗಬೇಕಾಯಿತು."

**ನಾವು ಕಲಿಯಬೇಕಾದ ಪಾಠ:** ನಾವು ಅಧರ್ಮದ ಹಾದಿಯಲ್ಲಿ ನಡೆಯಬಾರದು ಮತ್ತು ಅಧರ್ಮವಾಗಿ ನಡೆಯುವವರ ಪರವಾಗಿ ನಿಲ್ಲಬಾರದು. ದುರ್ಯೋಧನನು ಗೆಳೆಯನೆಂಬ ಕಾರಣಕ್ಕೆ ಅವನು ಮಾಡಿದ ಸಹಾಯಕ್ಕಾಗಿ ಅಧರ್ಮವನ್ನು ಪ್ರೋತ್ಸಾಹಿಸಿದರೆ, ಕರ್ಣನಂತೆಯೇ ಮರಣವನ್ನು ಹೊಂದಬೇಕಾಗುತ್ತದೆ.

**5) ಮಿತಿಮೀರಿದ ಕಾಮ (ಅತಿಯಾದ ಆಸೆ):** ಮಿತಿಮೀರಿದ ಕಾಮ ಎಂದರೆ

ಅದು ದೈಹಿಕವಾಗಿರಬಹುದು ಅಥವಾ ಮಾನಸಿಕವಾಗಿರಬಹುದು. ಇಂದು ಭೂಮಿಯ ಮೇಲೆ ಎಲ್ಲರಿಗೂ ಮಾನಸಿಕವಾದ ಕಾಮವೇ ಹೆಚ್ಚಾಗಿದೆ. ಅಂದರೆ ಎಲ್ಲವನ್ನೂ ತಾನೇ ಅನುಭವಿಸಬೇಕು, ತಾನೇ ಶ್ರೇಷ್ಠನಾಗಿರಬೇಕು, ಎಲ್ಲರೂ ನನ್ನನ್ನು ಹೊಗಳಬೇಕು ಎಂದು ಬಯಸುತ್ತಾರೆ. ಅಧರ್ಮದಿಂದಲಾದರೂ ಸರಿ, ಅನ್ಯಾಯದಿಂದಲಾದರೂ ಸರಿ ಹಣ ಸಂಪಾದಿಸಬೇಕು, ಪಕ್ಕದವನ ಆಸ್ತಿಯನ್ನು ಕಿತ್ತುಕೊಂಡಾದರೂ ನಾನು ಸುಖವಾಗಿರಬೇಕು ಎಂದು ಆಲೋಚಿಸುತ್ತಿದ್ದಾರೆ.

ಮತ್ತೆ ರಾವಣಾಸುರನು ಎಷ್ಟೋ ದೊಡ್ಡ ಜ್ಞಾನಿಯಾಗಿದ್ದರೂ, ತನ್ನ ದೌರ್ಬಲ್ಯವನ್ನು ತಿದ್ದಿಕೊಳ್ಳಬೇಕೆಂಬ ಅರಿವಿಲ್ಲದೆ, ದೈವವಾಗಬೇಕಾದವನು ರಾಕ್ಷಸನಾಗಿಯೇ ಉಳಿದುಹೋದನು. ಅಧರ್ಮದ ಹಾದಿಯಲ್ಲಿ ನಡೆದರೆ ಹಿಂದಿನ ತಲೆಮಾರುಗಳವರು ಹೇಗೆ ನಾಶವಾದರು ಎಂಬುದನ್ನು ನೀವು ತಿಳಿದುಕೊಳ್ಳಬೇಕು. ದೈವದಂತಿರಬೇಕಾದವರು ಕೂಡ ಅಧರ್ಮದ ಪರವಾಗಿದ್ದರೆ, ಅಧರ್ಮವನ್ನು ಆಚರಿಸಿದರೆ ಅಥವಾ ಅಧರ್ಮವನ್ನು ಪ್ರೋತ್ಸಾಹಿಸಿದರೆ ಅವರು ಹೇಗೆ ನಾಶವಾದರು ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ.

**ಅಧರ್ಮವು ಬೆಂಕಿಯಿದ್ದಂತೆ:** ಅದು ನಿಮ್ಮ ಮನೆಯಲ್ಲಿದ್ದರೆ ನಿಮ್ಮನ್ನು ಸುಡುತ್ತದೆ, ಪಕ್ಕದ ಮನೆಯನ್ನೂ ಸುಡುತ್ತದೆ. ಅದು 'ಬಡಬಾಗ್ನಿ' (ಸಮುದ್ರದೊಳಗಿನ ಬೆಂಕಿ) ಇದ್ದಂತೆ; ಮೇಲೆ ತಂಪಾಗಿ ಕಂಡರೂ ಒಳಗಡೆ ಬೆಂಕಿ ಇರುತ್ತದೆ. ಹಾಗೆಯೇ, ಮನುಷ್ಯರೆಲ್ಲರೂ ನೋಡಲು ಒಂದೇ ರೀತಿ ಇರುತ್ತಾರೆ ಬಹಳ ಸೌಮ್ಯವಾಗಿ, ಮುಗ್ಧರಂತೆ ಕಾಣುತ್ತಾರೆ. ಆದರೆ ಒಬ್ಬನ ಅಂತರಂಗವು ಎಷ್ಟು ಕಲುಷಿತವಾಗುತ್ತದೋ, ಎಷ್ಟು ಅಪವಿತ್ರವಾಗುತ್ತದೋ, ಅಷ್ಟು ಅವನು ತನ್ನ ಪಕ್ಕದವರನ್ನೂ ನಾಶಪಡಿಸುತ್ತಿರುತ್ತಾನೆ. ಅವನು ನಾಶವಾದರೆ ನಷ್ಟವಿಲ್ಲ, ಅದು ಅವನ ವೈಯಕ್ತಿಕ ನಷ್ಟ. ಆದರೆ ಅವನಿಂದ ಸಮಾಜವೇ ನಾಶವಾಗುತ್ತದೆ.

**ಕುರುಕ್ಷೇತ್ರ ಯುದ್ಧದ ಉದಾಹರಣೆ:** ಈಗ ನೋಡಿ, ಕೌರವ–ಪಾಂಡವರ ಯುದ್ಧದಲ್ಲಿ ಎಷ್ಟು ಜನರು ಮರಣ ಹೊಂದಬೇಕಾಯಿತು. ಇದು ದುರ್ಯೋಧನನ ನಿರ್ಧಾರದಿಂದಾಗಿ ನಡೆದ ಇಂತಹ ಘೋರ ಘಟನೆ. ಯಾರ ಚರಿತ್ರೆಯನ್ನು ತೆಗೆದುಕೊಂಡರೂ, ಅಧರ್ಮದ ಹಾದಿಯಲ್ಲಿ ನಡೆದವರು ಈ ಭೂಮಿಯ ಮೇಲೆ ಶಾಶ್ವತವಾಗಿ ಸುಖವಾಗಿ ಬಾಳಿದ ಉದಾಹರಣೆಯೇ ಇಲ್ಲ. ಅದಕ್ಕಾಗಿಯೇ ಅಧರ್ಮವು ತಾತ್ಕಾಲಿಕವಾಗಿ ಸಂತೋಷವನ್ನು ನೀಡಬಹುದು, ಆದರೆ ಕೊನೆಗೆ ಶಾಶ್ವತವಾದ ದುಃಖವನ್ನೇ ನೀಡುತ್ತದೆ ಮತ್ತು ಶಾಶ್ವತವಾಗಿ ಭಗವಂತನಿಂದ ದೂರ ಮಾಡುತ್ತದೆ ಎಂದು ತಿಳಿದುಕೊಂಡರೆ, ಯಾರೂ ಅಧರ್ಮದ ಜೀವನ ನಡೆಸಲು

ಇಷ್ಟಪಡುವುದಿಲ್ಲ. ಎಷ್ಟೇ ಕಷ್ಟವಾದರೂ ಧರ್ಮದ ಪರವಾಗಿಯೇ ಇರುತ್ತಾರೆ.

ಮಹಾಭಾರತದಲ್ಲಿ ಭಗವಂತನು ಧರ್ಮದ ಪರವಾಗಿದ್ದನು ಮತ್ತು ಪಾಂಡವರನ್ನು ಹೆಜ್ಜೆ ಹೆಜ್ಜೆಗೂ ಕಾಪಾಡುತ್ತಲೇ ಬಂದನು. ಆದರೆ ಕೌರವರು ಕೇವಲ ತಾತ್ಕಾಲಿಕ ಭೋಗ ಮತ್ತು ಸುಖವನ್ನು ಮಾತ್ರ ಅನುಭವಿಸಿದರು. ಎಷ್ಟುಹೊತ್ತು ಪಾಂಡವರನ್ನು ಹೇಗೆ ನಾಶಮಾಡಬೇಕೆಂದು ಯಾವಾಗಲೂ ಯೋಚಿಸುತ್ತಾ (ಕೌರವರು) ಸರಿಯಾಗಿ ನಿದ್ರೆಯಿಲ್ಲದೆ ಇದ್ದರು. ಆದರೆ ಪಾಂಡವರು ಅಡವಿಯಲ್ಲಿದ್ದರೂ ಪ್ರಶಾಂತವಾಗಿ ಜೀವಿಸಿದರು, ಏಕೆಂದರೆ ದೈವವು ಅವರ ಪರವಾಗಿತ್ತು. ನೀವು ಕೂಡ ಧರ್ಮದ ಮಾರ್ಗದಲ್ಲಿ ನಡೆದಾಗ, ಆತ್ಮ ಎಂಬ ದೈವವು ನಿಮ್ಮ ಶರೀರದಲ್ಲೇ ಇದೆ ಅಲ್ಲವೇ? "ನಾನು ಏಕೆ ಭಯಪಡಬೇಕು? ನಾನು ಭಗವಂತನೊಂದಿಗಿದ್ದೇನೆ, ನನ್ನಲ್ಲೇ ಭಗವಂತನಿದ್ದಾನೆ" ಎಂದು ಅಂ-ದುಕೊಂಡರೆ ಯಾವುದೇ ತಪ್ಪು ಮಾಡಿದರೂ ಅದು ನಮಗೆ ತಿಳಿಯುತ್ತದೆ. ಈ ಆತ್ಮವು ನನ್ನ ಶರೀರದಲ್ಲಿ ಇರುವಾಗ ನನ್ನ ಪ್ರವರ್ತನೆಯಾಗಲಿ, ನನ್ನ ಆಲೋಚನೆಗಳಾಗಲಿ ಆತನಿಗೆ ತಿಳಿಯದೆ ಇರುವುದಿಲ್ಲ. ಅಂದಮೇಲೆ ನಾನು ಅಧರ್ಮದಿಂದ ಜೀವಿಸಬಾರದು ಎಂದುಕೊಳ್ಳುತ್ತಾ ಯಾವಾಗಲೂ ಧರ್ಮಬದ್ಧವಾಗಿ ಇರಬೇಕು.

ಜೀವಿಯಾಗಿ ಬಂದ ನಾನು ದೇವನಾಗಿ ಬೆಳೆಯಬೇಕೆಂದರೆ ಅಧರ್ಮವನ್ನು ಬಿಟ್ಟು, ಅಧರ್ಮದ ಆಲೋಚನೆಗಳನ್ನು ಬಿಟ್ಟು, ಅಧರ್ಮದ ಕೆಲಸಗಳನ್ನು ಬಿಟ್ಟು ನಾನು ಧರ್ಮದಿಂದ ಜೀವಿಸಿದಾಗಲೇ ದೈವವಾಗಿ ಬೆಳೆಯಬಲ್ಲೆ ಎಂಬ ವಿಷಯವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಬುದ್ಧ ಭಗವಾನರು ಧರ್ಮದ ಬಗ್ಗೆ, ಅಧರ್ಮದ ಬಗ್ಗೆ ಅಷ್ಟು ವಿವರವಾಗಿ ನಮಗೆ ತಿಳಿಸಿಕೊಟ್ಟಿದ್ದಾರೆ. ಹಾಗೆಯೇ ಪತ್ರೀಜೀಯವರು ಕೂಡ ಪಾಪಗಳನ್ನು ಮಾಡಬಾರದು ಎಂದು ಪಾಪದ ಬಗ್ಗೆ, ಕರ್ಮ ಸಿದ್ಧಾಂತದ ಬಗ್ಗೆ ನಮಗೆ ಕಲಿಸಿಕೊಟ್ಟಿದ್ದಾರೆ. ಆದ್ದರಿಂದ ತಿಳಿಯದೆ ತಪ್ಪು ಮಾಡಿರಬಹುದು, ಆದರೆ ತಿಳಿದ ಮೇಲೆ ನಿಮ್ಮ ನಡವಳಿಕೆಯನ್ನು ಸರಿಪಡಿಸಿಕೊಳ್ಳದಿದ್ದರೆ ನಿಮ್ಮ ದುಃಖಕ್ಕೆ ನೀವೇ ಕಾರಣರಾಗುತ್ತೀರಿ. ನೀವು ಈ ಜನ್ಮದಲ್ಲಿ ಮಾತ್ರವಲ್ಲ, ಮರಣದ ನಂತರವೂ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅಂದರೆ ಮುಂದಿನ ಜನ್ಮಗಳು ನೀಚ ಜನ್ಮಗಳಾಗಿರುತ್ತವೆ. ಅಂತಹ ನೋವಿನ ಜೀವನವನ್ನು ಅನುಭವಿಸುವುದು ಏಕೆ? ಧರ್ಮವನ್ನು ತಿಳಿದುಕೊಂಡು ಧರ್ಮವಂತ ಜೀವನವನ್ನು ನಡೆಸಿ, ಧ್ಯಾನ ಮಾಡಿ ದೈವವಾಗಿ ಬದಲಾಗಿ.

# ಧರ್ಮವನ್ನು ಆಚರಿಸಬೇಕೆಂದರೆ?

ಧರ್ಮ ಎಂದರೆ ಏನು? ಧರ್ಮವನ್ನು ಹೇಗೆ ಆಚರಿಸುತ್ತಾರೆ? ಆಚರಿಸುವವರ ಜೀವನ ವಿಧಾನ ಹೇಗಿರುತ್ತದೆ? ಅಧರ್ಮದ ಹಾದಿಯಲ್ಲಿ ಜೀವಿಸುವವರು ಹೇಗಿರುತ್ತಾರೆ? ಅವರ ಮನಸ್ಥಿತಿಗಳು ಹೇಗಿರುತ್ತವೆ? ಅವರ ಜೀವನ ವಿಧಾನ ಹೇಗಿರುತ್ತದೆ? ಎಂಬ ವಿಷಯಗಳನ್ನು ನಾವು ತಿಳಿದುಕೊಂಡಿದ್ದೇವೆ. ಧ್ಯಾನವು ಚೆನ್ನಾಗಿ ಸಿದ್ಧಿಸಬೇಕೆಂದರೆ ಮತ್ತು ಜ್ಞಾನವು ಹೆಚ್ಚಾಗಬೇಕೆಂದರೆ, ಒಬ್ಬ ಜ್ಞಾನಿಯು ತನ್ನ ಜೀವನದಲ್ಲಿ ಈ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವುದು ಅವಶ್ಯಕ.

ಧರ್ಮವನ್ನು ಆಚರಿಸಬೇಕೆಂದರೆ ಮುಖ್ಯವಾಗಿ ನಮ್ಮ ಜೀವನದಲ್ಲಿ ನೀತಿ ಮತ್ತು ನಿಷ್ಠೆ (ಪ್ರಾಮಾಣಿಕತೆ) ಎಂಬ ಈ ಎರಡು ಪ್ರಮುಖ ಪಾತ್ರ ವಹಿಸುತ್ತವೆ. ಎಲ್ಲರೂ ಧರ್ಮವನ್ನು ಆಚರಿಸಬೇಕೆಂದು ಹೇಳುತ್ತಿರುತ್ತಾರೆ, ಆದರೆ ಜೀವನದಲ್ಲಿ ನೀತಿ ಮತ್ತು ನಿಷ್ಠೆ ಎಂಬ ಈ ಎರಡೂ ಇದ್ದರೆ ಮಾತ್ರ ಧರ್ಮವನ್ನು ಸರಿಯಾಗಿ ಆಚರಿಸಲು ಸಾಧ್ಯ. ನೀವು ಜೀವನದಲ್ಲಿ ಎಷ್ಟು ನೀತಿವಂತರಾಗಿರುತ್ತೀರೋ, ಎಷ್ಟು ನಿಷ್ಠಾವಂತರಾಗಿರುತ್ತೀರೋ, ಧರ್ಮವನ್ನು ಅಷ್ಟೇ ಚೆನ್ನಾಗಿ ಆಚರಿಸುತ್ತೀರಿ. ಆಗ ನಿಮಗೆ ಧ್ಯಾನವು ಚೆನ್ನಾಗಿ ಸಿದ್ಧಿಸುತ್ತದೆ ಮತ್ತು ದೈವಕ್ಕೆ ಹತ್ತಿರವಾಗುತ್ತೀರಿ. ಹಾಗಾದರೆ ನೀತಿ ಎಂದರೆ ಏನು? ನಿಷ್ಠೆ ಎಂದರೆ ಏನು? ಎಂಬುದನ್ನು ತಿಳಿದುಕೊಳ್ಳೋಣ. ಪೂರ್ವಕಾಲದಲ್ಲಿ ನೀತಿ ಮತ್ತು ನಿಷ್ಠೆಯಿಂದ ಬದುಕುವವರನ್ನು 'ದೊಡ್ಡ ಶೀಲವಂತರು' ಅಥವಾ 'ಶೀಲವಂತೆಯರು' ಎನ್ನುತ್ತಿದ್ದರು. ಆದರೆ ದಿನಕಳೆದಂತೆ 'ಶೀಲ' ಎಂಬ ಪದವನ್ನು ಕೇವಲ ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತಗೊಳಿಸಿದರು. ಆದರೆ ಶೀಲ ಎಂದರೆ ಕೇವಲ ನಡತೆ (Character) ಮಾತ್ರವಲ್ಲ. ನೀತಿ ಮತ್ತು ನಿಷ್ಠೆಯಿಂದ ಬದುಕುವವರ ಬಗ್ಗೆ ಹೇಳುವಾಗ 'ಶೀಲ' ಎಂಬ ಪದವನ್ನು ಬಳಸುತ್ತಾರೆ. ಮತ್ತೆ ನೀತಿವಂತರಾಗಿ ಬದುಕಲು ಹೇಗೆ ಇರಬೇಕು? ಎಂಬ ಪ್ರಶ್ನೆಗೆ ಪೂರ್ವಕಾಲದಲ್ಲಿ ಕೆಲವು ನಿಯಮಗಳನ್ನು ಮತ್ತು ನಿಬಂಧನೆಗಳನ್ನು ರೂಪಿಸಿದ್ದರು. ಅಂತಹ ಜೀವನವನ್ನೇ ನೀತಿವಂತ ಜೀವನ ಅಥವಾ ಶೀಲವಂತ ಜೀವನ ಎಂದು ಕರೆಯಲಾಗುತ್ತಿತ್ತು.

ಆ ನಿಯಮಗಳು ಮತ್ತು ನಿಬಂಧನೆಗಳು ಯಾವುವು ಎಂಬುದನ್ನು ಈಗ ತಿಳಿದುಕೊಳ್ಳೋಣ:

1) **ಯಾವ ಜೀವಿಗೂ ಹಾನಿ ಮಾಡಬಾರದು.**
2) **ಕಳ್ಳತನ ಮಾಡಬಾರದು.**
3) **ವ್ಯಭಿಚಾರ ಮಾಡಬಾರದು.**
4) **ಸುಳ್ಳು ಹೇಳಬಾರದು.**

ಪೂರ್ವದಲ್ಲಿ ಗುರುಕುಲ ಶಿಕ್ಷಣವಿದ್ದ ಕಾರಣ, ಗುರುಗಳು ಶಿಷ್ಯರಿಗೆ ಈ ನಾಲ್ಕು ವಿಷಯಗಳನ್ನು ಪದೇ ಪದೇ ಹೇಳುತ್ತಾ, ಅವರನ್ನು ಪ್ರೋತ್ಸಾಹಿಸುತ್ತಾ ಸರಿಯಾದ ಜೀವನ ವಿಧಾನವನ್ನು ಕಲಿಸುತ್ತಿದ್ದರು. ಅಂದರೆ ನೀತಿವಂತರಾಗಿ ಜೀವಿಸಲು ಈ ನಾಲ್ಕು ವಿಷಯಗಳನ್ನು ಪಾಲಿಸುವುದು ಮುಖ್ಯ.

**1) ಯಾವ ಜೀವಿಗೂ ಹಾನಿ ಮಾಡಬಾರದು:** ನೀತಿ ಎಂದರೆ ಸಂಘ ನೀತಿ (ಸಾಮಾಜಿಕ ನೀತಿ). ನೀವು ಈ ಸಂಘದಲ್ಲಿರುವಾಗ ಕೇವಲ ಪಕ್ಕದವರನ್ನು ಪ್ರೀತಿಸಿದರೆ ಸಾಕು ಎಂದುಕೊಳ್ಳುತ್ತಾ ಒಂದು ಪರಿಮಿತ ಜ್ಞಾನದಲ್ಲಿ ಇರುತ್ತೀರಿ. ಆದರೆ ಕೇವಲ ಸಹಮಾನವರನ್ನಷ್ಟೇ ಅಲ್ಲ, ಪ್ರಪಂಚದಲ್ಲಿರುವ ಸರ್ವ ಜೀವಿಗಳನ್ನು ಪ್ರೀತಿಸಬೇಕು ಎನ್ನುವುದೇ ನಿಜವಾದ ಸಂಘ ನೀತಿ.

ಒಬ್ಬ ಮಾನವನ ಧರ್ಮವೇನೆಂದರೆ– ತಾನು ಯಾರು? ತಾನು ಏಕೆ ಈ ಭೂಮಿಗೆ ಬಂದಿದ್ದಾನೆ? ಎಂದು ತಿಳಿದುಕೊಂಡರೆ, ತಾನು ಆತ್ಮನೆಂದು ಮತ್ತು ಸರ್ವ ಜೀವಿಗಳು ಕೂಡ ಆತ್ಮ ಸ್ವರೂಪಗಳೇ ಎಂದು ತಿಳಿದುಕೊಂಡು ಯಾವ ಜೀವಿಯನ್ನೂ ಹಿಂಸಿಸುವುದಿಲ್ಲ. ಯಾವ ಜೀವಿಯನ್ನು ಹಿಂಸಿಸಿದರೂ ತನ್ನನ್ನು ತಾನೇ ಹಿಂಸಿಸಿಕೊಂಡಂತೆ ಎಂದು ಅವನು ತಿಳಿದುಕೊಳ್ಳುತ್ತಾನೆ.

ಇನ್ನು ಮಾಂಸಾಹಾರವನ್ನು ಏಕೆ ಸೇವಿಸುತ್ತಿದ್ದಾರೆ ಎಂದರೆ– ತಂದೆ ತಾಯಿಗಳ ಅಭ್ಯಾಸದ ಬಲದಿಂದ, ಅಜ್ಞಾನದಲ್ಲಿ ಇರುವುದರಿಂದ ಮತ್ತು ಸತ್ಯ ತಿಳಿಯದ ಕಾರಣ ಜೀವಿಗಳನ್ನು ಹಿಂಸಿಸುತ್ತಿದ್ದಾರೆ. ಅಜ್ಞಾನದಲ್ಲಿ ಇರುವವರಿಗೆ ಯಾವ ಜೀವಿಯನ್ನೂ ಹಿಂಸಿಸಬಾರದು ಎಂಬ ವಿಷಯ ತಿಳಿಯದು. "ಜೀವ ಹಿಂಸೆ ಮಹಾಪಾಪ" ಎಂದು ತಿಳಿದಿದ್ದರೂ ಸಹ ಮಾಂಸ ಬಿಡಲು ಸಾಧ್ಯವಾಗುತ್ತಿಲ್ಲ ಎಂದರೆ, ಅವರ ಮನಸ್ಸಿನಲ್ಲಿ ಇನ್ನೂ ಕೆಟ್ಟ ಭಾವನೆಗಳು, ಕ್ರೌರ್ಯ ಮತ್ತು ದುರಾಲೋಚನೆಗಳು ಹೋಗಿಲ್ಲ ಎಂದು ಅರ್ಥೈಸಿಕೊಳ್ಳಬಹುದು. ನಿಮ್ಮಲ್ಲಿ ಅನುಕಂಪ, ದಯೆ, ಕರುಣೆ ಮತ್ತು ಪ್ರೇಮ ಎಂಬ ಗುಣಗಳಿದ್ದರೆ ಸಣ್ಣ ಜೀವಿಯನ್ನು ಕೂಡ ಕೊಲ್ಲಲು ಸಾಧ್ಯವಿಲ್ಲ. ನೋಡಿ, ನಿಮ್ಮ ಕೈಗೆ ಒಂದು ಪಿನ್ನಾಗಲಿ ಅಥವಾ ಸೂಜಿಯಾಗಲಿ ಚುಚ್ಚಿಕೊಂಡರೆ, ಇಲ್ಲವೇ ಕಾಲಿನ ಕೆಳಗೆ ಒಂದು ಕಲ್ಲು ತಗುಲಿದರೆ, ಅಥವಾ ಯಾವುದಾದರೂ ಅಪಘಾತದಲ್ಲಿ ಕಾಲಿಗೆ ಪೆಟ್ಟಾದರೆ ಎಷ್ಟು ವಿಲವಿಲನೆ ಒದ್ದಾಡುತ್ತೀರಿ. 'ಅಮ್ಮೋ ಪೆಟ್ಟಾಯಿತು, ಅಮ್ಮೋ ರಕ್ತ ಬರುತ್ತಿದೆ' ಎನ್ನುತ್ತೀರಿ. ಹಾಗೆಯೇ ನಿಮ್ಮ ಮಗುವಿಗೆ ಸಣ್ಣ ನೋವಾದರೂ ಅಥವಾ ಎಲ್ಲಿಯಾದರೂ ಗೀಚಿಕೊಂಡರೂ ತುಂಬಾ ಪಶ್ಚಾತ್ತಾಪ ಪಡುತ್ತೀರಿ.

ಆದರೆ ಒಂದು ಕೋಳಿಯನ್ನು ಸಾಕಿ ಬೆಳೆಸಿ ಕೊಲ್ಲುತ್ತಿದ್ದೀರಿ ಎಂದರೆ ನಿಮ್ಮ

ಮನಸ್ಸಿನಲ್ಲಿ ಅನುಕಂಪವಾಗಲಿ, ದಯೆಯಾಗಲಿ ಇಲ್ಲ ಎಂದರ್ಥ. 'ಎದುರಿನವರು ಏನಾದರೂ ಆಗಲಿ ನಾನು ಚೆನ್ನಾಗಿರಬೇಕು, ನಾನು ಸುಖವಾಗಿರಬೇಕು, ನನ್ನ ಇಷ್ಟ ಬಂದಂತೆ ನಾನು ಇರಬೇಕು' ಎಂದು ಅಂದುಕೊಳ್ಳುತ್ತಿದ್ದೀರಿ. ಆದರೆ ಸೃಷ್ಟಿಯಲ್ಲಿ ಅಜ್ಞಾನಿ ತಪ್ಪು ಮಾಡಿದರೆ ಸಣ್ಣ ಶಿಕ್ಷೆ, ಜ್ಞಾನ ಪಡೆದ ಮೇಲೆ ತಪ್ಪು ಮಾಡಿದರೆ ದೊಡ್ಡ ಶಿಕ್ಷೆ ಸಿಗುತ್ತದೆ. ಮತ್ತೆ ಗುರುಗಳ ಬಳಿ ಬಂದು ಪಾಪ ಮಾಡುವುದು, ಜೀವಹಿಂಸೆ ಮಾಡುವುದು ಎಷ್ಟು ತಪ್ಪು ಎಂದು ತಿಳಿದುಕೊಂಡಿದ್ದೀರಿ. ಆದರೆ ಇನ್ನು ನಿಮ್ಮಲ್ಲಿ ಕೆಟ್ಟ ಭಾವನೆಗಳು, ಕೆಟ್ಟ ಆಲೋಚನೆಗಳು ಹೋಗದಿದ್ದರೆ ಆ ಭಗವಂತನು ನಿಮ್ಮನ್ನು ಮೆಚ್ಚುವುದು ಯಾವಾಗ? ನೀವು ಮೋಕ್ಷ ಪಡೆಯುವುದು ಯಾವಾಗ?

ನೀವು ಆತ್ಮವನ್ನು ಮರೆತು ಮನಸ್ಥಿತಿಯಲ್ಲಿ ತಪ್ಪುಗಳನ್ನು ಮಾಡುತ್ತಾ ಹೋದರೆ ನಿಮಗೆ ಶಿಕ್ಷೆ ತಪ್ಪದು. ಅದಕ್ಕಾಗಿಯೇ ಒಂದು ಜೀವಿಯನ್ನು ಕೊಲ್ಲುವಾಗ ನೀವು ನೋಡುತ್ತಿದ್ದರೂ ತಪ್ಪೇ, ಅದನ್ನು ಹೇಳದೇ ಇರುವುದು ತಪ್ಪೇ. ಅಂದರೆ ಯಾವುದೋ ಮೂಲೆಯಲ್ಲಿ ಇನ್ನು ಕ್ರೂರತ್ವ ಇದೆ, ದಯೆ ಇಲ್ಲ ಮತ್ತು ದುರಾಲೋಚನೆಗಳೊಂದಿಗೆ ಇದ್ದೀರಿ ಎಂದು ಅರ್ಥ ಮಾಡಿಕೊಳ್ಳಬಹುದು.

ಅದಕ್ಕಾಗಿಯೇ ಪೂರ್ವದಲ್ಲಿ ಗುರುಗಳು 'ಯಾವ ಜೀವಿಯನ್ನು ನಿನ್ನ ಕೈಯಿಂದಾಗಲಿ ಅಥವಾ ಮಾತುಗಳಿಂದಾಗಲಿ ನೋಯಿಸಬಾರದು' ಎಂದು ಹೇಳುತ್ತಿದ್ದರು. ಏಕೆ ಈ ಮಾತು ಹೇಳಿದ್ದಾರೆಂದರೆ, ಕೆಲವು ಕುಲಗಳಲ್ಲಿ ಹುಟ್ಟಿದವರು ಮಾಂಸಾಹಾರ ಸೇವಿಸುವುದಿಲ್ಲ, ಆದ್ದರಿಂದ ಮಾತುಗಳಿಂದಾಗಲಿ ಅಥವಾ ಕಾರ್ಯಗಳಿಂದಾಗಲಿ ನೀನು ಯಾವುದೇ ಜೀವಿಗೆ ನೋವು ಉಂಟು ಮಾಡಬಾರದು ಎಂದು ತಿಳಿಸಿದರು.

**2) ಕಳ್ಳತನ ಮಾಡಬಾರದು:** ಕಳ್ಳತನ ಮಾಡಬಾರದು, ಏಕೆಂದರೆ ಆ ಭಗವಂತನು ನಮಗೆ ಈ ಜನ್ಮದಲ್ಲಿ ಎಷ್ಟು ಪ್ರಾಪ್ತಿಯಿದೆಯೋ ಅಷ್ಟನ್ನು ನೀಡಿದ್ದಾನೆ. ಇನ್ನು ಕಳ್ಳತನ ಮಾಡುವುದರಿಂದ ಆ ಭಗವಂತನ ಆಜ್ಞೆಯನ್ನು ಉಲ್ಲಂಘಿಸಿದಂತೆಯೇ. ನಿನಗೆ ನೀಡಿದ ವಿಷಯದಲ್ಲಿ ತೃಪ್ತಿ ಇಲ್ಲದೆ ಪಕ್ಕದವರನ್ನು ದೋಚುತ್ತಿದ್ದೀಯ ಎಂದರೆ ನೀನು ಆ ಭಗವಂತನ ನಿರ್ಧಾರವನ್ನು ಅಂದರೆ ಆಜ್ಞೆಯನ್ನು ಉಲ್ಲಂಘಿಸಿದಂತೆಯೇ.

ಈ ಭೂಮಿಯ ಮೇಲೆ ಕಳ್ಳತನ ಮಾಡಿದವರಿಗೆ ಅದಕ್ಕೆ ತಕ್ಕ ಶಿಕ್ಷೆ ನೀಡಿ ಜೈಲಿಗೆ ಹಾಕುತ್ತಾರೆ, ಅವನು ಆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನೋಡಿದರೆ ಮತ್ತೆ ಅವನನ್ನು ಹಿಡಿದು ಆ ಶಿಕ್ಷೆಯನ್ನು ದುಪ್ಪಟ್ಟು ಮಾಡುತ್ತಾರೆ. ಹಾಗೆಯೇ ಇಲ್ಲಿ ಕೂಡ ಆ

ಭಗವಂತನು ನೀಡಿದುದಕ್ಕೆ ಸಂತೃಪ್ತಿ ಪಡದೆ ಅತ್ಯಾಸೆಯಿಂದ ಪಕ್ಕದವರನ್ನು ದೋಚಲು ನೋಡಿದರೂ, ಅಡ್ಡದಾರಿ ಹಿಡಿದು ಕಳ್ಳತನ ಮಾಡಿದರೂ ಆ ಭಗವಂತ ಕೂಡ ಅದಕ್ಕೆ ತಕ್ಕ ಶಿಕ್ಷೆಯನ್ನು ನೀಡುತ್ತಾನೆ.
ಇನ್ನೂ ನಿನ್ನ ಮನಸ್ಸಿನಲ್ಲಿ ಎಂತಹ ಕೆಟ್ಟ ಆಲೋಚನೆ ಇದ್ದರೆ ಇತರರ ಸೊತ್ತನ್ನು ಕಳ್ಳತನ ಮಾಡುತ್ತೀಯ ಎಂದರೆ, "ನಾನು ಮೋಸ ಮಾಡಿದರೂ ಅವರು ತಿಳಿದುಕೊಳ್ಳಲು ಸಾಧ್ಯವಿಲ್ಲ" ಎನ್ನುವ ಅಜ್ಞಾನದಲ್ಲಿ ನೀನಿದ್ದೀಯ. ಕಳ್ಳತನ ಎನ್ನುವುದು ಎಷ್ಟು ದೊಡ್ಡ ಪಾಪವೋ, ಮತ್ತೆ ಒಂದು ಜನ್ಮವೆತ್ತಿ ಅದರ ಫಲವನ್ನು ಅನುಭವಿಸಬೇಕು. ಏಕೆಂದರೆ ನಿಮಗೆ ಬೇಕಾದದ್ದು, ನಿಮಗೆ ಬರಬೇಕಾದದ್ದು ನಿಮ್ಮ ಪುಣ್ಯ ಎಷ್ಟಿದೆಯೋ ಅಷ್ಟನ್ನು ದೇವರು ನಿಮಗೆ ನೀಡುತ್ತಲೇ ಇದ್ದಾನೆ.

ಆದರೆ ನಿಮ್ಮಲ್ಲಿ ಅತ್ಯಾಸೆ ಎಂಬ ಗುಣ ಇರುವುದರಿಂದ, ಆ ಕೆಟ್ಟ ಆಲೋಚನೆ ಬಂದು ಕಳ್ಳತನಕ್ಕೆ ಮುಂದಾಗುತ್ತಿದ್ದೀರಿ, ಅಂದರೆ ಕರ್ಮಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದೀರಿ. ಮಾನವ ಜನ್ಮ ಎತ್ತಿರುವುದೇ ಕರ್ಮಗಳನ್ನು ದಹಿಸಿಕೊಳ್ಳಲು (ನಾಶಪಡಿಸಲು). ಪ್ರಾರಬ್ಧ ಕರ್ಮಗಳನ್ನು ಅನುಭವಿಸುತ್ತಾ, ಸಂಚಿತ ಕರ್ಮಗಳನ್ನೆಲ್ಲಾ ದಹಿಸಿ, ಆಗಾಮಿ ಕರ್ಮಗಳನ್ನು ಮಾಡದಂತೆ ಇರಬೇಕು. ಅಂದರೆ ಈ ಜನ್ಮದಲ್ಲಿ ಮಾಡುವ ಕರ್ಮಗಳೆಲ್ಲಾ ಆಗಾಮಿ ಕರ್ಮಗಳು; ಅವು ಪಾಪವಾಗಲಿ ಅಥವಾ ಪುಣ್ಯವಾಗಲಿ ಅವುಗಳನ್ನು ಮಾಡದೆ ಇರಲಾರದೆ ಹೋಗುತ್ತಿದ್ದೀರಿ ಎಂದರೆ ನಿಮ್ಮಲ್ಲಿ ಎಷ್ಟು ದುರಾಸೆ ಇದೆ ಎಂದು ಅರ್ಥವಾಗುತ್ತದೆ.

**3) ವ್ಯಭಿಚಾರ ಮಾಡಬಾರದು:** ಮತ್ತೆ ಹಾಗೆಯೇ ವ್ಯಭಿಚಾರ ಮಾಡಬಾರದು ಎಂದು ಹೇಳಲಾಗಿದೆ. ಅಂದರೆ ಧರ್ಮವನ್ನು ಆಚರಿಸುವುದರಲ್ಲಿ ಅದು ಕೂಡ ಮುಖ್ಯ ಪಾತ್ರ ವಹಿಸುತ್ತದೆ. ಶ್ರೀರಾಮನ ಜೀವನವು ಧರ್ಮ ಎಂದು ಏಕೆ ಹೇಳುತ್ತಾರೆಂದರೆ, ಒಬ್ಬಳೇ ಪತ್ನಿ, ಒಂದೇ ಮಾತು ಎನ್ನುವ ಆತನು ಆ ಪದ್ಧತಿಯನ್ನೇ ಅನುಸರಿಸಿದನು.

ಮದುವೆಯ ದಿನದಂದು "ಧರ್ಮೇಚ, ಅರ್ಥೇಚ, ಕಾಮೇಚ, ಮೋಕ್ಷೇಚ, ನಾತಿಚರಾಮಿ" ಎಂದು ಪ್ರಮಾಣ ಮಾಡುತ್ತಾರೆ. ಅಂದರೆ ಈ ನಾಲ್ಕು ವಿಷಯಗಳಲ್ಲಿ ನಿನ್ನನ್ನು ಬಿಟ್ಟು ಇರುವುದಿಲ್ಲ ಎಂದು ಅರ್ಥ.

**ಧರ್ಮೇಚ:** ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಮಾಡುವಾಗ ನಿನ್ನೊಂದಿಗೇ ಸೇರಿ ಮಾಡುತ್ತೇನೆ.

**ಅರ್ಥೇಚ:** ನಾನು ಎಷ್ಟು ಸಂಪಾದಿಸಿದರೂ ನಿನ್ನೊಂದಿಗೇ ಸೇರಿ ಅದನ್ನು ಖರ್ಚು ಮಾಡುತ್ತೇನೆ.

**ಕಾಮೇಚ:** ನಿನ್ನನ್ನು ಹೊರತುಪಡಿಸಿ ಬೇರೆಯವರಿಂದ ದೈಹಿಕ ಸುಖವನ್ನು ಪಡೆಯುವುದಿಲ್ಲ.

**ಮೋಕ್ಷೇಚ:** ಮೋಕ್ಷಕ್ಕಾಗಿ ಮಾಡುವ ಪ್ರಯತ್ನವನ್ನೂ ನಿನ್ನೊಂದಿಗೇ ಸೇರಿ ಮಾಡುತ್ತೇನೆ ಎಂದು ಮದುವೆಯ ದಿನ ಸರ್ವ ದೇವತೆಗಳ ಸಾಕ್ಷಿಯಾಗಿ ಪ್ರಮಾಣ ಮಾಡುತ್ತಾರೆ.

ಈ ಕಲಿಯುಗದಲ್ಲಿ ಇವುಗಳ ಅರ್ಥ ತಿಳಿಯದೆ, ಮನಸ್ಸು ಚಂಚಲವಾಗಿ ಪ್ರಸ್ತುತ ಸಮಾಜದಲ್ಲಿ ಎಷ್ಟೋ ತಪ್ಪು ಕೆಲಸಗಳು ನಡೆಯುತ್ತಿವೆ. ನಿನ್ನಲ್ಲಿ ಮಿತಿಮೀರಿದ ದೈಹಿಕ ಕಾಮವಿದ್ದಾಗ ನೀನು ವ್ಯಭಿಚಾರ ಮಾಡುತ್ತೀಯೆ. ಉದಾಹರಣೆಗೆ ರಾವಣಾಸುರನ ಬಗ್ಗೆ ಎಷ್ಟೋ ಬಾರಿ ಹೇಳಿಕೊಂಡಿದ್ದೇವೆ. ಹೀಗೆ ಏಕೆ ಮಾಡುತ್ತಿದ್ದಾರೆ ಎಂದರೆ ಮನಸ್ಸಿನ ಚಂಚಲ ಸ್ಥಿತಿ, ನಿನ್ನಲ್ಲಿರುವ ಅಹಂಕಾರ, ನಿನ್ನಲ್ಲಿರುವ ರಾಗದ್ವೇಷಗಳು, ನಿನ್ನಲ್ಲಿರುವ ಅತ್ಯಾಸೆ ಮತ್ತು ನಿನ್ನಲ್ಲಿರುವ ಕೋರಿಕೆಗಳು (ಆಸೆಗಳು).

**4) ಸುಳ್ಳು ಹೇಳಬಾರದು:** ಸುಳ್ಳು ಹೇಳಬಾರದು, ಒಂದು ವೇಳೆ ಸುಳ್ಳು ಹೇಳಿದರೆ ಏನಾಗುತ್ತದೆ ಎಂದರೆ ಕರ್ಮಗಳು ಹೆಚ್ಚಾಗುತ್ತವೆ. ಭಗವಂತನು ವಿಗ್ರಹದಲ್ಲಿದ್ದಾನೆ ಆದ್ದರಿಂದ ಆತನು ಕೇಳಿಸಿಕೊಳ್ಳುವುದಿಲ್ಲ ಎಂದು ಅಂದುಕೊಳ್ಳುತ್ತಾರೆ. ಆದರೆ ಆತನು ಸರ್ವಾಂತರ್ಯಾಮಿ ಎಂದು ತಿಳಿಯದೆ ಸುಳ್ಳು ಹೇಳುತ್ತಾರೆ.

ನಿನ್ನಲ್ಲಿ ಅತ್ಯಂತ ಅಹಂಕಾರವಿದ್ದರೆ ನೀನು ಸುಳ್ಳು ಹೇಳುತ್ತೀಯೆ. ಅಂದರೆ ನಾನು ಏನು ಹೇಳಿದರೂ ಎದುರಿಗಿರುವವರು ನಂಬುತ್ತಿದ್ದಾರೆ, ಕೇಳಿಸಿಕೊಳ್ಳುತ್ತಿದ್ದಾರೆ ಎಂದು ಭಾವಿಸುತ್ತೀಯೆ. ಎದುರಿಗಿರುವ ವ್ಯಕ್ತಿಯನ್ನು ಮರಳು ಮಾಡಬಹುದು (ವಂಚಿಸಬಹುದು), ಆದರೆ ನಿನ್ನ ಸುಳ್ಳುಗಳೆಲ್ಲವೂ ಪರಮಾತ್ಮನಿಗೆ ತಿಳಿಯುತ್ತಲೇ ಇರುತ್ತವೆ. ನೀನು ಸುಳ್ಳು ಹೇಳಿದರೆ ನಿನ್ನಲ್ಲಿ ಅಹಂಕಾರ. ಇರುವುದನ್ನು ನೆನಪಿಟ್ಟುಕೊ. ನಿನ್ನ ಮಾತುಗಳಲ್ಲಿ ಆಗಲಿ ಅಥವಾ ನಿನ್ನ ಕೆಲಸಗಳಲ್ಲಿ ಆಗಲಿ ನೈತಿಕ ನಿಯಮಗಳು ಇಲ್ಲದಿದ್ದರೆ, ನೀನು ಪಾಪಗಳನ್ನು ಮಾಡುತ್ತೀಯಾ ಮತ್ತು ಅಧರ್ಮದಿಂದ ವರ್ತಿಸುತ್ತೀಯಾ. ಈ ನಾಲ್ಕು ನಿಯಮಗಳು ಮನುಷ್ಯ ಜೀವನದಲ್ಲಿ ತಪ್ಪದೇ ಆಚರಿಸಬೇಕಾದ ನೈತಿಕ ನಿಯಮಗಳು. ನೀತಿ ಮತ್ತು ಪ್ರಾಮಾಣಿಕತೆಗೆ ಬದ್ಧರಾಗಿರಬೇಕು. ಅಂದು ಈ ನಾಲ್ಕನ್ನು ಪಾಲಿಸುವವರನ್ನೇ 'ಶೀಲವಂತರು' ಎಂದು ಕರೆಯುತ್ತಿದ್ದರು, ಅದು ಪುರುಷರಾಗಲಿ ಅಥವಾ ಮಹಿಳೆಯರಾಗಲಿ. ಆದರೆ ದಿನಕಳೆದಂತೆ ಈ ಮಾದಕ ದ್ರವ್ಯಗಳು ಮತ್ತು ಮದ್ಯಪಾನಕ್ಕೆ ದಾಸರಾಗಿ ತಪ್ಪುಗಳನ್ನು, ಪಾಪಗಳನ್ನು ಮಾಡಲು

ಪ್ರಾರಂಭಿಸಿದರು. ಈ ಪಂಚಶೀಲಗಳನ್ನು ಅತಿಕ್ರಮಿಸಿದರೆ ನರಕಕ್ಕೆ ಹೋಗುತ್ತಾರೆ ಎಂದು ಹೇಳುತ್ತಿದ್ದರು.

ಈ ಐದನ್ನು ಪಾಲಿಸಿದರೆ ಮಾತ್ರ ನೈತಿಕ ಮತ್ತು ಪ್ರಾಮಾಣಿಕ ಜೀವನವಾಗುತ್ತದೆ ಎಂದು ಹೇಳುತ್ತಾ, ಇಂತಹವರು ಮಾತ್ರ ಧರ್ಮವನ್ನು ಆಚರಿಸಲು ಸಾಧ್ಯ ಎಂದು ತಿಳಿಸುತ್ತಿದ್ದರು. ಧರ್ಮವನ್ನು ಆಚರಿಸುವವರಿಗೆ ಮಾತ್ರ ಧ್ಯಾನವು ಸಿದ್ಧಿಸುತ್ತದೆ; ಧ್ಯಾನವು ಸಿದ್ಧಿಸಿದವನು ದೇವರಿಗೆ ಹತ್ತಿರವಾಗುತ್ತಾನೆ ಮತ್ತು ದೇವರನ್ನು ತಿಳಿದುಕೊಳ್ಳುತ್ತಾನೆ ಎಂದು ಹೇಳಲಾಗುತ್ತಿತ್ತು.

ಪ್ರಾಚೀನ ಕಾಲದಲ್ಲಿ ಎಲ್ಲರಿಗೂ ಮೊದಲು ಪಾಪಗಳನ್ನು ಬಿಡಿಸಿ ಪುಣ್ಯಕಾರ್ಯಗಳನ್ನು ಮಾಡಿಸುತ್ತಿದ್ದರು. ಆನಂತರ, ಭಗವಂತನು ಯಾರು ಎಂದು ತಿಳಿದುಕೊಳ್ಳುವುದೇ ಧ್ಯಾನದ ಉದ್ದೇಶ ಎಂದು ತಿಳಿಸಿಕೊಡುತ್ತಿದ್ದರು. ಈ ಪಂಚಶೀಲಗಳನ್ನು ಪಾಲಿಸಿದಾಗ ನೀನು ಧರ್ಮವಂತ ಜೀವನವನ್ನು ನಡೆಸುತ್ತೀಯಾ. ಧರ್ಮವಂತ ಜೀವನವನ್ನು ನಡೆಸಿದಾಗ, ನೀನು ಈ ಭೂಮಿಯ ಮೇಲಿರುವಾಗಲೇ ಪ್ರಕೃತಿಯು ನಿನಗೆ ಎಷ್ಟೋ ಸೌಲಭ್ಯಗಳನ್ನು ಒದಗಿಸುತ್ತದೆ. ನಿನಗೆ ಇಷ್ಟೆಲ್ಲವನ್ನೂ ಒದಗಿಸುತ್ತಿರುವ ಭಗವಂತನ ಬಗ್ಗೆ ತಿಳಿದುಕೊಳ್ಳುವುದೇ ಮೋಕ್ಷ ಎಂದು ಹೇಳಿ, ಅಂದಿನ ಯುಗಗಳಲ್ಲಿ ಜನರನ್ನು ಧ್ಯಾನ ಮತ್ತು ಜ್ಞಾನದತ್ತ ಕರೆದೊಯ್ಯುತ್ತಿದ್ದರು.

ಆದರೆ ಇಂದು ಹಣ ಮತ್ತು ಪದವಿಗಳ ಹಿಂದೆ ಬಿದ್ದು ಈ ಐದನ್ನು ಮರೆಯುತ್ತಿದ್ದಾರೆ. ಇವುಗಳನ್ನು ಪಾಲಿಸಿದರೆ ಮಾತ್ರ ಶೀಲವಂತರಾಗುತ್ತೇವೆ ಎಂಬ ವಿಷಯವನ್ನು ಇಂದು ಬಹಳಷ್ಟು ಜನರು ಬಹುತೇಕ ಮರೆತುಬಿಟ್ಟಿದ್ದಾರೆ. ಹಣ ಮತ್ತು ಪದವಿಗಳ ಹಿಂದೆ ಬಿದ್ದು ಸತ್ಯವನ್ನು ಮರೆತು, ಭಗವಂತನು ಯಾರೆಂಬುದನ್ನು ಮರೆತು, ಕೇವಲ ವಿಗ್ರಹಗಳಲ್ಲಿ ಮಾತ್ರವೇ ದೇವರನ್ನು ಹುಡುಕುತ್ತಿದ್ದಾರೆ. ಭಗವಂತನನ್ನು ದರ್ಶಿಸುತ್ತಾ ಅದೇ ಸತ್ಯವೆಂದು ನಂಬುತ್ತಿದ್ದಾರೆ. ಇಲ್ಲಿ ಗಮನಿಸಿ, ಏಕೆ ಸತ್ಯವೆಂದು ನಂಬುತ್ತಿದ್ದಾರೆಂದರೆ, ಅವರ ಜೀವನವೆಲ್ಲವೂ ಅಧರ್ಮಮಯವಾದ ಜೀವನವೇ ಆದ್ದರಿಂದ ಸತ್ಯವನ್ನು ಅವರು ತಿಳಿದುಕೊಳ್ಳಲಾರರು, ತಿಳಿದುಕೊಳ್ಳುವುದೂ ಇಲ್ಲ. ಯಾವಾಗ ಪಂಚ ಶೀಲಗಳನ್ನು ಮರೆತು ಹಣದ ಹಿಂದೆ, ಪದವಿಗಳ ಹಿಂದೆ ಬಿದ್ದು ಅಲೆಯುತ್ತಿದ್ದಾರೋ, ಅಂದರೆ ನಾಶವಾಗಿ ಹೋಗುವವುಗಳ ಹಿಂದೆಯೇ ಬೀಳುತ್ತಾ, ನಾಶವಾಗದ ಶಾಶ್ವತವಾದ, ಸತ್ಯವಾದ 'ಆತ್ಮ' ಎಂಬ ಭಗವಂತನ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇಂಥವರನ್ನು ನೋಡಿ ಈ ಮಾರ್ಗಕ್ಕೆ ಬಂದವರು ಕೂಡ ಹಣದ ಹಿಂದೆ ಬೀಳುತ್ತಾ, ಸಂಕಲ್ಪಗಳನ್ನು ಮಾಡಿಕೊಂಡರೆ ಹಣ ಬರುತ್ತದೆ ಎಂದು

ಸಂಕಲ್ಪಗಳನ್ನು ಇಟ್ಟುಕೊಂಡು ಧ್ಯಾನ ಮಾಡುತ್ತಿದ್ದಾರೆ. ಇನ್ನು ಕೆಲವರು ಗುರುಗಳು ಹೇಳಿದ ಸಂಕಲ್ಪಗಳ ಹುಚ್ಚಿನಲ್ಲಿ ಬಿದ್ದು ಬೆಳೆಯಲು ಸಾಧ್ಯವಾಗುತ್ತಿಲ್ಲ. ಗುರುವು ಜ್ಞಾನವನ್ನು ಹೇಳಬಹುದು, ಸಾಧನೆಯನ್ನು ಹೇಳಬಹುದು; ಆದರೆ ಆಚರಿಸಬೇಕಾದ ಶಿಷ್ಯನು ಚಂಚಲ ಮನಸ್ಸಿನವನಾದರೆ, ಆ ಮನಸ್ಸನ್ನು ಶುದ್ಧ ಮಾಡಿಕೊಳ್ಳದಿದ್ದರೆ, ಆ ಮನಸ್ಸು ಶೂನ್ಯವಾಗದು. ಮನಸ್ಸು ಶುದ್ಧವಾದರೆ ಮಾತ್ರ ಬುದ್ಧತ್ವ ಬರುತ್ತದೆ. ಶುದ್ಧತೆ ಪಡೆಯಬೇಕೆಂದರೆ ಈ ಸೃಷ್ಟಿಯಲ್ಲಿ ಇರುವುದೆಲ್ಲವೂ ಅಶಾಶ್ವತ, ಶಾಶ್ವತವಾದವನು ಆ ಸೃಷ್ಟಿಕರ್ತ, ಅವನೇ ಸತ್ಯ, ಅವನು ಎಲ್ಲೋ ಇಲ್ಲ ಆತ್ಮನಾಗಿ ನನ್ನ ಶರೀರದಲ್ಲಿಯೇ ಇದ್ದಾನೆ ಎಂಬ ಪರಮ ಸತ್ಯವನ್ನು ತಿಳಿದುಕೊಳ್ಳಬೇಕು. ಆದರೆ ಪ್ರಸ್ತುತ ನೋಡುವುದನ್ನೆಲ್ಲಾ ಸತ್ಯವೆಂದು ನಂಬುತ್ತಾ, ಕಾಣದ ಆತ್ಮ ಇದೆಯೋ ಇಲ್ಲವೋ ಎಂದುಕೊಳ್ಳುತ್ತಾ ನಾಶವಾಗುವ ಪ್ರಪಂಚದ ಹಿಂದೆಯೇ ಬೀಳುತ್ತಿದ್ದಾರೆ. ಆದರೆ ನೀನು ಎಷ್ಟು ಜನ್ಮಗಳು ಈ ಪದವಿಗಳಿಗಾಗಿ, ಭೋಗಗಳಿಗಾಗಿ ಸಾಧನೆ ಮಾಡುತ್ತೀಯೋ, ಅಷ್ಟು ಜನ್ಮಗಳು ದುಃಖದಿಂದ, ಸಂಕಟದಿಂದ ಹೊರಬರಲಾರೆ.

ಮತ್ತೆ "ಇಷ್ಟು ದಿನಗಳಿಂದ ಧ್ಯಾನ ಮಾಡುತ್ತಿದ್ದೇನೆ, ಶಾಶ್ವತವಾದವನು ಆ ಭಗವಂತನೇ, ಆ ಭಗವಂತನೇ ಸತ್ಯ ಎಂದು ತಿಳಿದುಕೊಂಡರೂ ಇನ್ನೂ ಅಂದುಕೊಂಡಿದ್ದನ್ನು ಸಾಧಿಸಲಾಗಿಲ್ಲ ಎಂದರೆ ಎಲ್ಲೋ ಧರ್ಮವನ್ನು ತಪ್ಪಿದ್ದೇನೆ, ಎಲ್ಲೋ ನೀತಿ ನಿಜಾಯಿತಿ ಇಲ್ಲದೆ ಇದ್ದೇನೆ, ನಾನು ಸರಿಯಾದ ದಾರಿಯಲ್ಲಿ ಇಲ್ಲವೇ ಅಥವಾ ಪೂರ್ವ ಜನ್ಮಗಳ ಕರ್ಮಗಳು ಸುಟ್ಟುಹೋಗುವಷ್ಟು ತೀವ್ರವಾದ ಸಾಧನೆಯನ್ನು ನಾನು ಮಾಡುತ್ತಿಲ್ಲವೇ? ನನ್ನಲ್ಲಿ ಎಲ್ಲೋ ಲೋಪವಿದೆ" ಎಂದು ಪ್ರತಿಯೊಬ್ಬರೂ ತಮಗೆ ತಾವೇ ಆತ್ಮಾವಲೋಕನ ಮಾಡಿಕೊಳ್ಳಬೇಕು. ನೀವು ಎಲ್ಲವನ್ನೂ ತಿಳಿದುಕೊಳ್ಳುತ್ತಿದ್ದೀರಿ, ಆದರೆ ಅದನ್ನು ಆಚರಿಸದಿರುವುದೇ ನಿಮ್ಮಲ್ಲಿರುವ ಅತಿ ದೊಡ್ಡ ಲೋಪ. ನಿಮ್ಮ ಮನಸ್ಸಿನ ಚಂಚಲತೆಯಿಂದ ತಪ್ಪು ಮಾಡಿದರೂ, ಕಳ್ಳತನ ಮಾಡಿದರೂ ಅಥವಾ ಸುಳ್ಳು ಹೇಳಿದರೂ, ಮನುಷ್ಯರು ನಿಮ್ಮನ್ನು ನೋಡದಿದ್ದರೂ ನಾರಾಯಣನು ನೋಡುತ್ತಿದ್ದಾನೆ ಎಂಬ ಅರಿವಿರಲಿ. ಸರ್ವಾಂತರ್ಯಾಮಿಯಾದ ಆತನಿಗೆ ತಿಳಿಯದ ವಿಷಯ ಯಾವುದೂ ಇಲ್ಲ. ಮನುಷ್ಯನನ್ನು ಮೋಸಗೊಳಿಸಬಹುದು, ಆದರೆ ಪರಮಾತ್ಮನನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಕಳ್ಳತನ ಮಾಡಿದರೂ ಅಥವಾ ತಪ್ಪುಗಳನ್ನು ಮಾಡಿದರೂ ಭಗವಂತನ ನ್ಯಾಯಾಲಯದಲ್ಲಿ ನಿಮಗೆ ಶಿಕ್ಷೆ ಖಂಡಿತ.

ಪ್ರಕೃತಿಯ ಮೂಲಕ ಭಗವಂತನು ನಿಮಗೆ ಶಿಕ್ಷೆ ನೀಡುತ್ತಾನೆ. ಅಂದರೆ

ಇನ್ನೂ ಕಳೆದ ಜನ್ಮದ ಸಂಸ್ಕಾರಗಳು ನಿಮ್ಮನ್ನು ಬಿಟ್ಟು ಹೋಗಿಲ್ಲ ಎಂದು ಇದನ್ನು ಅರ್ಥೈಸಬಹುದು. ಜೀವಹಿಂಸೆ ಮಹಾಪಾಪ ಎಂದು ತಿಳಿದಿದ್ದರೂ ಮಾಂಸ ತಿನ್ನುವುದನ್ನು ಬಿಡಲು ಸಾಧ್ಯವಾಗುತ್ತಿಲ್ಲ ಎಂದರೆ, ಅಂತಹವರ ಮನಸ್ಸಿನಲ್ಲಿ ಇನ್ನೂ ಕೆಟ್ಟ ಭಾವನೆಗಳು, ಕ್ರೌರ್ಯ ಮತ್ತು ದುರಾಲೋಚನೆಗಳು ತೊಲಗಿಲ್ಲ ಎಂದು ಅರ್ಥ.

ಸಾಧನೆ ಮತ್ತು ಮನಸ್ಸಿನ ಸ್ಥಿತಿ ನೀವು ತೀವ್ರವಾಗಿ ಸಾಧನೆ ಮಾಡುತ್ತಿದ್ದರೆ ನಿಮ್ಮ ಮನಸ್ಸು ಈ ಕೆಳಗಿನ ಹಂತಗಳನ್ನು ದಾಟುತ್ತದೆ:

- **ಚಂಚಲ ಸ್ಥಿತಿಯಿಂದ ನಿಶ್ಚಲ ಸ್ಥಿತಿಗೆ.**
- **ನಿಶ್ಚಲ ಸ್ಥಿತಿಯಿಂದ ನಿರ್ಮಲ ಸ್ಥಿತಿಗೆ.**

ಈ ಸ್ಥಿತಿಯನ್ನು ತಲುಪಿದಾಗ ನೀವು ಯಾವುದೇ ತಪ್ಪುಗಳನ್ನು ಅಥವಾ ಪಾಪಗಳನ್ನು ಮಾಡುವುದಿಲ್ಲ. ಇದರೊಂದಿಗೆ ಆಹಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತಪ್ಪುಗಳನ್ನು ಮಾಡದೆ, ಪ್ರಪಂಚದ ವಸ್ತುಗಳ ಮೇಲೆ ಆಸೆ ಪಡದೆ ಕೇವಲ ಪರಮಾತ್ಮನಿಗಾಗಿ ಧ್ಯಾನ ಮಾಡಿದರೆ ಆ ಪ್ರಕೃತಿ ಮಾತೆಯೇ ನಿಮ್ಮನ್ನು ಕಾಪಾಡುತ್ತಾಳೆ. ಆದರೆ ಇನ್ನೂ ಭೋಗದ ಆಸೆಗಳೊಂದಿಗೆ ಪ್ರಪಂಚದ ಕಡೆಗೆ ತಿರುಗಿ "ಅದು ಬೇಕು, ಇದು ಬೇಕು" ಎಂದು ಬಯಸಿದರೆ, ನೀವು ಧ್ಯಾನ ಮಾಡಿದರೂ ಮಾಡದಿದ್ದರೂ ಒಂದೇ. ಮನಸ್ಸು ಇನ್ನೂ ಮಲಿನವಾಗಿದೆ ಎಂದರೆ ನೀವು ಸರಿಯಾದ ಆಹಾರವನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಅರ್ಥ. ಹೆಚ್ಚಿನ ಪಾಪಗಳು ತಮೋಗುಣ ಮತ್ತು ರಜೋಗುಣದಲ್ಲಿಯೇ ಸಂಭವಿಸುವುದರಿಂದ, ಧರ್ಮವನ್ನು ಆಚರಿಸಬೇಕೆಂದರೆ ಈ ಗುಣಗಳನ್ನು ಬಿಟ್ಟು ಶುದ್ಧ ಸಾತ್ವಿಕ ಸ್ಥಿತಿಗೆ ತಲುಪಬೇಕು.

ನಿರ್ಗುಣ ಸ್ಥಿತಿ ಬಂದಾಗ ಎಲ್ಲರೂ ಆತ್ಮ ಸ್ವರೂಪಿಗಳೇ, ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ ಎಂಬ ಧರ್ಮವನ್ನು ಆಚರಿಸಲು ಸಾಧ್ಯವಾಗುತ್ತದೆ. ನೀವು ಗಮನಿಸಿದರೆ, ರಾಮನು ಕೂಡ ತನ್ನ ಹದಿನಾರನೇ ವಯಸ್ಸಿನಲ್ಲಿ ಪ್ರಪಂಚದಲ್ಲಿರುವ ದುಃಖವನ್ನು ನೋಡಿ ದುಃಖಿಸಿದನು. ಆ ಸಮಯದಲ್ಲಿ ರಾಮನಿಗೆ ಕರ್ಮ ಸಿದ್ಧಾಂತವಾಗಲಿ ಅಥವಾ ಆತ್ಮಜ್ಞಾನವಾಗಲಿ ತಿಳಿದಿರಲಿಲ್ಲ, ಅದಕ್ಕಾಗಿಯೇ ಅವನು ದುಃಖಿತನಾದನು. ಯಾವಾಗ ಗುರುಗಳಾದ ವಸಿಷ್ಠರು ಆತ್ಮಜ್ಞಾನವನ್ನೆಲ್ಲ ಬೋಧಿಸಿದರೋ, ಆಗ ತನ್ನ ಕರ್ತವ್ಯವೇನೆಂದು ಅವನಿಗೆ ಅರ್ಥವಾಯಿತು.

ಅದು ಅರ್ಥವಾದ ನಂತರ, ತಾನು ರಾಜಕುಮಾರನಾದ್ದರಿಂದ

ಪ್ರಜೆಗಳನ್ನು ರಕ್ಷಿಸಬೇಕಾದ ಜವಾಬ್ದಾರಿ ಇದೆ ಎಂದು ಮತ್ತು ಪ್ರಜೆಗಳ ಮಾತಿಗೆ ಬೆಲೆ ಕೊಡಬೇಕಾದ ಅವಶ್ಯಕತೆ ಇದೆ ಎಂದು ರಾಮನು ತಿಳಿದುಕೊಂಡನು. ಧರ್ಮವೆಂದರೇನು ಎಂದು ತಿಳಿದುಕೊಂಡನು. ಸಕಲ ಜೀವಿಗಳು ಆತ್ಮಸ್ವರೂಪಿಗಳೇ ಎಂದು ಅರಿತು ಎಲ್ಲರೊಂದಿಗೆ, ಎಲ್ಲದರೊಂದಿಗೆ ಸ್ನೇಹದಿಂದ ಇರುತ್ತಾ ಮುಂದೆ ಸಾಗಿ ತಾನು ಮಾಡಬೇಕಾದ ಕಾರ್ಯವನ್ನು ಪೂರ್ಣಗೊಳಿಸಿದನು. ಈ ವಿಷಯವನ್ನು ನಮಗೆ ವಸಿಷ್ಠಾಮೃತದಲ್ಲಿ ಹೇಳಲಾಗಿದೆ.

ಅದಕ್ಕೇ ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಏನು ಹೇಳುತ್ತಿದ್ದರೆಂದರೆ ಭಾಗವತವನ್ನು ಓದಿದರೆ ಭಗವಂತನ ಮೇಲೆ ಭಕ್ತಿ ಬರುತ್ತದೆ, ಏಕೆಂದರೆ ಎಲ್ಲದರಲ್ಲೂ ಇರುವುದು ನಾನೇ ಎಂದು ಭಗವಂತ ಹೇಳಿದ್ದಾನೆ. "ನಾನು ಸರ್ವಾಂತರ್ಯಾಮಿ, ನಾನು ಶಾಶ್ವತ" ಎಂದು ಭಾಗವತದಲ್ಲಿ ಹೇಳಲಾಗಿದೆ. ಕರ್ಮಯೋಗ ತಿಳಿಯಬೇಕೆಂದರೆ ಭಗವದ್ಗೀತೆಯನ್ನು ಓದಬೇಕು. ಜ್ಞಾನ ತಿಳಿಯಬೇಕೆಂದರೆ ವಸಿಷ್ಠ ಗೀತೆಯನ್ನು ಓದಬೇಕು ಮತ್ತು ರಾಮಾಯಣ ಓದಿದರೆ ಧರ್ಮವನ್ನು ಕಲಿಯುತ್ತೇವೆ ಎಂದು ಗುರುಗಳು ಹಾಗೂ ಮಹಾತ್ಮರು ನಮಗೆ ಈ ಗ್ರಂಥಗಳನ್ನೆಲ್ಲಾ ಓದಬೇಕೆಂದು ಹೇಳಿದ್ದಾರೆ. ಅಂದರೆ ನಾವು ಯಾರು? ಈ ಭೂಮಿಯ ಮೇಲೆ ಏಕೆ ಬಂದಿದ್ದೇವೆ? ಮಾನವ ಜನ್ಮವನ್ನು ಯಾಕೆ ತಾಳಿದ್ದೇವೆ? ಎಂದು ತಿಳಿದುಕೊಳ್ಳಲು ಇವೆಲ್ಲವನ್ನೂ ಓದಲು ಹೇಳಿದ್ದಾರೆ. ಯಾರು ಈ ಪಂಚ ಶೀಲಗಳನ್ನು ಪಾಲಿಸುತ್ತಾರೋ ಅವರು ಪ್ರಾಮಾಣಿಕವಾಗಿ ಬದುಕುತ್ತಾರೆ, ನೀತಿವಂತರಾಗಿ ಇರುತ್ತಾರೆ. ಆಗಲೇ ಅವರು ಧರ್ಮವನ್ನು ಆಚರಿಸಲು ಮತ್ತು ಧರ್ಮವನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಆಚರಿಸಿದವನಿಗೇ ಧ್ಯಾನವು ಸಿದ್ಧಿಸುತ್ತದೆ, ಧ್ಯಾನವು ಸಿದ್ಧಿಸಿದವನಿಗೇ ಜ್ಞಾನವು ವೃದ್ಧಿಯಾಗುತ್ತದೆ, ಜ್ಞಾನವು ಹೆಚ್ಚಾದಾಗಲೇ ಪರಮಾತ್ಮನ ದರ್ಶನವಾಗುತ್ತದೆ ಮತ್ತು ಸರ್ವಾತ್ಮ ಭಾವನೆ ಮೂಡುತ್ತದೆ. ಆಗಲೇ ಮೋಕ್ಷವನ್ನು ಪಡೆಯುತ್ತಾರೆ.

ಜ್ಞಾನಿಗಳಿಗೆ ಇನ್ನೊಂದು ಧರ್ಮವೂ ಇದೆ; ತಾನು ಜ್ಞಾನವಂತನಾಗುವುದು ಮಾತ್ರವಲ್ಲದೆ, ಈ ಭೂಮಿಯ ಮೇಲೆ ಕನಿಷ್ಠ ಕೆಲವರನ್ನಾದರೂ ಜ್ಞಾನವಂತರನ್ನಾಗಿ ಮಾಡುವುದೇ ಒಬ್ಬ ಜ್ಞಾನಿಯ ಕೊನೆಯ ಧರ್ಮ.

ಅದಕ್ಕಾಗಿಯೇ ಮಹಾತ್ಮರೆಲ್ಲರೂ ಎಷ್ಟೇ ಜ್ಞಾನವನ್ನು ಸಂಪಾದಿಸಿದರೂ, ಈ ಭೂಮಿಯ ಮೇಲೆ ಬಂದು ತಮ್ಮಂತಹವರನ್ನು ಕನಿಷ್ಠ ಕೆಲವರನ್ನಾದರೂ ತಯಾರು ಮಾಡಲು ತಮ್ಮ ಬೋಧನೆಯನ್ನು ಆರಂಭಿಸಿ, ಅದನ್ನು ಎಲ್ಲರಿಗೂ ತಲುಪಿಸಿ, ಕೆಲವು ಪುಸ್ತಕಗಳ ರೂಪದಲ್ಲಿ ನೀಡಿ, ಮುಂದಿನ ತಲೆಮಾರಿನವರು ಕೂಡ ಉದ್ಧಾರವಾಗಲು ಕೃಷಿ ಮಾಡಿ ಆನಂದ ಸ್ವರೂಪಿಗಳಾಗಿ ಉಳಿಯುತ್ತಾರೆ.

# ಆತ್ಮ ವಿದ್ಯೆ – ಬ್ರಹ್ಮ ವಿದ್ಯೆ : ಶಿಷ್ಯನ ಅರ್ಹತೆ

ಎಷ್ಟೋ ದಿನಗಳಿಂದ ನೀವು ಸಾಧನೆ ಮಾಡುತ್ತಾ, ಆತ್ಮ ವಿದ್ಯೆ ಮತ್ತು ಬ್ರಹ್ಮ ವಿದ್ಯೆಯನ್ನು ಕಲಿಯುತ್ತಿದ್ದೀರಿ. ಹಾಗಾದರೆ ಶಿಷ್ಯನು ಗುರುವಿನ ಬಳಿ ಹೇಗಿದ್ದರೆ ಆ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ ಮಾಡಬಲ್ಲ ಎಂದು ತಿಳಿದುಕೊಳ್ಳೋಣ.

"ಆತ್ಮನ ಬಗ್ಗೆ ಅಧ್ಯಯನ ಮಾಡುವಂತದ್ದೇ ಆತ್ಮ ವಿದ್ಯೆ", "ಪರಬ್ರಹ್ಮನ ಬಗ್ಗೆ ತಿಳಿದುಕೊಳ್ಳುವ ಪರಾವಿದ್ಯೆಯೇ ಬ್ರಹ್ಮವಿದ್ಯೆ" ಎನ್ನುತ್ತಾರೆ. ಈ ಎರಡು ವಿದ್ಯೆಗಳು ನಿಮ್ಮ ಜೀವನದಲ್ಲಿ ಅತ್ಯಂತ ಮಹತ್ತರವಾದವುಗಳು. ಇವು ಕೇವಲ ಕೇಳುವುದಕ್ಕಾಗಿ ಅಲ್ಲ, ಅನುಭವಿಸಲು ಮತ್ತು ಆಚರಿಸಲು ಇರುವಂಥವು. ಈ ವಿದ್ಯೆಗಳನ್ನು ಕಲಿಯುತ್ತಿರುವಾಗ ನೀವು ಹೇಗಿರಬೇಕು? ಹೇಗಿದ್ದರೆ ಈ ವಿದ್ಯೆಯು ಚೆನ್ನಾಗಿ ಅಭ್ಯಾಸವಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ.

ಏಕೆಂದರೆ ಪರಬ್ರಹ್ಮನು ನಿಮ್ಮ ಶರೀರದಲ್ಲೇ ಇದ್ದಾನೆ, ನಿಮ್ಮನ್ನು ಯಾವಾಗಲೂ ಗಮನಿಸುತ್ತಿರುತ್ತಾನೆ ಎಂಬುದು ಅಜ್ಞಾನದಲ್ಲಿ ಇರುವವರಿಗೆ ಅರ್ಥವಾಗುವುದಿಲ್ಲ. ಆದರೆ ಸೃಷ್ಟಿಯೆಲ್ಲವೂ ಪರಬ್ರಹ್ಮನೇ ಎನ್ನುವ ಸತ್ಯ ನಿಮಗೆ ತಿಳಿದರೆ, ನಿಮ್ಮ ಮಾತುಗಳಾಗಲಿ, ನಿಮ್ಮ ವರ್ತನೆಯಾಗಲಿ ಪರಮಾತ್ಮನಿಗೆ ತಿಳಿಯದಂತೆ ಇರುವುದಿಲ್ಲ. ಆತನು ಎಲ್ಲವನ್ನೂ ತಿಳಿದುಕೊಳ್ಳಬಲ್ಲನು ಎಂಬ ವಿಷಯವನ್ನೂ ನೀವು ತಿಳಿದುಕೊಳ್ಳುತ್ತೀರಿ. ಪ್ರಾಪಂಚಿಕ ವಿದ್ಯೆಗಳನ್ನು ಎಲ್ಲರೂ ಹೇಳಬಲ್ಲರು, ಆದರೆ ಆತ್ಮ ವಿದ್ಯೆ ಮತ್ತು ಬ್ರಹ್ಮ ವಿದ್ಯೆಯನ್ನು ಕೇವಲ ಕೆಲವೇ ಕೆಲವು ಸತ್ಪುರುಷರು ಮಾತ್ರ ಹೇಳಬಲ್ಲರು. ಅದಕ್ಕಾಗಿಯೇ ಈ ಆತ್ಮ ವಿದ್ಯೆ ಮತ್ತು ಬ್ರಹ್ಮ ವಿದ್ಯೆಯನ್ನು ಕಲಿಸುವ ಗುರುಗಳನ್ನು ನಾವು ಸದ್ಗುರುಗಳು ಎಂದು ಕರೆಯುತ್ತೇವೆ. ಏಕೆಂದರೆ ಸತ್ಯದಲ್ಲಿ ಜೀವಿಸುವವರಿಗೆ ಮತ್ತು ಸತ್ಯವನ್ನು ಪ್ರೀತಿಸುವವರಿಗೆ ಮಾತ್ರ ಸತ್ಯವು ಅವಗತವಾಗುತ್ತದೆ (ಅರ್ಥವಾಗುತ್ತದೆ). ಆ ಸದ್ಗುರುಗಳು ಎಲ್ಲರಿಗೂ ಜ್ಞಾನವನ್ನು ಕಲಿಸುತ್ತಾರೆ, ಆದರೆ ಕೆಲವರು ಮಾತ್ರ ಅದನ್ನು ಅರ್ಥಮಾಡಿಕೊಂಡು ಆಚರಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿಯೇ ಹೇಳುವ ಗುರುಗಳ ಮೇಲೆ ಶಿಷ್ಯನಿಗೆ ಭಕ್ತಿ ಇರಬೇಕು, ಆ ಭಕ್ತಿ ಇದ್ದಾಗಲೇ ಆಧ್ಯಾತ್ಮಿಕತೆಯು ಮೈಗೂಡುತ್ತದೆ.

ಆತ್ಮವೇ ದೈವವಾದ್ದರಿಂದ, ದೈವದ ಬಗ್ಗೆ ನನಗೆ ಹೇಳಲು ಗುರುವು ಬಂದನು. ಆ ಭಗವಂತನೇ ನನ್ನ ಬಳಿಗೆ ಕಳುಹಿಸಿದ್ದಾನೆ, ಭಗವಂತನ ದೂತನಾಗಿ ಭೂಮಿಯ ಮೇಲೆ ಬಂದು ಆ ಭಗವಂತನ ಬಗ್ಗೆ ಹೇಳುತ್ತಿದ್ದಾನೆ ಎಂಬ ಭಾವನೆ ಶಿಷ್ಯನಲ್ಲಿ ಇರಬೇಕು; ಆಗ ಮಾತ್ರ ಗುರುವಿನ ಮಾತುಗಳನ್ನು ನಂಬಲು ಸಾಧ್ಯವಾಗುತ್ತದೆ. ಈಗ ನೋಡಿ, ಯಾರಾದರೂ ನಿಮಗೆ ಸಹಾಯ ಮಾಡಿದರೆ ಅವರ ಮೇಲೆ

ಕೃತಜ್ಞತಾ ಭಾವದಿಂದ ಇರುತ್ತೀರಿ. ಹಾಗಾದರೆ, ಭಗವಂತನ ಬಗ್ಗೆ ಹೇಳಲು ಬಂದ ಆ ಗುರುವಿನ ಮೇಲೆ ಎಷ್ಟೊಂದು ಶ್ರದ್ಧೆ ಇರಬೇಕು? ಹಾಗಿದ್ದರೆ ಮಾತ್ರ ಈ ಆಧ್ಯಾತ್ಮಿಕತೆ ನಿಮಗೆ ಸಿದ್ಧಿಸುತ್ತದೆ. ಗುರುವಿನ ಮೇಲಿನ ಭಕ್ತಿಯೇ ಭಗವಂತನ ಮೇಲಿನ ಭಕ್ತಿಯಾಗಿ ಬದಲಾಗುತ್ತದೆ.

ಗುರುವೇ ದೈವ ಎಂದು ಒಂದು ಮಾತಿನಲ್ಲಿ ಹೇಳಿದ್ದಾರೆ. ಅಂದರೆ ಆಳವಾಗಿ ಯೋಚಿಸಿದರೆ, ಭಗವಂತ ಎಲ್ಲೋ ದೇವಾಲಯಗಳಲ್ಲಿ, ಪೂಜಾ ಮಂದಿರಗಳಲ್ಲಿ ಇದ್ದಾನೆ ಎಂಬ ಭ್ರಮೆಯಿಂದ ಹೊರಬರಲು, ಭಗವಂತನೇ ಆ ಗುರುವಿನ ರೂಪದಲ್ಲಿ ಬಂದು ನಿಮ್ಮ ಅಜ್ಞಾನವನ್ನು ಹೋಗಲಾಡಿಸುತ್ತಾನೆ. ಆದ್ದರಿಂದ, ಆ ಗುರುವು ಭಗವಂತನ ರೂಪದಲ್ಲಿ ಬಂದಿದ್ದಾನೆ ಎಂದು ಗುರುವಿನ ಮೇಲೆ ಅಚಲವಾದ ಭಕ್ತಿ ಇದ್ದಾಗ ಮಾತ್ರ ಆ ಮಾತುಗಳನ್ನು ನಂಬುತ್ತೀರಿ. ಅದಕ್ಕಾಗಿಯೇ ಗುರುವಿನ ಮೇಲೆ ನಿಮಗೆ ಭಕ್ತಿ ಇದ್ದಾಗ ಮಾತ್ರ ಆಧ್ಯಾತ್ಮಿಕವಾಗಿ ಬೆಳೆಯಲು ಸಾಧ್ಯ. ಎಷ್ಟೋ ಪ್ರವಚನಗಳನ್ನು ಕೇಳಿದ ಮಾತ್ರಕ್ಕೆ ಜ್ಞಾನ ಹೆಚ್ಚಾಗುವುದಿಲ್ಲ. ಕೇಳಿದ್ದನ್ನು ಜೀವನದಲ್ಲಿ ಆಚರಣೆಗೆ ತಂದಾಗ ಮಾತ್ರ ಜ್ಞಾನ ಬೆಳೆಯುತ್ತದೆ. ಅದೇ ಅವರು ಗುರುಗಳಿಗೆ ನೀಡುವ ಗುರುದಕ್ಷಿಣೆ. ಗುರುವು 'ನೀನೇ ಆತ್ಮ' ಎಂದು ಹೇಳಿದ ಕ್ಷಣದಿಂದ ನೀವು ಭಗವಂತನಂತೆ ಇರಲು ಪ್ರಯತ್ನಿಸಬೇಕು. ಅಂದರೆ ಭಗವಂತನಂತೆ ಎಲ್ಲವನ್ನೂ ನೀಡುವ ಶಕ್ತಿ ಇಲ್ಲದಿದ್ದರೂ, ನನ್ನ ಶಕ್ತಿ ಇರುವವರೆಗೂ ನೀಡಬೇಕು ಎಂಬ ಭಾವನೆ ನಿಮ್ಮಲ್ಲಿ ಬರುತ್ತದೆ. ಒಂದು ವೇಳೆ ನೀಡಲು ಸಾಧ್ಯವಾಗದಿದ್ದರೂ ಯಾರಿಗೂ ಕಷ್ಟವನ್ನು ಉಂಟುಮಾಡಬಾರದು.

ಆಗ ಮಾತ್ರ ಭಗವಂತನು ಮೆಚ್ಚುವಂತಹ ಶೀಲವು ನಿಮಗೆ ರೂಢಿಯಾಗುತ್ತದೆ. ನೀವು ಕಲಿಯಬೇಕಿರುವುದು ಪ್ರಪಂಚದಲ್ಲಿ ಹೆಚ್ಚಾಗಿ ಇರುವುದನ್ನಲ್ಲ; ಗುರುವು ಹೇಳಿದ ವಿಷಯಗಳನ್ನು ಆಚರಣೆಯಲ್ಲಿ ತರುವುದೇ ಭಗವಂತನ ದೃಷ್ಟಿಯಲ್ಲಿ ಉದಾತ್ತತೆಯೇ ನಿಜವಾದ ಆಧ್ಯಾತ್ಮಿಕ ವಿಜಯ. ಒಬ್ಬ ಶಿಷ್ಯನಿಗೆ ಅರ್ಹತೆ ಯಾವಾಗ ಬರುತ್ತದೆ ಎಂದರೆ, ಶಿಕ್ಷಣವನ್ನು ಪಡೆಯಲು ಅವನು ಸಿದ್ಧನಾದಾಗ ಮಾತ್ರ! ಅಂದರೆ ಗುರುಗಳು ಹೇಳಿದ್ದನ್ನು ಆಚರಣೆಯಲ್ಲಿ ತಂದಾಗ ಶಿಷ್ಯನಾಗಿ ಬೆಳೆದಂತೆ. ನನ್ನ ವಿಷಯಕ್ಕೆ ಬಂದರೆ, ನಾನು ಪತ್ರಿಜೀ ಅವರ ಶಿಷ್ಯೆ ಎನ್ನಿಸಿಕೊಳ್ಳಬೇಕು ಎಂದುಕೊಳ್ಳುತ್ತಿದ್ದೆ. ಅವರು ನನಗೆ ಗುರುಗಳು ಎಂಬ ಭಾವನೆಗಿಂತ ಹೆಚ್ಚಾಗಿ, ನಾನೇ ಪತ್ರಿಜೀ ಅವರಿಗೆ ತಕ್ಕ ಶಿಷ್ಯೆ ಎನ್ನಿಸಿಕೊಳ್ಳಬೇಕು ಎನ್ನುವ ಹಠ ನನಗಿತ್ತು. ಹಾಗೆಯೇ ಪ್ರತಿಯೊಬ್ಬ ಶಿಷ್ಯನೂ ಗುರುಗಳು ಹೇಳಿದ್ದನ್ನು ಆಚರಣೆಯಲ್ಲಿಟ್ಟುಕೊಂಡು ಗುರುವಿಗೆ ತಕ್ಕ ಶಿಷ್ಯ ಎನ್ನಿಸಿಕೊಳ್ಳಬೇಕು.

ಈ ಶಿಕ್ಷಣವನ್ನು ನಿನಗೆ ನೀನೇ ಕೊಟ್ಟುಕೊಳ್ಳಬೇಕೆ ಹೊರತು ಯಾರೂ

ನಿನ್ನನ್ನು ಕೂರಿಸಿ ಶಿಕ್ಷಣ ನೀಡುವುದಿಲ್ಲ. ವಿಶ್ವಾಸವಿಲ್ಲದ ವಿದ್ಯೆಗೆ ವಿಶಿಷ್ಟತೆಯಿಲ್ಲ ಎಂದು ಮಹಾತ್ಮರು ಹೇಳಿದ್ದಾರೆ. ನಿನಗೆ ಗುರುವಿನ ಮೇಲೆ ವಿಶ್ವಾಸವಿದ್ದಾಗ ಮಾತ್ರ ನೀನು ಕಲಿಯುವ ವಿದ್ಯೆಗೆ ವಿಶಿಷ್ಟತೆ ಲಭಿಸುತ್ತದೆ. ಗುರುವಿನ ಮಾತುಗಳ ಮೇಲೆ ಸಂದೇಹವಿದ್ದರೆ ಸಂಪೂರ್ಣ ಶರಣಾಗತಿ ಸಾಧ್ಯವಿಲ್ಲ, ಅದಕ್ಕೇ ವಿಶ್ವಾಸವು ಅತ್ಯಂತ ಅವಶ್ಯಕ.

ದೇವರೇ ಇಲ್ಲ ಎಂದು ವಾದಿಸುವ ನಾಸ್ತಿಕರಿಗೆ ಆತ್ಮ ವಿದ್ಯೆ ಅಥವಾ ಬ್ರಹ್ಮ ವಿದ್ಯೆಯನ್ನು ಬೋಧಿಸಬಾರದು ಎಂದು ಮಹಾತ್ಮರು ತಿಳಿಸಿದ್ದಾರೆ. ಹಾಗೆ ಮಾಡಿದರೆ ಅವರು ನಿಮ್ಮನ್ನು ಹಾಸ್ಯ ಮಾಡುತ್ತಾರೆ. ಶ್ರೀ ಕೃಷ್ಣ ಪರಮಾತ್ಮನು "ಬಲಹೀನರ ಕೈವಶವಾದ ಕಾರಣ ಯೋಗವು ನಶಿಸಿಹೋಯಿತು" ಎಂದು ಹೇಳಿದ್ದಾರೆ. ಬಲಹೀನರು ಪಾಲಕರಾದಾಗ, ಆಧ್ಯಾತ್ಮಿಕತೆ ಅರ್ಥವಾಗದವರು ಅಧಿಕಾರಕ್ಕೆ ಬಂದಾಗ ಯೋಗವು ನಾಶವಾಯಿತು. ಯೋಗಿಗಳನ್ನು ಹಿಂಸಿಸಿದ ಇತಿಹಾಸವೂ ಇದೆ. ಇನ್ನು ಈ ಕಲಿಯುಗದಲ್ಲಿ ಅಂತಹವರ ಕೈಯಲ್ಲಿ ಯೋಗವೇ ನಶಿಸಿಹೋಯಿತು.

ಆದರೆ ಈ ಕಲಿಯುಗದಲ್ಲಿ ಪತ್ರೀಜೀ ಅವರು ಭೂಮಿಗೆ ಬಂದು ನಶಿಸಿಹೋದ ಯೋಗವಿದ್ಯೆಯನ್ನು ಮರಳಿ ಪ್ರಕಾಶಿಸುವಂತೆ ಮಾಡಿದರು. ಪತ್ರೀಜಿ ಅವರು 'ಎಲ್ಲರೂ ಆತ್ಮಗಳೇ' ಎನ್ನುವ ಸತ್ಯವನ್ನು ಮರಳಿ ಬೆಳಕಿಗೆ ತಂದರು. ಅವರು ಎಷ್ಟೋ ಮಂದಿ ಶಿಷ್ಯರನ್ನು ತಯಾರು ಮಾಡಿ. ನಾವೆಲ್ಲರೂ ಆತ್ಮ ಸ್ವರೂಪಿಗಳೇ ಎಂಬ ಮರೆತುಹೋದ ಸತ್ಯವನ್ನು ಅವರು ಎತ್ತಿ ಸಾರಿದರು. ಅದಕ್ಕಾಗಿಯೇ ನೀವು ಗುರುವಿನ ಬಳಿಗೆ ಹೋದಾಗ, ಗುರುವಿನ ಮೇಲೆ ಭಕ್ತಿ ಮತ್ತು ಅವರ ಮಾತುಗಳ ಮೇಲೆ ವಿಶ್ವಾಸವಿಟ್ಟಾಗ ಈ ವಿದ್ಯೆಯನ್ನು ಬಹಳ ಅದ್ಭುತವಾಗಿ ಕಲಿಯುತ್ತೀರಿ.

ಶಿಷ್ಯನಿಗೆ ಮೊದಲು ಇರಬೇಕಾದುದು ಶ್ರದ್ಧೆ. ಶ್ರದ್ಧೆಯಿಂದ ಕೇಳಿ, ಪದೇ ಪದೇ ಮನನ ಮಾಡಿದಾಗ ಮಾತ್ರ ಭಗವಂತನ ಬಗ್ಗೆ ನಿಜವಾದ ಅರಿವು ಮೂಡುತ್ತದೆ. ಗುರುವು ನೀನು 'ಆತ್ಮ ಸ್ವರೂಪಿ' ಎಂದಾಗ 'ಅಹಂ ಆತ್ಮ' ಎಂದು, ಆನಂತರ 'ತತ್ವಮಸಿ' ಎಂದರೆ ಎಲ್ಲರೂ ಆತ್ಮ ಸ್ವರೂಪಿಗಳೇ! ಅಂದರೆ ದೇಹಗಳೆಲ್ಲವೂ ನಶಿಸುವಂತವು, ಆದರೆ ಅಂತರ್ಯಾಮಿಯಾದ ಆ ಆತ್ಮವು ನಶಿಸುವಂತದ್ದಲ್ಲ. 'ಸರ್ವಂ ಖಲ್ವಿದಂ ಬ್ರಹ್ಮ' ಅಂದರೆ ಸೃಷ್ಟಿಯೆಲ್ಲವೂ ಬ್ರಹ್ಮಮಯವೇ ಎಂದು ಕಲಿತು, ಅರಿತುಕೊಂಡಾಗ ನಿಮಗೆ ಭಗವಂತನ ಮೇಲೆ ಭಕ್ತಿ ಹೆಚ್ಚಾಗುತ್ತದೆ. ಈ ಪಂಚಭೂತಗಳ ಮೂಲಕ, ಈ ಪ್ರಕೃತಿಯ ಮೂಲಕ ನಮ್ಮ ಜೀವನ ವಿಧಾನವು ಸುಗಮವಾಗಿ ಸಾಗಲು ಭಗವಂತನು ಎಷ್ಟೋ ಅದ್ಭುತಗಳನ್ನು ಸೃಷ್ಟಿಸಿಕೊಟ್ಟಿದ್ದಾನೆ. ಇದನ್ನು ತಿಳಿದುಕೊಂಡಾಗ ನಮಗೆ ಭಗವಂತನ ಮೇಲೆ ಅಪಾರ ಭಕ್ತಿ ಮೂಡುತ್ತದೆ. ಯಾರಾದರೂ ನಮಗೆ ಸಣ್ಣ ಸಹಾಯ ಮಾಡಿದರೆ ನಾವೆಷ್ಟು ಕೃತಜ್ಞತೆಯಿಂದ ಇರುತ್ತೇವೆ! ಹಾಗಿರುವಾಗ ನಾವು

ಕೇಳಿದರೂ ಕೇಳದಿದ್ದರೂ ಸೃಷ್ಟಿಯಲ್ಲಿ ಸಮಸ್ತ ಜೀವಿಗಳು ಸುಖವಾಗಿ ಬದುಕಲು ಆ ಭಗವಂತನು ಭೂಮಿಯ ಮೇಲೆ ಎಷ್ಟೋ ಸೃಷ್ಟಿಗಳನ್ನು ಮಾಡಿದ್ದಾನೆ.

ಮಾನವ ಜನ್ಮದಲ್ಲಿ ಮಾತ್ರ ಪರಮಾತ್ಮನನ್ನು ತಿಳಿದುಕೊಳ್ಳುವ ಅವಕಾಶವಿದೆ. ಎಷ್ಟೋ ಜನ್ಮಗಳ ಪುಣ್ಯದ ಫಲವಾಗಿ ಸದ್ಗುರು ಲಭಿಸುತ್ತಾರೆ. ಅವರು ಅಜ್ಞಾನವೆಂಬ ನಿದ್ರೆಯಿಂದ ನಮ್ಮನ್ನು ಎಚ್ಚರಿಸುತ್ತಾರೆ. ನೋಡಿ, ಬಹಳ ಜನ ಸೂರ್ಯೋದಯವಾದ ಮೇಲೆ ಎದ್ದು ಹೋಗುತ್ತಾರೆ. ಹಾಗೆಯೇ ಹಿಂದೆ ಹಿರಿಯರು ಕೂಡ 'ಬಹಳ ಹೊತ್ತಾಯಿತು, ಇನ್ನೂ ನಿದ್ರೆಯಿಂದ ಏಳುವುದಿಲ್ಲವೇ?' ಎಂದು ಕೇಳುತ್ತಿದ್ದರು. ಹಾಗೆಯೇ ನಾವು ಕೂಡ ಇಷ್ಟು ಜನ್ಮಗಳಿಂದ ಅಜ್ಞಾನವೆಂಬ ನಿದ್ರೆಯಲ್ಲೇ ಇದ್ದೆವು. ಆದರೆ ಪತ್ರಿಜಿಯವರು ಬಂದ ಮೇಲೆ ಜ್ಞಾನವೆಂಬ ಸೂರ್ಯನನ್ನು ನಮ್ಮೆಲ್ಲರ ಹೃದಯಗಳಲ್ಲಿ ಬೆಳಗಿಸಿದರು. ಏಕೆಂದರೆ ಎಷ್ಟೋ ಜನ್ಮಗಳಿಂದ ಅಜ್ಞಾನದಿಂದ ಎಷ್ಟೋ ಕರ್ಮಗಳನ್ನು ಮಾಡಿದ್ದೇವೆ, ಆದ್ದರಿಂದ ಎಷ್ಟು ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತೇವೆಯೋ ಅಷ್ಟರಮಟ್ಟಿಗೆ ಕರ್ಮಗಳು ದಗ್ಧವಾಗುತ್ತವೆ. ಮೊದಲನೆಯದಾಗಿ ನಿಮ್ಮ ಕರ್ಮಗಳನ್ನು ದಗ್ಧಗೊಳಿಸಿಕೊಳ್ಳಬೇಕು, ಎರಡನೆಯದಾಗಿ ದೇಹವಿರುವಾಗಲೇ ದೇಹವನ್ನು ಸೃಷ್ಟಿಸಿದವನನ್ನು ದರ್ಶಿಸಿಕೊಳ್ಳಬೇಕು ಎಂದು ತಿಳಿದುಕೊಳ್ಳಬೇಕು.

ಹೀಗೆ ತಿಳಿದುಕೊಂಡವರ ಲೌಕಿಕ ಜೀವನ ವಿಧಾನ ಹೇಗಿರಬೇಕೆಂದರೆ 'ಸತ್ ಶೀಲ' ಅಂದರೆ ಭಗವಂತನು ಮೆಚ್ಚುವಂತಹ ಚಾರಿತ್ರ್ಯವನ್ನು ಹೊಂದಿರಬೇಕು. ಈ ಜ್ಞಾನ ಮಾರ್ಗಕ್ಕೆ ಬಂದವರು ಯಾವಾಗಲೂ "ನಾನು ತಪ್ಪು ಮಾಡುತ್ತಿದ್ದೇನೆಯೇ? ಸುಳ್ಳು ಹೇಳುತ್ತಿದ್ದೇನೆಯೇ? ಕಳ್ಳತನ ಮಾಡುತ್ತಿದ್ದೇನೆಯೇ? ತಿಳಿದೋ ತಿಳಿಯದೆಯೋ ಬೇರೆಯವರದ್ದನ್ನು ಪಡೆದುಕೊಳ್ಳುತ್ತಿದ್ದೇನೆಯೇ?" ಎಂದು ತಮ್ಮನ್ನು ತಾವೇ ವಿಚಾರಿಸಿಕೊಳ್ಳುತ್ತಿರಬೇಕು.

**"ಯಾರು ಈ ಆತ್ಮ ವಿದ್ಯೆಯನ್ನು, ಬ್ರಹ್ಮ ವಿದ್ಯೆಯನ್ನು ಅಧ್ಯಯನ ಮಾಡಿ ಆಚರಣೆಯಲ್ಲಿಟ್ಟುಕೊಂಡು, ಪಕ್ಕದವರಿಗೆ ಬೋಧಿಸುತ್ತಾರೋ ಅವರಿಗೆ ನಾನು ವಿಧೇಯನಾಗಿರುತ್ತೇನೆ" ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದ್ದಾನೆ.**

ಉಪನಿಷತ್ತುಗಳಲ್ಲಿ ಕೂಡ **"ನೀನು ಧರ್ಮವನ್ನು ಆಚರಿಸಿದರೆ ಆ ಧರ್ಮವೇ ನಿನ್ನನ್ನು ರಕ್ಷಿಸುತ್ತದೆ" ಎಂದು ಹೇಳಲಾಗಿದೆ. ಅಂದರೆ "ಈ ಮಾನವ ಜನ್ಮದಲ್ಲಿ ಆತ್ಮ ವಿದ್ಯೆ ಮತ್ತು ಬ್ರಹ್ಮ ವಿದ್ಯೆಯನ್ನು ಕಲಿತು, ಆಚರಿಸಿ, ಪಕ್ಕದವರಿಂದಲೂ ಆಚರಿಸುವಂತೆ ಮಾಡುವುದೇ ಧರ್ಮ" ಎಂದು ಹೇಳಲ್ಪಟ್ಟಿದೆ.** ನೀವೆಲ್ಲರೂ ಕೂಡ ಈ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದೀರಿ. ಗುರುಗಳು ಹೇಳಿದ್ದನ್ನು ಆಚರಿಸುತ್ತಿದ್ದೀರಿ, ಪಕ್ಕದವರಿಗೂ ತಿಳಿಸುತ್ತಿದ್ದೀರಿ ಮತ್ತು ಭಗವಂತನು ಮೆಚ್ಚುವಂತೆ ನಡೆದುಕೊಳ್ಳುತ್ತಿದ್ದೀರಿ.

ಇವನ್ನೆಲ್ಲಾ ಮಾಡಿದವರು ಯಾವಾಗಲೂ ಆನಂದದ ಸ್ಥಿತಿಯಲ್ಲೇ ಇರುತ್ತಾರೆ.

ನಿಮ್ಮ ಸ್ವರೂಪವೇ ಆನಂದ. ನಾನು 'ಆತ್ಮ' ಎಂದುಕೊಂಡಾಗ ಆನಂದ, ನಾನು 'ದೇಹ' ಎಂದುಕೊಂಡಾಗ ದುಃಖ ಶುರುವಾಗುತ್ತದೆ. ಹಾಗಿರುವಾಗ ಆನಂದ ಸ್ವರೂಪಿಯಾಗಿ ಭೂಮಿಯ ಮೇಲೆ ಬಂದು ಏಕೆ ಆನಂದವನ್ನು ಅನುಭವಿಸಲಾಗದೆ ಹೋಗುತ್ತಿದ್ದಾರೆ ಅಂದರೆ ಅದಕ್ಕೆ ಕಾರಣ ವಾಸನೆಗಳು (ಸಂಸ್ಕಾರಗಳು)ಅಂದರೆ ಒಬ್ಬ ವ್ಯಕ್ತಿಯು ಅಧ್ಯಾತ್ಮಿಕ ಹಾದಿಯಲ್ಲಿ ಹಿನ್ನಡೆ ಅನುಭವಿಸಲು ವಾಸನೆಗಳೇ ಕಾರಣ. ಅವು ಮೂರು ಪ್ರಕಾರ: 1. ದೇಹ ವಾಸನೆ, 2. ಲೋಕ ವಾಸನೆ, 3. ಶಾಸ್ತ್ರ ವಾಸನೆ.

**1) ದೇಹ ವಾಸನೆ:** "ನಾನು ಈ ದೇಹ" ಎಂದು ಭಾವಿಸುತ್ತಾ ಪದೇ ಪದೇ ಮಾಯೆಗೆ ವಶವಾಗುತ್ತೀರಿ. ಈ ಮಾಯೆಯಿಂದಾಗಿಯೇ ಆನಂದ ಸ್ವರೂಪರಾದ ನೀವು ದುಃಖದಲ್ಲಿ ಮುಳುಗುತ್ತೀರಿ. ಈ ಭೂಮಿಯ ಮೇಲೆ ಭಗವಂತನು ಸೃಷ್ಟಿಸಿದ ಮಾಯೆಯು ಮಾನವ ಬುದ್ಧಿಯನ್ನು ಎಷ್ಟು ಕೆಳಮಟ್ಟಕ್ಕೆ ಇಳಿಸುತ್ತದೆ ಎಂದರೆ ನೀವು ಪರಮಾತ್ಮನತ್ತ ಪಯಣಿಸುತ್ತಿರುವಾಗ, ನಿಮ್ಮನ್ನು ಪರೀಕ್ಷಿಸಲು ಮಧ್ಯೆ ಮಧ್ಯೆ ಮಾಯೆಯನ್ನು ಕಳುಹಿಸುತ್ತಾನೆ. ಆ ಕ್ಷಣದಲ್ಲಿ ನೀವು ಮಾಯೆಗೆ ವಶವಾಗಿ, ನಿಮ್ಮನ್ನು ಕೇವಲ ದೇಹವೆಂದು ಭಾವಿಸಿದ ತಕ್ಷಣ ಎಲ್ಲ ಬಂಧನಗಳು ಮತ್ತು ಜವಾಬ್ದಾರಿಗಳು ನೆನಪಾಗಿ ಮತ್ತೆ ದುಃಖದಲ್ಲಿ ಮುಳುಗುತ್ತೀರಿ.

**2) ಲೋಕ ವಾಸನೆ:** ಯಾವುದೇ ಕೆಲಸ ಮಾಡಬೇಕಾದರೂ "ಲೋಕದವರು ಏನೆಂದುಕೊಳ್ಳುತ್ತಾರೆ?" ಎಂದು ಜನರ ಬಗ್ಗೆಯೇ ಯೋಚಿಸುತ್ತಾರೆ. ಈ ಲೋಕದಲ್ಲಿ ಎಲ್ಲರನ್ನೂ ನೋಡಿ "ಅವರು ಸುಖವಾಗಿದ್ದಾರೆ, ಇವರು ಸುಖವಾಗಿದ್ದಾರೆ, ಅವರಿಗೆ ದೊಡ್ಡ ಮನೆಗಳಿವೆ, ಕಾರುಗಳಿವೆ, ನನ್ನ ಬಳಿ ಇಲ್ಲ" ಎಂದು ದುಃಖ ಪಡುತ್ತಾರೆ.
ಆದರೆ "ನಿನ್ನ ವಾಸ್ತವವನ್ನು ನೀನೇ ಸೃಷ್ಟಿಸಿಕೊಂಡು ಬಂದಿದ್ದೀಯ" ಎನ್ನುವ ಗುರುಗಳ ಮಾತು ನೆನಪಿನಲ್ಲಿದ್ದಾಗ (ಎಚ್ಚರದಲ್ಲಿರುವಾಗ), ನಿನ್ನ ಬುದ್ಧಿ ಚಂಚಲವಾಗುವುದಿಲ್ಲ. ನಿಜವಲ್ಲವೇ? "ನಾನು ಈ ಭೂಮಿಯ ಮೇಲೆ ಹೇಗೆ ಇರಬೇಕು, ಹೇಗೆ ಬದುಕಬೇಕು ಎಂದು ಮೊದಲೇ ನಿರ್ಧರಿಸಿ ಬಂದಿದ್ದೇನೆ, ಆದರೆ ಲೋಕೇಶ್ವರನ ಬಳಿ ಒಪ್ಪಿಕೊಂಡು ಬಂದಿದ್ದನ್ನು ಮರೆತು ಹೋಗುತ್ತಿದ್ದೇನೆ, ನಾನು ಜ್ಞಾನವನ್ನು ಪಡೆಯಬೇಕು" ಎಂದು ಭಾವಿಸಿ ಈ ಲೋಕ ವಾಸನೆಯನ್ನು ದಾಟಬೇಕು.

**3) ಶಾಸ್ತ್ರ ವಾಸನೆ:** ಅನೇಕ ಬಗೆಯ ಶಾಸ್ತ್ರಗಳನ್ನು ಓದಿ "ನನಗೆ ಎಲ್ಲವೂ ತಿಳಿದುಹೋಗಿದೆ" ಎಂದು ಅಂದುಕೊಳ್ಳುತ್ತಾರೆ. ಶಾಸ್ತ್ರಗಳು ನಿಮಗೆ ಎಷ್ಟು ಮಟ್ಟಿಗೆ ಉಪಯೋಗವಾಗುತ್ತವೆ ಎಂದರೆ. ಆತ್ಮವಿದ್ಯೆ ಮತ್ತು ಬ್ರಹ್ಮ ವಿದ್ಯೆಯನ್ನು ಬೋಧಿಸುವ ಗುರುವು ಬರುವವರೆಗೆ ಮಾತ್ರ ಶಾಸ್ತ್ರಗಳ ಅಗತ್ಯವಿರುತ್ತದೆ. ಗುರುವು

ಹೇಳಿದ ಶಾಸ್ತ್ರಗಳನ್ನು ಓದುತ್ತಾ ಆತ್ಮ ದರ್ಶನವಾಗುವವರೆಗೆ ಮಾತ್ರ ಶಾಸ್ತ್ರಗಳು ಉಪಯೋಗಕ್ಕೆ ಬರುತ್ತವೆ. ಯಾವಾಗ ಆತ್ಮ ದರ್ಶನವಾಗುತ್ತದೋ, ಆಮೇಲೆ ಶಾಸ್ತ್ರಗಳ ಅಗತ್ಯವಿರುವುದಿಲ್ಲ. ಶಾಸ್ತ್ರಗಳನ್ನು ಹಿಡಿದುಕೊಂಡು ಕೂರುವ ಅವಶ್ಯಕತೆಯೂ ಇರುವುದಿಲ್ಲ. ಅದಕ್ಕಾಗಿಯೇ ಬುದ್ಧನು "ನದಿಯನ್ನು ದಾಟಲು ದೋಣಿ ಬೇಕು, ಆದರೆ ನದಿಯನ್ನು ದಾಟಿದ ಮೇಲೆ ದೋಣಿಯ ಅಗತ್ಯವಿಲ್ಲ" ಎಂದು ಹೇಳಿದ್ದಾನೆ. ಹಾಗೆಯೇ ನಿಮಗೂ ಆತ್ಮ ದರ್ಶನವಾಗುವವರೆಗೆ ಮಾತ್ರ ಶಾಸ್ತ್ರಗಳು ಬೇಕು, ಆತ್ಮ ದರ್ಶನವಾದ ಮೇಲೆ ಶಾಸ್ತ್ರಗಳ ಕೆಲಸವಿಲ್ಲ. "ನೀನೇ ಆತ್ಮ ಎಂಬ ಅನುಭೂತಿ ಉಂಟಾದ ಮೇಲೆ ಇನ್ನು ಶಾಸ್ತ್ರಗಳ ಅಗತ್ಯವಿಲ್ಲ, ಅದನ್ನು ಸಹ ಬಿಟ್ಟುಬಿಡಬೇಕು" ಎಂದು ಮುಕ್ತೋಪನಿಷತ್ತಿನಲ್ಲಿ ರಾಮನು ಆಂಜನೇಯ ಸ್ವಾಮಿಗೆ ಹೇಳಿದ್ದಾನೆ.

⏭ **ಅನುಭೂತಿಯೇ ಮುಖ್ಯ:** ಶಾಸ್ತ್ರಗಳು ಮತ್ತು ಉಪನಿಷತ್ತುಗಳು ನಿಮಗೆ 'ಆತ್ಮಾನುಭೂತಿ' ಬರುವವರೆಗೆ ಮಾತ್ರ. "ಸರ್ವಂ ಖಲ್ವಿದಂ ಬ್ರಹ್ಮ" (ಎಲ್ಲವೂ ಬ್ರಹ್ಮಮಯ) ಎಂಬ ಅನುಭೂತಿ ಉಂಟಾದ ದಿನ ಎಲ್ಲವನ್ನೂ ಬಿಟ್ಟು ಆ ಅನುಭೂತಿಯಲ್ಲಿ ದೈವವಾಗಿ ಇರಬೇಕು.

⏭ **ಭಕ್ತಿ ಮತ್ತು ನಂಬಿಕೆ:** ಈ ವಿದ್ಯೆಯನ್ನು ಕಲಿಯುವಾಗ ಪರಮಾತ್ಮನ ಮೇಲೆ ಮತ್ತು ಗುರುವಿನ ಮೇಲೆ ಅಚಲವಾದ ಭಕ್ತಿ ಇದ್ದಾಗ ಮಾತ್ರ ಆಧ್ಯಾತ್ಮಿಕತೆಯಲ್ಲಿ ಪ್ರಗತಿ ಹೊಂದಲು ಸಾಧ್ಯ. ಮಧ್ಯದಲ್ಲಿ ಅನುಮಾನ ಬಂದಾಗ ಹಿನ್ನಡೆಯಾಗುತ್ತದೆ.

⏭ **ಸತ್ ಚಾರಿತ್ರ್ಯ:** ಈ ವಿದ್ಯೆಯು ಲೌಕಿಕ ಜೀವನದಲ್ಲಿ ಸತ್ ಚಾರಿತ್ರ್ಯ ಮತ್ತು ಸಚ್ಛೀಲತೆ ಉಳ್ಳವರಿಗೆ ಮಾತ್ರ ಒಲಿಯುತ್ತದೆ. ಸ್ವಲ್ಪ ಆಸೆ ಇದ್ದರೂ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ.

⏭ **ಮಾಯೆಯಿಂದ ಎಚ್ಚರ:** ಭೂಮಿಗೆ ಏಕೆ ಬಂದಿದ್ದೇವೆ ಎಂದು ಅರ್ಥವಾದರೂ ಸಹ, ಮಧ್ಯದಲ್ಲಿ ಮಾಯೆಗೆ ವಶವಾಗಿ ಆಸೆಗಳು ಹುಟ್ಟುತ್ತಲೇ ಇರುತ್ತವೆ. ಅಂತಹ ಸಮಯದಲ್ಲಿ "ನನ್ನ ವಾಸ್ತವಕ್ಕೆ ನಾನೇ ಸೃಷ್ಟಿಕರ್ತ" ಎಂದು ಗುರುಗಳು ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳಬೇಕು. ಆತ್ಮವಿದ್ಯೆ ಅಥವಾ ಬ್ರಹ್ಮ ವಿದ್ಯೆಯನ್ನು ಕಲಿಯಬೇಕೆಂದರೆ ಮೊದಲು ಗುರುವಿನ ಮೇಲೆ ಭಕ್ತಿ ಮತ್ತು ಗುರುವಿನ ಮಾತಿನ ಮೇಲೆ ವಿಶ್ವಾಸ ಇರಬೇಕು. ಈ ಎರಡೂ ಇದ್ದಾಗ, ತ್ರಿಕರಣ ಶುದ್ಧವಾಗಿ ಭಗವಂತನ ಮೇಲೆ ಅಂದರೆ ಆತ್ಮನ ಮೇಲೆ ಭಕ್ತಿಯನ್ನು ಹೆಚ್ಚಿಸಿಕೊಂಡರೆ ಯಾವುದೇ ಕಷ್ಟವಿಲ್ಲದೆ. ಕಲಿಯುತ್ತಾರೆ. ಈ ವಿದ್ಯೆಯನ್ನು ಕಲಿಯಲೆಂದೇ ನಾವು ಭೂಮಿಯ ಮೇಲೆ ಬಂದಿದ್ದೇವೆ ಎಂದು ಗುರುವಿನ ಮೂಲಕ ತಿಳಿದುಕೊಂಡ ನಂತರ, ನಿಮ್ಮ ದೃಷ್ಟಿ ಇತರ ವಿಷಯಗಳ ಮೇಲೆ ಇರಬಾರದು. ಹಾಗೆಯೇ ಆತ್ಮದ ಮೇಲೆ ದೃಷ್ಟಿ ಇರುವವನು ಈ ಎರಡು ವಿದ್ಯೆಗಳನ್ನು ಸರಿಯಾಗಿ ಅಧ್ಯಯನ ಮಾಡಬಲ್ಲನು. ಪ್ರಪಂಚದ ಮೇಲೆ ದೃಷ್ಟಿ ಇರುವವನು ಒಂದು ಹೆಜ್ಜೆ ಇಲ್ಲಿ, ಒಂದು ಹೆಜ್ಜೆ ಅಲ್ಲಿ ಹಾಕುತ್ತಾ ಸಾಗಬೇಕಾದ ರೈಲಿನಲ್ಲಿ ಏನನ್ನೂ ಸಾಧಿಸಲಾರನು. ಅದಕ್ಕಾಗಿಯೇ

ಪ್ರತಿ ಶಿಷ್ಯನೂ ಕೂಡ ಗುರುವಿನ ಮೇಲೆ, ಆತ್ಮದ ಮೇಲೆ ಅಪಾರವಾದ ಭಕ್ತಿಯನ್ನು ಬೆಳೆಸಿಕೊಂಡರೆ ಈ ವಿದ್ಯೆಯನ್ನು ಬಹಳ ಬೇಗ ಕಲಿಯಬಲ್ಲನು. ನಿಮ್ಮ ಕರ್ಮಗಳು ದಹನವಾಗಬೇಕೆಂದರೆ ಈ ಆತ್ಮ ವಿದ್ಯೆಯ ಮೂಲಕ ಜ್ಞಾನವನ್ನು ಪಡೆಯಬೇಕು. ಅದಕ್ಕೆ ಭಕ್ತಿ ಮತ್ತು ಶ್ರದ್ಧೆ ಎರಡೂ ಇರಬೇಕು, ಮಾತಿನ ಮೇಲೆ ವಿಶ್ವಾಸವಿರಬೇಕು. ಗುರುಗಳು ಹೇಳಿದ ಪ್ರತಿಯೊಂದು ವಿಷಯವನ್ನು ನಂಬಿದರೆ ಮಾತ್ರ ಅದನ್ನು ಆಚರಣೆಯಲ್ಲಿ ತರಲು ಸಾಧ್ಯವಾಗುತ್ತದೆ. ಇವೆಲ್ಲವನ್ನೂ ಅರ್ಥಮಾಡಿಕೊಳ್ಳುತ್ತಾ, ಆಚರಿಸುತ್ತಾ ಈ ಮಾರ್ಗದಲ್ಲಿ ಮುಂದೆ ಸಾಗಬೇಕು.

## ಸಾಧನೆ ಮಾಡುತ್ತಿದ್ದರೂ ಜ್ಞಾನ ಪಡೆಯಲು ಸಾಧ್ಯವಾಗದಿರಲು ಕಾರಣಗಳು

ಎಲ್ಲರೂ ಆತ್ಮ ಸ್ವರೂಪಿಗಳೇ, ಎಲ್ಲರಲ್ಲೂ ಆತ್ಮವಿದೆ. ಆದರೆ ಜ್ಞಾನವನ್ನು ಕೆಲವರು ಮಾತ್ರ ಪಡೆಯುತ್ತಿದ್ದಾರೆ, ಕೆಲವರು ಏಕೆ ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬುದಕ್ಕೆ ಕಾರಣವನ್ನು ಇಂದು ತಿಳಿದುಕೊಳ್ಳೋಣ.

**"ಸರ್ವಂ ಖಲ್ವಿದಂ ಬ್ರಹ್ಮ"** ಎಂದು ನೀವು ತಿಳಿದುಕೊಂಡಿದ್ದೀರಿ, ಎಲ್ಲರಿಗೂ ಬೋಧಿಸುತ್ತಿದ್ದೀರಿ. ಅಂದರೆ ಈ ಸೃಷ್ಟಿಯಲ್ಲಿರುವ ಜೀವಿಗಳು, ಜೀವರಾಶಿಗಳೆಲ್ಲವೂ ಆತ್ಮ ಸ್ವರೂಪವೇ ಎಂದು ಕೇವಲ ಮಾನವನು ಮಾತ್ರ ತಿಳಿದುಕೊಳ್ಳಬಲ್ಲ. ಆದರೆ ಈ ಮಾನವರಲ್ಲಿ ಕೆಲವರು ಮಾತ್ರವೇ ಈ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತಿದೆ. ಕೆಲವರು ಗುರುಗಳು ಬಂದರೂ ಈ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಈ ಜ್ಞಾನವನ್ನು ಪಡೆಯಲು ಸಾಧ್ಯವಾಗದಿರಲು ಕಾರಣಗಳು:

**1. ಏಕಾಗ್ರತೆಯ ಕೊರತೆ:** ಗುರುಗಳು ಹೇಳುವ ವಿಷಯಗಳ ಮೇಲೆ ಏಕಾಗ್ರತೆ ಹೆಚ್ಚಾಗಿ ಇರಬೇಕು. ಆ ಏಕಾಗ್ರತೆ ಲೋಪವಾದವರಲ್ಲಿ ಜ್ಞಾನವು ಬೆಳೆಯುವುದಿಲ್ಲ. ಈಗ ನೀವು ಯಾವುದಾದರೂ ಒಂದು ವಿಷಯವನ್ನು ಏಕಮನಸ್ಸಿನಿಂದ ಕೇಳುತ್ತಿರುವಾಗ, ಮತ್ತೆ ಇನ್ನೊಂದು ವಿಷಯದ ಮೇಲೆ ದೃಷ್ಟಿ ಹರಿಸಿದರೆ ನಿಮ್ಮ ಏಕಾಗ್ರತೆ ಲೋಪವಾಗುತ್ತದೆ. ಉದಾಹರಣೆಗೆ: ಬೆಳಿಗ್ಗೆ ಜೂಮ್ (Zoom) ಕ್ಲಾಸ್ ನಡೆಯುತ್ತಿರುವಾಗ ಕೆಲವರು ಅಡುಗೆ ಮಾಡುತ್ತಾ ಕ್ಲಾಸ್ ಕೇಳುತ್ತಿರುತ್ತಾರೆ. ಆಗ ಅರ್ಧ ದೃಷ್ಟಿ ಕ್ಲಾಸ್ ಮೇಲೆ, ಅರ್ಧ ದೃಷ್ಟಿ ಅಡುಗೆಯ ಮೇಲೆ ಇರುತ್ತದೆ. ಹಾಗೆ ನೀವು ಎಷ್ಟು ವರ್ಷಗಳು ಜ್ಞಾನವನ್ನು ಕೇಳಿದರೂ, ಎಷ್ಟೇ ಸಾಧನೆ ಮಾಡಿದರೂ ಪೂರ್ಣ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಸಾಧನೆಯಲ್ಲಿ ಏಕಾಗ್ರತೆ ಅತ್ಯಂತ ಅವಶ್ಯಕ.

ಅದಕ್ಕೇ ನಾನು ಎಲ್ಲರಿಗೂ ಹೇಳುತ್ತಿರುತ್ತೇನೆ: ಕೇವಲ ಅರ್ಧ ಗಂಟೆ ಕೆಲಸಗಳನ್ನು ನಿಲ್ಲಿಸಿ ಏಕಾಗ್ರತೆಯಿಂದ ಕ್ಲಾಸ್ ಕೇಳಿ, ಆಮೇಲೆ ಕೆಲಸಗಳನ್ನು ಮಾಡಿಕೊಳ್ಳಿ ಎಂದು.

**2. ಮನಸ್ಸು ಮಲಿನವಾಗುವುದು:** ಪ್ರಾಪಂಚಿಕ ಜೀವನದಲ್ಲಿ ಇದ್ದಾಗ ತುಂಬಾ ಶುದ್ಧತೆಯಿಂದ ಇರಬೇಕು. ಮಲಿನವಾದ ಮನಸ್ಸಿನಿಂದ ಯಾರೂ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಮನಸ್ಸು ಪದೇ ಪದೇ ಲೌಕಿಕ ವಿಷಯಗಳ ಕಡೆಗೆ ಹೋದಾಗ, ಅದು ಹೆಚ್ಚು ವಿಷಯಗಳನ್ನು ಸಂಗ್ರಹಿಸುತ್ತದೆ ಮತ್ತು ಮತ್ತೆ ಮಲಿನವಾಗುತ್ತದೆ. ಅನೇಕರು ಸಾಧನೆ ಮಾಡಿ ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕೆಂದುಕೊಳ್ಳುತ್ತಾರೆ, ಗಂಟೆಗಟ್ಟಲೆ ಸಾಧನೆ ಮಾಡುತ್ತಾರೆ. ಆದರೆ ಮತ್ತೆ ಪ್ರಪಂಚದ ವಿಷಯಗಳಲ್ಲಿ ತೊಡಗಿಸಿಕೊಂಡು ಮನಸ್ಸನ್ನು ಮಲಿನಗೊಳಿಸಿಕೊಳ್ಳುತ್ತಾರೆ. ಜ್ಞಾನವನ್ನು ಪಡೆಯಲು ಅಡ್ಡಿಯಾಗುವ ಎರಡು ಮುಖ್ಯ ಕಾರಣಗಳು:

- **ಏಕಾಗ್ರತೆಯ ಕೊರತೆ.**
- **ಮನಸ್ಸನ್ನು ಮಲಿನಗೊಳಿಸಿಕೊಳ್ಳುವುದು.**

ಗುರುಗಳು ಬೋಧಿಸುತ್ತಿದ್ದರೂ ಜ್ಞಾನವು ಸಿದ್ಧಿಸದಿರಲು ಇವೇ ಕಾರಣಗಳು. ನಾವೆಲ್ಲರೂ ಆತ್ಮ ಸ್ವರೂಪಿಗಳಾಗಿದ್ದರೂ, ಕೆಲವರು ಮಾತ್ರ ಜ್ಞಾನವನ್ನು ಪಡೆಯಲು ಇವೇ ಅಡೆತಡೆಗಳು. ನೀರು ನಿಶ್ಚಲವಾಗಿ ಮತ್ತು ನಿರ್ಮಲವಾಗಿದ್ದಾಗ, ಆಕಾಶದಲ್ಲಿರುವ ಚಂದ್ರನು ಆ ನೀರಿನಲ್ಲಿ ಸ್ಪಷ್ಟವಾಗಿ ಕಾಣಿಸುತ್ತಾನೆ. ಆದರೆ ಆ ನೀರು ಅಲುಗಾಡುತ್ತಿದ್ದರೆ ಅಥವಾ ಕೊಳಕಾಗಿದ್ದರೆ, ಚಂದ್ರನ ಬಿಂಬವು ಸ್ಪಷ್ಟವಾಗಿ ಕಾಣಿಸುವುದಿಲ್ಲ. ನೀರು ಅಲುಗಾಡುತ್ತಿದ್ದರೆ ಚಂದ್ರನೇ ಅಲುಗಾಡುತ್ತಿರುವಂತೆ ಭಾಸವಾಗುತ್ತದೆ. ಅದೇ ರೀತಿ, ಮನಸ್ಸು ಸ್ವಚ್ಛವಾಗಿಲ್ಲದಿದ್ದರೆ ಜ್ಞಾನವು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಮನಸ್ಸು ಮಲಿನವಾಗಿದ್ದಾಗ, ಜ್ಞಾನವು ಆತ್ಮದಿಂದ ಹೊರಹೊಮ್ಮುವುದಿಲ್ಲ.

**3) ಇಂದ್ರಿಯ ನಿಗ್ರಹ:** ಇಂದ್ರಿಯಗಳಿಗೆ ವಶನಾದವನು ಪಶು ಸಮಾನನಾಗಿರುತ್ತಾನೆ. ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡವನು ಶಿವತ್ವದಲ್ಲಿ ಅಥವಾ ಈಶ್ವರ ತತ್ವದಲ್ಲಿ ಇದ್ದಂತೆ. ಇಂದ್ರಿಯಗಳಿಗೆ ದಾಸನಾಗಿ ಮನಸ್ಸನ್ನು ಮಲಿನಗೊಳಿಸಿಕೊಂಡರೆ ಜ್ಞಾನವು ಲಭಿಸುವುದಿಲ್ಲ. ಪಶುತ್ವ ಎಂದರೆ ಪರಾಧೀನ ಬದುಕು. ಇಂದ್ರಿಯಗಳಿಗೆ ಶರಣಾದಾಗ ಜೀವನವು ಪರಾಧೀನವಾಗುತ್ತದೆ.

ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ವಿಷಯ ಸಂಗ್ರಹಣೆ ಮಾಡಬೇಕು. ಆಗ ಮಾತ್ರ ನೀವು ಈಶ್ವರ ತತ್ವವನ್ನು ಪ್ರವೇಶಿಸುತ್ತೀರಿ, ಆಗಲೇ ನಿಮಗೆ ಜ್ಞಾನವು ವೃದ್ಧಿಯಾಗುತ್ತದೆ. ಬಾಹ್ಯವಾಗಿ ನಿಮ್ಮ ಮನಸ್ಸು ಎಷ್ಟು ವೇಗವಾಗಿ ಓಡುತ್ತದೆ–ಯೋ, ನಿಮ್ಮ ಆತ್ಮಶಕ್ತಿಯು ಅಷ್ಟೇ ವ್ಯಯವಾಗುತ್ತದೆ, ಅದು ಜ್ಞಾನ ಬೆಳೆಯಲು ಸಹಕಾರಿಯಾಗುವುದಿಲ್ಲ. ಅದಕ್ಕಾಗಿಯೇ ಈ ಪ್ರಯತ್ನಗಳೆಲ್ಲವೂ ಜ್ಞಾನಕ್ಕಾಗಿಯೇ ಎಂದು ನಿಮ್ಮೆಲ್ಲರಿಗೂ ತಿಳಿದಿದೆ. ಜ್ಞಾನವನ್ನು ಪಡೆಯದ ಹೊರತು ಮೋಕ್ಷವಿಲ್ಲ ಎಂದು ನೀವು ಅನೇಕ ಬಾರಿ ತಿಳಿದುಕೊಂಡಿದ್ದೀರಿ.

ಅದಕ್ಕಾಗಿಯೇ ಇಂದ್ರಿಯ ನಿಗ್ರಹ ಎಂದು ಗುರುಗಳು ಪದೇ ಪದೇ ಹೇಳುತ್ತಾರೆ. ಒಂದೇ ಒಂದು ಇಂದ್ರಿಯದ ಮೇಲೆ ನಿಗ್ರಹವಿಲ್ಲದಿದ್ದರೂ ಮನಸ್ಸು ಮಲಿನವಾಗುತ್ತದೆ. ಬಿಳಿಯ ಗೋಡೆಯ ಮೇಲೆ ಒಂದು ಸಣ್ಣ ಕಲೆ ಬಿದ್ದರೆ ಎಲ್ಲರ ದೃಷ್ಟಿ ಆ ಕಲೆಯ ಮೇಲೆಯೇ ಇರುತ್ತದೆ. ಹಾಗೆಯೇ ನಿಮ್ಮ ಮನಸ್ಸಿನ ಮೇಲೆ 'ವಿಷಯ ಸಂಗ್ರಹ' (ಲೌಕಿಕ ಆಸೆಗಳು) ಎಂಬ ಕಲೆ ಬಿದ್ದರೆ ಜ್ಞಾನವು ವಿಕಸಿಸುವುದಿಲ್ಲ. ಎಲ್ಲರೂ ಆತ್ಮ ಸ್ವರೂಪಿಗಳೇ ಆದರೂ, ಅವರವರ ದೋಷಗಳಿಂದಾಗಿ ಅವರು ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಜ್ಞಾನವನ್ನು ಪಡೆಯಬೇಕೆನ್ನುವವರಿಗೆ ಮೊದಲು ಆತ್ಮನ ಮೇಲೆ ಅಚಲವಾದ ಭಕ್ತಿ ಇರಬೇಕು. ಅಂದರೆ ಆತ್ಮ ಎಂದರೆ ಭಗವಂತ ಎಂದು ನಾವು ತಿಳಿದುಕೊಂಡಿದ್ದೇವೆ. "ಆ ಭಗವಂತನಿಂದಲೇ ಈ ಸೃಷ್ಟಿ ಕಾರ್ಯವು ನಡೆಯುತ್ತಿದೆ, ಈ ಸೃಷ್ಟಿಯಲ್ಲಿ ನಾನು ಸುಖವಾಗಿ ಜೀವಿಸಲು ಸಾಧ್ಯವಾಗುತ್ತಿದೆ, ಆ ಭಗವಂತನೇ ನನ್ನ ಶರೀರವನ್ನು ಕಾಪಾಡುತ್ತಿದ್ದಾನೆ, ಇಡೀ ಸೃಷ್ಟಿಯಲ್ಲಿದ್ದು ಸೃಷ್ಟಿಯನ್ನು ರಕ್ಷಿಸುತ್ತಿದ್ದಾನೆ" ಎಂದು ನೀವು ಎಷ್ಟು ಹೆಚ್ಚಾಗಿ ತಿಳಿದುಕೊಳ್ಳುತ್ತೀರೋ, ನಿಮಗೆ ಭಗವಂತನ ಮೇಲೆ ಅಷ್ಟೇ ಭಕ್ತಿ ಉಂಟಾಗುತ್ತದೆ.
ಆ ಭಕ್ತಿ ಇದ್ದಾಗಲೇ ಸಾಧನೆಯನ್ನು ಇನ್ನೂ ಉತ್ತಮವಾಗಿ ಮಾಡಲು ಸಾಧ್ಯವಾಗುತ್ತದೆ. ಸ್ವಾಧ್ಯಾಯ (ಅಧ್ಯಯನ) ಮಾಡುವಾಗ ಕೂಡ ಹೆಚ್ಚಿನ ಏಕಾಗ್ರತೆ ಇರಬೇಕು. ಅದಕ್ಕಾಗಿಯೇ ಧ್ಯಾನಿಯ ಜೀವನದಲ್ಲಿ ಏಕಾಗ್ರತೆ ಇದ್ದರೆ ಮಾತ್ರ ಜ್ಞಾನ ಪಡೆಯಲು ಸಾಧ್ಯ ಎಂದು ಗುರುಗಳು ಪದೇ ಪದೇ ಹೇಳುತ್ತಾರೆ.

**4. ದೃಢ ದೀಕ್ಷೆ:** ದೃಢ ದೀಕ್ಷೆ ಎಂದರೆ ಸಾಧನೆಯನ್ನು ಒಂದು ದೀಕ್ಷೆಯಂತೆ ಮಾಡಬೇಕು. ಈಗ ನೀವು ಹಲವಾರು ರೀತಿಯ ದೀಕ್ಷೆಗಳನ್ನು ನೋಡುತ್ತಿದ್ದೀರಿ. ಅಯ್ಯಪ್ಪ ದೀಕ್ಷೆ, ಹನುಮಾನ್ ದೀಕ್ಷೆ, ಶಿವ ದೀಕ್ಷೆ ಎಂದು ಬಹಳಷ್ಟು ಜನರು ಮಾಡುತ್ತಿದ್ದಾರೆ. ಆ 40 ದಿನಗಳ ದೀಕ್ಷೆಯಲ್ಲಿ ಎಷ್ಟು ಶ್ರದ್ಧೆಯಿಂದ ಇರುತ್ತಾರೋ, ಹಾಗೆಯೇ ನೀವು ಕೂಡ ಜೀವನಪರ್ಯಂತ ದೀಕ್ಷೆ ವಹಿಸಿ ಗುರುಗಳು ಹೇಳಿದ ಆಹಾರ ನಿಯಮಗಳನ್ನು ಪಾಲಿಸುತ್ತಾ, ಗುರುಗಳು ಹೇಳಿದ ಸಾಧನೆ, ಸ್ವಾಧ್ಯಾಯ ಮಾಡುತ್ತಾ, ಜ್ಞಾನ ಪಡೆಯಲು ಪ್ರಯತ್ನಿಸಬೇಕು. "ನನಗೆ ಆತ್ಮದರ್ಶನವಾಗಬೇಕು" ಎಂಬ ದೃಢ ದೀಕ್ಷೆ ನಿಮ್ಮಲ್ಲಿರಬೇಕು.

**4. ಸರ್ವ ಸಂಘ ಪರಿತ್ಯಾಗ:** ಸರ್ವ ಸಂಘ ಪರಿತ್ಯಾಗ ಎಂದರೆ – ಈ ಸಂಘದಲ್ಲಿ (ಸಮಾಜದಲ್ಲಿ) ಎಲ್ಲವೂ ಬೇಕೆಂದು ಕೊಳ್ಳುತ್ತಾರೆ, ಎಲ್ಲವನ್ನೂ ಅನುಭವಿಸಬೇಕೆಂದು ಕೊಳ್ಳುತ್ತಾರೆ. ಆದರೆ ಆತ್ಮವನ್ನು ಪಡೆಯಬೇಕೆಂದುಕೊಂಡಾಗ, ಸೃಷ್ಟಿಕರ್ತನ ಬಳಿಗೆ ಸೇರುತ್ತಿರುವ ನೀವು, ಸೃಷ್ಟಿಕರ್ತನನ್ನು ತಿಳಿದುಕೊಳ್ಳುತ್ತಿರುವ ನೀವು, ಈ ಸೃಷ್ಟಿಕರ್ತ ಸೃಷ್ಟಿಸಿದ ಸೃಷ್ಟಿಯನ್ನು ಬಿಡಬಲ್ಲ ಧೈರ್ಯವನ್ನು ಹೊಂದಿರಬೇಕು. ಏಕೆಂದರೆ

ಸೃಷ್ಟಿಯಲ್ಲಿನ ಸುಖಗಳು, ಆನಂದವು ಸಮುದ್ರದ ಒಂದು ಹನಿಯಷ್ಟಿದ್ದರೆ, ಅದೇ ಪರಮಾತ್ಮನ ಬಳಿ ಸಮುದ್ರದಷ್ಟು ಆನಂದವಿದೆ. ಆದ್ದರಿಂದ ಒಂದು ಹನಿ ನೀರಿಗಾಗಿ ಸಮುದ್ರವನ್ನೇ ಬಿಡಬಾರದು. **"ಸರ್ವ ಸಂಘ ಪರಿತ್ಯಾಗ ಎಂದರೆ ಈ ಸೃಷ್ಟಿಯಲ್ಲಿ ಎಲ್ಲವನ್ನೂ ಬಿಟ್ಟು ಹೇಗೆ ಬದುಕಬೇಕು?"** ಎಂದು ನೀವು ಅಂದುಕೊಳ್ಳಬಹುದು. ಆದರೆ ಪರಮಾತ್ಮನನ್ನು ತಿಳಿದುಕೊಂಡರೆ ಸಮುದ್ರದಷ್ಟು ಆನಂದವಿದೆ, ಈ ಸೃಷ್ಟಿ ನಮಗೆ ಒಂದು ಹನಿ ನೀರಷ್ಟೇ ಆನಂದವನ್ನು ನೀಡುತ್ತದೆ ಎಂಬುದು ಅರ್ಥವಾದಾಗ, ನೀವು ಸರ್ವ ಸಂಘ ಪರಿತ್ಯಾಗಕ್ಕೆ ಸಿದ್ಧರಾಗುತ್ತೀರಿ.

**5. ಅಹಂಕಾರ:** ಹಾಗೆಯೇ ಆತ್ಮಜ್ಞಾನಿಗೆ ಅಹಂಕಾರ ಇರಬಾರದು ಎಂದು ನಾವು ಎಷ್ಟೋ ಬಾರಿ ಹೇಳುತ್ತಲೇ ಇರುತ್ತೇವೆ. ಏಕೆಂದರೆ ಇರುವೆ ಅಷ್ಟು ಅಹಂಕಾರವಿದ್ದರೂ ಈ ಮಾರ್ಗದಲ್ಲಿ ಕೆಳಕ್ಕೆ ಬೀಳುವ ಸಾಧ್ಯತೆ ಇರುತ್ತದೆ, ಆದ್ದರಿಂದ ನೀವು ಬೆಳೆಯುತ್ತಾ ಹೋದಂತೆ ಬಹಳ ಜಾಗರೂಕತೆಯಿಂದ ಇರಬೇಕು. ಏಕೆಂದರೆ ಬೆಳೆಯುತ್ತಾ ಹೋದಂತೆ ನೀವು ಮಾಯೆಗೆ ವಶವಾಗುತ್ತಾರೆ ಯಾರಾದರೂ ನೀನು ಚೆನ್ನಾಗಿ ಸಾಧನೆ ಮಾಡುತ್ತೀಯಾ ಅಂದರೂ, ಚೆನ್ನಾಗಿ ಕ್ಲಾಸ್ ತೆಗೆದುಕೊಳ್ಳುತ್ತೀಯಾ ಅಂದರೂ, ನಿನಗೆ ಶ್ರದ್ಧೆ ಹೆಚ್ಚು ಅಂದರೂ, ಪಕ್ಕದವರು ನಿಮ್ಮನ್ನು ಕೇವಲ 10 ನಿಮಿಷಗಳು ಹೊಗಳಿದರೂ ನಿಮಗೆ ತಕ್ಷಣವೇ ಅಹಂಕಾರ ಬರುತ್ತದೆ. ಅದೇ ಮಾಯೆ, ಆ ಮಾಯೆಯನ್ನು ಪ್ರತಿಯೊಬ್ಬರೂ ದಾಟಬೇಕು. ನೀವು ಎಷ್ಟೇ ಎತ್ತರಕ್ಕೆ ಬೆಳೆದರೂ ಯಾವಾಗಲೂ ಒಂದನ್ನೇ ನೆನಪಿನಲ್ಲಿಟ್ಟುಕೊಳ್ಳಬೇಕು – **"ನಾನು ಇನ್ನು ಆತ್ಮ ದರ್ಶನ ಪಡೆದಿಲ್ಲ ಅಂದರೆ ನಾನು ಬೆಳೆಯಬೇಕಾದದ್ದು ಇನ್ನು ಇದೆ, ಮಾಡಬೇಕಾದ ಸಾಧನೆ ಇನ್ನು ಇದೆ, ಪಡೆಯಬೇಕಾದ ಜ್ಞಾನ ಇನ್ನು ಇದೆ"**. ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸ್ವಾಧ್ಯಾಯ ಮಾಡಬೇಕು, ಗುರುಗಳು ಹೇಳಿದ ವಿಷಯಗಳನ್ನು ಆಚರಣೆಯಲ್ಲಿ ತರಬೇಕು ಎಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಮಾಡಿದ ಕೆಲಸದ ಮೇಲೆ ದೃಷ್ಟಿ ಇಡದೆ, ಮಾಡಬೇಕಾದ ಕೆಲಸದ ಮೇಲೆ ದೃಷ್ಟಿ ಇಟ್ಟಾಗ ನಿಮಗೆ ಅಹಂಕಾರ ಬರುವುದಿಲ್ಲ.

**6. ನಿಶ್ಚಿಂತ (ಚಿಂತೆಯಿಲ್ಲದ ಸ್ಥಿತಿ):** ಹಾಗೆಯೇ ನಿಶ್ಚಿಂತೆಯಾಗಿ ಇರಲು ಕಲಿಯಬೇಕು. ಏಕೆಂದರೆ ಈ ಸೃಷ್ಟಿಯೆಲ್ಲಾ ಭಗವಂತನೇ ಎಂದು ತಿಳಿದಾಗ ನೀವು ಯಾವುದಕ್ಕೂ ಸಿದ್ಧರಾಗಿಬಿಡುತ್ತೀರಿ. ಅದಕ್ಕೇ ಪತ್ರಿಜಿಯವರು ಏನು ಹೇಳುತ್ತಾರೆಂದರೆ – "ನಿಮ್ಮ ಜೀವನದಲ್ಲಿ ಯಾವುದಾದರೂ ಬರುತ್ತಿದ್ದರೆ ಬರುತ್ತಿದೆ ಎಂದು ಸಂಭ್ರಮಪಡಬೇಡಿ, ಹೋದರೆ ಹೋಯಿತು ಎಂದು ಸಂಕಟಪಡಬೇಡಿ. ಯಾವುದೂ ಶಾಶ್ವತವಲ್ಲ. ಇಂದು ಬರುತ್ತಿದೆ ಎಂದು ಸಂಭ್ರಮಪಡಬಾರದು, ನಾಳೆ ಹೋದಾಗ ದುಃಖಿಸಬಾರದು. ಬರುವವೆಲ್ಲಾ ಹೋಗುವವೇ, ಸೃಷ್ಟಿಯಾಗುವವೆಲ್ಲಾ ನಾಶವಾಗುವವೇ" ಎಂದಿದ್ದಾರೆ.

ಈ ವಿಷಯಗಳನ್ನು ನೀವು ತಿಳಿದುಕೊಂಡಾಗ ಕಳೆದುಕೊಂಡಾಗ ದುಃಖ ಬರುವುದಿಲ್ಲ. ಬಂದಾಗ ಸಂತೋಷವಾಗಿ ಮತ್ತು ನಿಶ್ಚಿಂತೆಯಾಗಿ ಇರುತ್ತೀರಿ. ಯಾವುದಾದರೂ ಬೇಕು ಎಂದುಕೊಂಡರೆ ಅದು ಚಿಂತೆ, 'ಬಂದರೆ ಬರಲಿ ಹೋದರೆ ಹೋಗಲಿ, ಇದ್ದರೆ ಇರಲಿ' ಎಂದುಕೊಂಡರೆ ನಿಶ್ಚಿಂತೆಯಾಗಿ ಇರುತ್ತೀರಿ. ನಿಮ್ಮ ಮನಸ್ಸು ಯಾವಾಗ ನಿಶ್ಚಿಂತೆಯಾಗಿರುತ್ತದೆಯೋ ಆಗ ಸಾಧನೆ ಚೆನ್ನಾಗಿ ಸಿದ್ಧಿಸುತ್ತದೆ.

**7. ಭಾವಾತೀತ ಸ್ಥಿತಿ:** ಭಾವಾತೀತ ಸ್ಥಿತಿ ಎಂದರೆ ಹೀಗೆಯೇ ಇರಬೇಕು ಎಂದು ನೀವು ಭಾವಿಸುತ್ತಿದ್ದೀರಿ. ಆದರೆ ಅದು ಹೇಗೆ ಬರುತ್ತದೋ ಬರಲಿ, ನಾನು ಹೀಗೆಯೇ ಇರಬೇಕು ಎಂದು ಅಂದುಕೊಳ್ಳಬಾರದು; ಮಾಡಬೇಕಾದ ಸಾಧನೆಯನ್ನು ಮಾಡಬೇಕು. ನಾನು 'ಆತ್ಮ' ಎಂಬ ಅರಿವಿನಲ್ಲಿದ್ದುಕೊಂಡು ಗುರುಗಳು ಹೇಳಿದ ಸಾಧನೆಯನ್ನು ಮಾಡಬೇಕು. ಆದರೆ 'ನಾನು ಮಾಡಿದ್ದು ಹೆಚ್ಚು' ಎಂಬ ಭಾವನೆ ನಿಮ್ಮಲ್ಲಿ ಬರಬಾರದು, ಅದು ಕೂಡ ತಪ್ಪೇ. ಆ ಭಾವನೆ ನಿಮ್ಮಲ್ಲಿ ಬಂದರೆ ಮತ್ತೆ ನಿಮಗೆ ಅಹಂಕಾರ ಬರುತ್ತದೆ. ಬದಲಾಗಿ, 'ಈ ದಿನ ಇಷ್ಟು ಮಾಡಿದ್ದೇನೆ, ನಾಳೆ ಇನ್ನೂ ಹೆಚ್ಚು ಮಾಡಬೇಕು' ಎಂಬ ಹಂಬಲ ಇರಬೇಕೇ ಹೊರತು, 'ಇಷ್ಟೇ ಸಾಕು' ಎಂಬ ತೃಪ್ತಿ ಇರಬಾರದು.

**8. ವಿನಯ, ಮೌನ:** ಹಾಗೆಯೇ ಪ್ರತಿಯೊಂದು ವಿಷಯವನ್ನು ಅಳೆದು ತೂಗಿ ಮಾತನಾಡುವುದನ್ನು ಕಲಿಯಬೇಕು. ಏಕೆಂದರೆ ಬೆಳೆಯಬೇಕು ಎಂದಾಗ ಬಾಗಿರಬೇಕು (ನಮ್ರತೆಯಿರಬೇಕು). ಬಾಗಿರುವುದು ಎಂದರೆ ಕೇವಲ ಗುರುಗಳ ಮುಂದೆ ಮಾತ್ರ ವಿನಯದಿಂದ ಇರುವುದಲ್ಲ; ನಿಮ್ಮ ಮಾತಿನ ಮೂಲಕ ಇತರರಿಗೆ ನೋವುಂಟು ಮಾಡಿದರೆ ಪ್ರತಿಯೊಂದಕ್ಕೂ ಒಂದು 'ಕರ್ಮ' ಅಂಟಿಕೊಳ್ಳುತ್ತದೆ ಎಂಬ ಭಯದೊಂದಿಗೆ ಮೌನವಾಗಿರಬೇಕು. ನಿಮ್ಮಲ್ಲಿರುವ ಅಹಂಕಾರ ಯಾವಾಗ ನಾಶವಾಗುತ್ತದೆ ಎಂದರೆ, ಈ ಪ್ರಪಂಚದಲ್ಲಿರುವ ಯಾವುದೂ ಶಾಶ್ವತವಲ್ಲ ಎಂದು ತಿಳಿದುಕೊಂಡಾಗ. ಆದರೆ ಈ ಮಾಯೆಗೆ ವಶವಾಗಿ ಮತ್ತೆ ಅಹಂಕಾರ ಬೆಳೆಸಿಕೊಂಡರೆ ನೀವು ಅಜ್ಞಾನದಲ್ಲಿ ಬೀಳುತ್ತೀರಿ.

ಸಾಧನೆ ಮಾಡುತ್ತಿರುವ ನೀವು ಈ ಲೌಕಿಕ ಜೀವನದಲ್ಲಿ ಬದುಕಲೇಬೇಕು. ಆದ್ದರಿಂದ ನಿಮ್ಮ ಮಾತುಗಳಿಂದಾಗಲಿ ಅಥವಾ ನಿಮ್ಮ ಕೃತಿಗಳಿಂದಾಗಲಿ ಯಾರಿಗಾದರೂ ನೋವಾದರೆ, ನಿಮ್ಮಲ್ಲಿ ಇನ್ನೂ ಅಹಂಕಾರವಿದೆ ಎಂದೇ ಅರ್ಥ. ಅದಕ್ಕಾಗಿಯೇ ಸಾಧಕನು ಪ್ರತಿಯೊಂದು ವಿಷಯವನ್ನು ಗಮನಿಸುತ್ತಿರಬೇಕು. ಮನಸ್ಸಿನಲ್ಲಿ ಚಿಂತೆಗಳಿಲ್ಲದಂತೆ ನೋಡಿಕೊಳ್ಳುತ್ತಾ, ಏನನ್ನಾದರೂ ಬಿಡಲು ಸಿದ್ಧರಿರಬೇಕು. ಎಲ್ಲವನ್ನೂ ಒಂದೇ ಬಾರಿಗೆ ಬಿಡುವುದಲ್ಲದೆ, ಮೆಲ್ಲ ಮೆಲ್ಲಗೆ ಈ ಲೌಕಿಕ ಜೀವನದಿಂದ ಆಧ್ಯಾತ್ಮಿಕತೆಯ ಕಡೆಗೆ ಪಯಣಿಸಬೇಕು. ಉದಾಹರಣೆಗೆ ಲೌಕಿಕ

ಜೀವನವನ್ನು ನೆನಪಿಸಿಕೊಂಡರೆ – ಬಾಲ್ಯದಲ್ಲಿ ನನಗೆ ಇದು ಬೇಕು, ನಾನು ಇದನ್ನೇ ತಿನ್ನುತ್ತೇನೆ ಎಂದು ಹಠ ಮಾಡುತ್ತೇವೆ..." ಕಾಲೇಜಿಗೆ ಹೋಗುವಾಗ ಸಮಯ ಮೀರಿ ಹೋದರೆ, ಮನೆಯಲ್ಲಿ ಏನಿರುತ್ತದೆಯೋ ಅದನ್ನೇ ತಿಂದು ಹೋಗುತ್ತೇವೆ. ಅಂದರೆ ಅಲ್ಲಿ ನಮ್ಮಿಷ್ಟವನ್ನು ಸ್ವಲ್ಪ ಬಿಟ್ಟುಕೊಡುತ್ತೇವೆ. ಆ ಮೇಲೆ ಮದುವೆಯಾಗಿ ಅತ್ತೆ ಮನೆಗೆ ಹೋದಾಗ, ಅಲ್ಲಿ ಎಲ್ಲವೂ ನಮಗೆ ಇಷ್ಟ ಬಂದಂತೆ ಇರುವುದಿಲ್ಲ, ಹಾಗಾಗಿ ಅಲ್ಲಿಯೂ ಸ್ವಲ್ಪ ತ್ಯಾಗ ಮಾಡುತ್ತೇವೆ. ಆನಂತರ ಮಕ್ಕಳಿಗಾಗಿ ಇನ್ನು ಕೆಲವು ವಿಷಯಗಳನ್ನು ಬಿಟ್ಟುಕೊಡಲು ಸಿದ್ಧರಾಗುತ್ತೇವೆ. ಹೀಗೆ ಸಣ್ಣ ಪುಟ್ಟ ವಿಷಯಗಳನ್ನು ಹೇಗೆ ಬಿಟ್ಟುಕೊಡುತ್ತೇವೆಯೋ, ಹಾಗೆಯೇ ಆ ಭಗವಂತನನ್ನು ತಿಳಿಯಬೇಕೆಂದಾಗ ಈ ಸೃಷ್ಟಿಯಲ್ಲಿನ ವಿಷಯಗಳನ್ನು ಒಂದೊಂದಾಗಿ ಬಿಡುತ್ತಾ ಹೋಗಬೇಕು. ಹಾಗೆ ಬಿಟ್ಟಾಗ ಮಾತ್ರ ಆ ಪರಮಾತ್ಮನನ್ನು ಸೇರಲು ಸಾಧ್ಯವಾಗುತ್ತದೆ ಎಂದು ಮಹಾತ್ಮರೆಲ್ಲರೂ ಹೇಳಿದ್ದಾರೆ.

ಈ ಸೃಷ್ಟಿಯೆಲ್ಲವೂ ಮಿಥ್ಯ (ಸುಳ್ಳು), ಈ ಸೃಷ್ಟಿಯಲ್ಲಿ ಯಾವುದನ್ನೂ ಕೋರಬಾರದು, ಎಲ್ಲವೂ ಅಶಾಶ್ವತ ಎಂಬ ವೈರಾಗ್ಯ ಬಂದಾಗ ಎಲ್ಲವನ್ನೂ ಬಿಟ್ಟುಕೊಡಲು ಸಿದ್ಧರಾಗುತ್ತಾರೆ. ಯಾವಾಗ ಪ್ರಪಂಚದ ಮೇಲಿನ ಆಸಕ್ತಿಯನ್ನು ಕಡಿಮೆ ಮಾಡಿಕೊಂಡು ಪರಮಾತ್ಮನ ಮೇಲೆ ಆಸಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೀರೋ, ಆಗ ನಿಮಗೆ ಸಾಧನೆಯು ಚೆನ್ನಾಗಿ ಸಿದ್ಧಿಸುತ್ತದೆ. ಜ್ಞಾನವೇ ಮೋಕ್ಷದ ಸ್ವರೂಪ ಎಂದು ನಮಗೆಲ್ಲರಿಗೂ ತಿಳಿದಿದೆ. ಆ ಮೋಕ್ಷವನ್ನು ಪಡೆಯಲು, ಆ ಜ್ಞಾನವನ್ನು ತಿಳಿದುಕೊಳ್ಳಲು ಪ್ರತಿ ಕ್ಷಣವೂ ಪ್ರಯತ್ನಿಸಿದರೆ ಮಾತ್ರ ಮೋಕ್ಷ ಪಡೆಯಲು ಅರ್ಹತೆ ಬರುತ್ತದೆ. "ಜ್ಞಾನದ ಮೇಲೆ ಆಸಕ್ತಿ ಇಲ್ಲ, ಗಂಟೆಗಟ್ಟಲೆ ಓದಿದರೂ ನನಗೆ ತಲೆಗೆ ಹತ್ತುವುದಿಲ್ಲ" ಎಂದರೆ, ಅದು ತಲೆಗೆ ಹತ್ತುವವರೆಗೂ ಜನ್ಮಗಳನ್ನು ಎತ್ತುತ್ತಲೇ ಇರಬೇಕಾಗುತ್ತದೆ. ನೀವು ಯಾವುದನ್ನು ಪಡೆಯಬೇಕೆಂದು ಬಯಸುತ್ತೀರೋ, ಅದು ಈಡೇರುವವರೆಗೂ ಜನ್ಮಗಳು ಬರುತ್ತವೆ, ಆದ್ದರಿಂದ ಎಲ್ಲದಕ್ಕೂ ಪ್ರಯತ್ನಿಸಬೇಕು. ಒಟ್ಟಾರೆಯಾಗಿ ಮನಸ್ಸನ್ನು ಶುದ್ಧವಾಗಿಟ್ಟುಕೊಂಡು, ಯಾರಿಗೂ ಹಾನಿ ಮಾಡದ ಜೀವನ ನಡೆಸಿದರೆ, ನಿಮ್ಮ ಆತ್ಮಶಕ್ತಿಯನ್ನು ಜ್ಞಾನ ಪಡೆಯಲು ಬಹಳ ಚೆನ್ನಾಗಿ ಉಪಯೋಗಿಸಬಹುದು. ಅದಕ್ಕಾಗಿಯೇ ಧ್ಯಾನ ಮಾಡಬೇಕು ಮತ್ತು ಆ ಜ್ಞಾನವೇ ಪರಮಾತ್ಮನ ಸ್ವರೂಪ ಎಂದು ತಿಳಿದುಕೊಳ್ಳಬೇಕು. ಆ ಜ್ಞಾನವನ್ನು ಪೂರ್ಣವಾಗಿ ತಿಳಿದುಕೊಂಡರೆ ಮಾತ್ರ ಪರಮಾತ್ಮನ ದರ್ಶನವಾಗುತ್ತದೆ, ಆದ್ದ-ರಿಂದ ಆತ್ಮಶಕ್ತಿಯನ್ನು ಹೇಗೆ ಉಪಯೋಗಿಸಬೇಕೆಂದು ತಿಳಿದುಕೊಂಡರೆ ನೀವು ಜ್ಞಾನವಂತರಾಗಬಹುದು.

# ಆತ್ಮಾನುಭೂತಿಯನ್ನು ಪಡೆಯಬೇಕೆಂದರೆ?

ನೀವು ಆತ್ಮಾನುಭೂತಿಯನ್ನು ಪಡೆಯಬೇಕು, ಆತ್ಮವನ್ನು ತಿಳಿದುಕೊಳ್ಳಬೇಕು ಎಂದು ಈ ಧ್ಯಾನ ಸಾಧನೆಯನ್ನು ಮಾಡುತ್ತಿದ್ದೀರಿ. ಹಾಗಾದರೆ ನೀವು ಅದನ್ನು ಪಡೆಯುತ್ತಿದ್ದೀರಾ? ತಿಳಿದುಕೊಳ್ಳುತ್ತಿದ್ದೀರಾ? ಎಂದು ವಿಚಾರ ಮಾಡುತ್ತಾ ಮುಂದೆ ಸಾಗಬೇಕು. ಆ ಆತ್ಮಾನುಭೂತಿ ಪಡೆಯುವವರೆಗೆ, ಆ ಅಮೃತತ್ವದ ಸ್ಥಿತಿ ಬರುವವರೆಗೆ ಪ್ರಯತ್ನಿಸುತ್ತಲೇ ಇರಬೇಕು, ತಿಳಿದುಕೊಳ್ಳುತ್ತಲೇ ಇರಬೇಕು. ಏಕೆ–ಂದರೆ ನಿಮಗೆ ಆ ಪೂರ್ಣವಾದ ಆನಂದದ ಸ್ಥಿತಿ ಬರುವವರೆಗೆ ಆತ್ಮಾನುಭೂತಿ ಉಂಟಾದಂತೆ ಅಲ್ಲ, ಅಮೃತತ್ವದ ಸ್ಥಿತಿ ಬಂದಂತೆ ಅಲ್ಲ. ಆತ್ಮಾನುಭೂತಿಯನ್ನು ಪಡೆದಾಗಲೇ ಅಮೃತತ್ವ, ಅಂದರೆ ಸಾವು–ಹುಟ್ಟುಗಳಿಲ್ಲದ ಸ್ಥಿತಿಯನ್ನು ಪಡೆದಂತೆ. ಅದಕ್ಕೆ ಇನ್ನೊಂದು ಅರ್ಥವನ್ನೂ ಹೇಳಬಹುದು: ದುಃಖ ಮತ್ತು ಸಂತೋಷ ಎರಡೂ ಇಲ್ಲದ ಸ್ಥಿತಿ. ಹಾಗಾದರೆ ಆ ಸ್ಥಿತಿ ನಿಮಗಿದೆಯೇ? ಅಂದರೆ ಇಲ್ಲವೆಂದೇ ಹೇಳಬಹುದು.

ಅಂದರೆ ಈಗ ನೀವು 'ಜೀವಾತ್ಮರು' ಎಂದು ಹೇಳಿಕೊಳ್ಳುತ್ತಿದ್ದೀರಿ. ಆತ್ಮವೇ ದೈವವೆಂದು ತಿಳಿದಿದ್ದರೂ ಇನ್ನೂ ದುಃಖ ಬರುತ್ತಿದೆ, ಸಂತೋಷ ಬರುತ್ತಿದೆ. ದುಃಖ ಬರುತ್ತದೆ–ಹೋಗುತ್ತದೆ, ಸಂತೋಷ ಬರುತ್ತದೆ–ಹೋಗುತ್ತದೆ. ಆದರೆ ಏಕೆ ಹೀಗಿದೆ ಎಂದರೆ ಅದಕ್ಕೆ ಕಾರಣ ನೀವೇ. 'ಆತ್ಮ'... ಅನಾತ್ಮವಾದ ಮನಸ್ಸಿನೊಂದಿಗೆ, ಶರೀರದೊಂದಿಗೆ ಒಂದಾಗಿ ದುಃಖದಲ್ಲಿಯೂ, ಸಂತೋಷದಲ್ಲಿಯೂ ಇರುತ್ತದೆ. ಅನಾತ್ಮ ಎಂದರೆ ಬದಲಾಗುವುದು. ಮನಸ್ಸು ಯಾವಾಗಲೂ ಬದಲಾಗುತ್ತದೆ. ಬದಲಾಗುವ ವಸ್ತುಗಳಲ್ಲಿ ಇದ್ದುಕೊಂಡು ತಾನು ಕೂಡ ಬದಲಾಗುವವನು, ಅಂದರೆ ಮರಣ ಹೊಂದವವನು ಎಂದು ಜೀವಿಯು ಅಂದುಕೊಳ್ಳುತ್ತಿದ್ದಾನೆ.

ಆದರೆ ಆತ್ಮವೇ ಜೀವ ಕೂಡ; ತಾನು ಕೂಡ ಆತ್ಮವೇ, ಆದರೆ ಮನಸ್ಸಿನೊಂದಿಗೆ ಒಂದಾಗಿದ್ದಾನೆ. ಈ ಆತ್ಮವು ಮನಸ್ಸಿನೊಂದಿಗೆ ಒಂದಾಗಿ ತಾನು 'ಜೀವಿ' ಎಂದು ಅಂದುಕೊಳ್ಳುತ್ತಾ, ತನಗೆ ಮರಣವಿದೆ ಎಂದು ಭಾವಿಸಿದಾಗಲೆಲ್ಲಾ ಆ ಮನಸ್ಸಿನ ಲಕ್ಷಣಗಳನ್ನು ಆತ್ಮನಿಗೆ ಆರೋಪಿಸಿಕೊಳ್ಳುತ್ತಿದ್ದಾನೆ. ಅಂದರೆ ಆತ್ಮನೇ ಭಗವಂತನೆಂದು ತಿಳಿದಿದ್ದರೂ, ಮನಸ್ಸಿನೊಂದಿಗೆ ಒಂದಾಗಿರುವುದರಿಂದ ಮರಣವೆಂದರೆ ಭಯ ಉಂಟಾಗುತ್ತದೆ. ಆತ್ಮ ಎಂದರೆ ಭಗವಂತ ಎಂದು ನಾವು ಹೇಳಿಕೊಂಡಿದ್ದೇವೆ, ಅದು ಒಂದು ಶಕ್ತಿ. ಆದರೆ ಬದಲಾಗುವ ವಸ್ತುಗಳೊಂದಿಗೆ ಒಂದಾಗಿ, ತಾನು ಕೂಡ ಬದಲಾಗುವವನು ಎಂದುಕೊಳ್ಳುತ್ತಾ ನಶಿಸುವ ಅವುಗಳೊಂದಿಗೆ ಒಂದಾಗಿ ತಾನು ಕೂಡ ನಶಿಸುವವನು ಎಂದು ಭಾವಿಸುತ್ತಾ

ದುಃಖದಲ್ಲಿ ಇರುತ್ತಾರೆ. ಇನ್ನು ಯಾವುದೋ ತಾತ್ಕಾಲಿಕವಾದ ಸಣ್ಣ ಸಣ್ಣ ಸಂತೋಷಗಳು ಬರುತ್ತವೆ, ಅವುಗಳಿಂದ ಸಂತೋಷಪಡುತ್ತಾ, ದುಃಖಪಡುತ್ತಾ, ತಾನೇ ಭಗವಂತ ಎಂಬ ವಿಷಯವನ್ನು ಮರೆತುಹೋಗಿದ್ದಾರೆ. ಹಾಗಾದರೆ ಯಾರು ಈ ಅಮರತ್ವವನ್ನು ಪಡೆಯಬಲ್ಲರು? ಅಂದರೆ ಯಾರು ಶಾಶ್ವತವಾದ ಆತ್ಮಾನುಭೂತಿಯನ್ನು ಪಡೆಯುತ್ತಾರೋ, ಅವರು ಮಾತ್ರವೇ ಅಮರತ್ವವನ್ನು ಪಡೆಯಬಲ್ಲರು ಎಂದು ಮಹಾತ್ಮರು ನಮಗೆ ತಿಳಿಸಿದ್ದಾರೆ.

ಅದು ಯಾವಾಗ ಸಿಗುತ್ತದೆ ಎಂದರೆ, ನೋಡಿ ನಿಮ್ಮ ದೃಷ್ಟಿ ಹೊರಗಿನ ಪ್ರಪಂಚದ ಮೇಲೆ ಇದ್ದಾಗ ಅಭಿಪ್ರಾಯಗಳು ಕೂಡ ಬದಲಾಗುತ್ತಿರುತ್ತವೆ. ಎಲ್ಲಾದರೂ ಮರಣವನ್ನು ನೋಡಿದಾಗ 'ನಾನು ಕೂಡ ಸತ್ತುಹೋಗುತ್ತೇನೋ' ಎಂಬ ಭಯದಿಂದ ಬದುಕುತ್ತಿದ್ದಾರೆ. ಅಂದರೆ ಈ ಪ್ರೇಮ ಎನ್ನುವುದು ಮನಸ್ಸಿನೊಂದಿಗೆ ಒಂದಾದಾಗ ಬರುತ್ತದೆ. ನಮ್ಮ ದೃಷ್ಟಿ ಪ್ರಪಂಚದ ಕಡೆಗೆ ಇರುವಾಗ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವ ದೃಷ್ಟಿ ಇರುತ್ತದೆ. ಹೀಗಿರುವವರೆಗೆ ಆತ್ಮಾನುಭೂತಿಯನ್ನು ಪಡೆಯಲಾರರು, ಅಮರತ್ವದ ಸ್ಥಿತಿಯನ್ನು ತಲುಪಲಾರರು.

ಮತ್ತೆ ಈ ದುಃಖ, ಈ ಬದಲಾವಣೆಗಳು ಇವೆಲ್ಲವೂ ಹೋಗಬೇಕೆಂದರೆ ಧ್ಯಾನ ಸಾಧನೆ ಮಾಡಿ ಆತ್ಮ ಜ್ಞಾನ ಪಡೆಯಬೇಕು. ಅದಕ್ಕಾಗಿಯೇ ಕೆಲವರು ನೋವು ಉಂಟಾದಾಗ ಧ್ಯಾನದಲ್ಲಿ ಕುಳಿತುಬಿಡುತ್ತಾರೆ. ಅಂದರೆ ಸಮಸ್ತಕ್ಕೂ ಪರಿಹಾರ ಧ್ಯಾನ ಎಂದು ಅವರಿಗೆ ತಿಳಿದಿದೆ. ಅಜ್ಞಾನಿಗಳು ತಿಳಿಯದೆ ಶಾಶ್ವತವಾದ ದುಃಖದಲ್ಲಿ ಇರುತ್ತಾರೆ. ನಿನ್ನಲ್ಲೇ ಇರುವವನನ್ನು ನೀನು ತಿಳಿದುಕೊಳ್ಳಬೇಕೆಂದರೆ ನಿನ್ನೊಳಗೆ ಪ್ರಯಾಣ ಮಾಡಬೇಕು ಎಂಬ ಪರಮ ಸತ್ಯವನ್ನು ನೀವು ತಿಳಿದುಕೊಂಡಿದ್ದೀರಿ, ಆದ್ದರಿಂದಲೇ ನೀವು ಅಂತರ್ಮುಖಿಗಳಾಗಿ ಆ ಆನಂದವನ್ನು ಅನುಭವಿಸುತ್ತಿದ್ದೀರಿ. ಯಾರು ಸಂಪೂರ್ಣವಾಗಿ ಆ ಆನಂದವನ್ನು ಅನುಭವಿಸುತ್ತಾರೋ ಅವರೇ ಅಮರತ್ವವನ್ನು ಪಡೆಯಬಲ್ಲರು ಎಂದು ಹೇಳುತ್ತಾರೆ. ಆ ಅಮರತ್ವವನ್ನು ಪಡೆಯಬೇಕೆಂದರೆ ನೀನು ಬಾಹ್ಯ ಪ್ರಪಂಚದಲ್ಲಿ ಹುಡುಕಿದರೆ ಸಿಗುವುದಿಲ್ಲ. ಅಂತರಂಗದಲ್ಲಿ ಆತ್ಮವನ್ನು ದರ್ಶಿಸಿದಾಗಲೇ ಅದು ಸಾಧ್ಯ. ದೊರೆಯುತ್ತದೆ. ಮತ್ತು ನೀನು ನಿನ್ನೊಳಗೆ ಪ್ರಯಾಣಿಸಿದಾಗ ಮಾತ್ರ ಶಾಶ್ವತವಾದ ಆನಂದ ಸ್ವರೂಪಿಯನ್ನು ಹೊಂದಬಲ್ಲವನಾಗುತ್ತೀಯೆ.

ಅಂದರೆ ಈಗ ನೀವು ಏನು ಅರ್ಥಮಾಡಿಕೊಳ್ಳಬೇಕು ಎಂದರೆ? ಬದಲಾಗುವ ಮನಸ್ಸಿನೊಂದಿಗೆ ಒಂದಾದ ಆತ್ಮವು, ತಾನು 'ಜೀವಿ' ಎಂದು ಭಾವಿಸುತ್ತಾ ದುಃಖ ಪಡುತ್ತದೆ. ಆದರೆ ಗುರುಗಳ ಮೂಲಕ ಕಲಿತ ಧ್ಯಾನದ

ಮೂಲಕ, ತಾನು ಶಾಶ್ವತವಾದವನು, ನಾನು ಮರಣ ಹೊಂದುವವನಲ್ಲ, ನನಗೆ ಮರಣವಿಲ್ಲ ಎಂದು ತಿಳಿದುಕೊಳ್ಳುತ್ತದೆ. ಜೀವಿಯು ಯಾವಾಗ ಇದನ್ನು ತಿಳಿದುಕೊಳ್ಳುತ್ತಾನೋ! ಸಾಧನೆ ಮಾಡುತ್ತಿರುತ್ತಾನೋ! ಆಗ ಆ ಜ್ಞಾನವನ್ನು ಪಡೆಯುತ್ತಿರುತ್ತಾನೆ. ಆ ಜ್ಞಾನವನ್ನು ಪಡೆದಾಗ ಮಾತ್ರ ಆತ್ಮಾನುಭೂತಿ ಉಂಟಾಗುತ್ತದೆ. ನೀವು ಗಮನಿಸಿದರೆ, ಬಾಹ್ಯ ಪ್ರಪಂಚದಲ್ಲಿ ಇದ್ದಾಗ ಎಲ್ಲವೂ ಚಿಂತೆಗಳೇ ಅದಿಲ್ಲ, ಇದಿಲ್ಲ, ಅವರಿಗೆ ಅದಿದೆ, ಇವರಿಗೆ ಇದಿದೆ ಎಂಬ ಚಿಂತೆಗಳಲ್ಲಿ ಇರುತ್ತಾರೆ. ಆದರೆ ನೀವು ಕಣ್ಣು ಮುಚ್ಚಿ ಧ್ಯಾನ ಮಾಡುತ್ತಿರುವಷ್ಟು ಹೊತ್ತು ಯಾವುದೇ ಚಿಂತೆ ಇರುವುದಿಲ್ಲ. ಏಕೆಂದರೆ, 'ಇಲ್ಲ' ಎನ್ನುವ ಬಾಧೆ ಕಣ್ಣು ಬಿಟ್ಟಾಗ ಇರುತ್ತದೆ, ಅಲ್ಲಿ ಮನಸ್ಸಿದೆ. ಆದರೆ ಕಣ್ಣು ಮುಚ್ಚಿದಾಗ ಆ ಮನಸ್ಸಿಲ್ಲದ ಸ್ಥಿತಿಯಲ್ಲಿ ಆತ್ಮದೊಂದಿಗೆ ನಿಮ್ಮ ದೃಷ್ಟಿ ಒಂದಾದಾಗ, ಹೊರಗೆ ಅಲೆಯುವ ಮನಸ್ಸು ಆತ್ಮದ ಕಡೆಗೆ ತಿರುಗಿದಾಗ, ಅದಕ್ಕೆ ಮೊದಲಿಗೆ ಆಸೆಗಳು ಕಡಿಮೆಯಾಗುತ್ತಾ ಹೋಗುತ್ತವೆ. ಮತ್ತು ಆತ್ಮದಲ್ಲೇ ಲಯವಾದ ಮನಸ್ಸಿಗೆ ಯಾವುದೇ ಆಸೆಗಳು ಇರುವುದಿಲ್ಲ. ಸೃಷ್ಟಿಯೆಲ್ಲಾ ನಾನೇ ಆದಾಗ, ನಾನು ಸೃಷ್ಟಿಸಿದ್ದನ್ನೇ ನಾನು ಕೋರಿ ಸಾಧಿಸಬೇಕು ಎಂದುಕೊಳ್ಳುವುದು ಏನು ಎಂಬ ಅಭಿಪ್ರಾಯಕ್ಕೆ ಬರುತ್ತೀರಿ. ಅಂದರೆ ಈಗ ನಾನು ಆತ್ಮ, ನೀನು ಆತ್ಮ, ಸರ್ವ ಜೀವಿಗಳೂ ಆತ್ಮ ಸ್ವರೂಪಗಳೇ, ಸೃಷ್ಟಿಯೆಲ್ಲಾ ಆತ್ಮಮಯವೇ ಎಂದು ತಿಳಿದುಕೊಂಡಿದ್ದೀರಿ. ಆದರೆ ನಿಮ್ಮ ದೃಷ್ಟಿ ಅಂತರದೃಷ್ಟಿಯಾದಾಗ ಆ ಅನುಭೂತಿಯನ್ನು ಪಡೆಯುತ್ತಾ, ಪಡೆಯುತ್ತಾ ಇನ್ನು ಬಾಹ್ಯವಾಗಿರುವವುಗಳನ್ನು ಕಳೆದುಕೊಳ್ಳುತ್ತೀರಿ. ಕಳೆದುಕೊಳ್ಳುತ್ತಾ ಸೃಷ್ಟಿಯೆಲ್ಲಾ ನಾನೇ, ಈ ಸೃಷ್ಟಿ ನಾನೇ ಎಂದು ತಿಳಿದುಕೊಳ್ಳುತ್ತೀರಿ. ಇದು ಕೊನೆಯ ಸ್ಥಿತಿ, ಇದೇ. ಅಮೃತತ್ವದ ಸ್ವಭಾವವದು. ಇನ್ನು ಯಾವುದನ್ನೂ ಬಯಸುವುದಿಲ್ಲ, "ಈ ಸೃಷ್ಟಿಯೆಲ್ಲಾ ನಾನೇ ಆಗಿದ್ದೇನೆ, ನನಗೆ ಇಲ್ಲದ್ದು, ನಾನು ಅಲ್ಲದ್ದು ಏನಿದೆ?" ಎಂದು ತಿಳಿದುಕೊಂಡ ಜೀವಿಯು ಆಗ ದೇವನಾಗುತ್ತಾನೆ. ಅಂದರೆ, ಆಸೆಯನ್ನು ಬಿಟ್ಟು ಎಲ್ಲವೂ ತಾನೇ ಎಂದು ತಿಳಿದುಕೊಂಡವನು ದೇವನಾಗುತ್ತಾನೆ. ಆದರೆ ಇದನ್ನು ತಿಳಿದುಕೊಳ್ಳಬೇಕೆಂದರೆ ಬಹಳಷ್ಟು ಜ್ಞಾನವನ್ನು ಪಡೆಯಬೇಕು. ಪ್ರತಿಯೊಂದನ್ನು ವಿಚಾರಣೆ ಮತ್ತು ವಿಶ್ಲೇಷಣೆ ಮಾಡಿ ಎಂದು ಮಹಾತ್ಮರು ಏಕೆ ಹೇಳುತ್ತಾರೆ? ಅದಕ್ಕಾಗಿಯೇ ವಶಿಷ್ಠರು 'ವಿಚಾರಣೆಯೇ ಪರಮ ಜ್ಞಾನ' ಎಂದು ಹೇಳಿದರು.

ಅಂದರೆ, ಜೀವಿಯಾಗಿರುವ ನಾನು ವಿಚಾರಣೆಯ ಮೂಲಕ ದೇವನಾಗಿ ಬೆಳೆಯುತ್ತೇನೆ ಎಂಬ ಸಣ್ಣ ವಿಷಯವನ್ನು ಮರೆತು, ಇರುವುದನ್ನು ಇದ್ದಂತೆಯೇ ನೋಡುತ್ತಿದ್ದಾರೆಯೇ ಹೊರತು, ಆ ಇರುವುದರ ಹಿಂದಿರುವ ಯಥಾರ್ಥವನ್ನು

(ಸತ್ಯವನ್ನು) ನೋಡಲಾಗುತ್ತಿಲ್ಲ. ಇರುವುದರ ಹಿಂದಿರುವ ಯಥಾರ್ಥವನ್ನು ನೀವು ಗುರುತಿಸಬಲ್ಲವರಾದರೆ, ನೀವು ಯಾರು ಎಂಬುದು ನಿಮಗೆ ಅರ್ಥವಾಗುತ್ತದೆ. ನೋಡಿ, ಸೃಷ್ಟಿಯಲ್ಲಿನ ಎಲ್ಲಾ ಜೀವಿಗಳೂ ಪ್ರಾಣದ ಮೂಲಕವೇ ಇವೆ. ಅಂದರೆ ಪ್ರಾಣವಿಲ್ಲದಿದ್ದರೆ ಜೀವಿಯು ನಿರ್ಜೀವಿಯಾಗುತ್ತಾನೆ. ಆ ಪ್ರಾಣವಿದ್ದಾಗಲೇ ಜೀವಿಗೆ ಚಲನವಿರುತ್ತದೆ. ಆದರೆ ಆ ಪ್ರಾಣದ ಹಿಂದಿರುವ ಪ್ರಾಣಶಕ್ತಿ ಯಾರು? ಆ ಪ್ರಾಣಕ್ಕೆ ಆ ಶಕ್ತಿಯನ್ನು ನೀಡುತ್ತಿರುವುದು ಯಾರು? ಎಂದು ಸ್ವಲ್ಪ ವಿಚಾರ ಮಾಡಿದರೆ, ಆ ಪ್ರಾಣಶಕ್ತಿಯೂ ಕೂಡ ಪರಮಾತ್ಮನೇ! ಪರಮಾತ್ಮನೇ ಪ್ರಾಣಕ್ಕೆ ಆ ಶಕ್ತಿಯನ್ನು ನೀಡುತ್ತಿರುವುದರಿಂದಲೇ ಜೀವಿಗಳು ಬದುಕುತ್ತಿವೆ.

ಅದಕ್ಕಾಗಿಯೇ ಪದಾರ್ಥವನ್ನು ನೋಡುವುದಲ್ಲ, ಯಥಾರ್ಥವನ್ನು ತಿಳಿದುಕೊಂಡರೆ ಮಾತ್ರ ಜ್ಞಾನ ಬೆಳೆಯುತ್ತದೆ ಎಂದು ನಮಗೆ ಅರ್ಥವಾಗುತ್ತದೆ. ಪ್ರತಿಯೊಂದು ಜೀವಿಯ ಆಯಸ್ಸನ್ನು ಹೆಚ್ಚಿಸುತ್ತಿರುವುದು ಆ ಪ್ರಾಣಶಕ್ತಿಯೇ. ನೋಡಿ, ಅಂತರ್ದೃಷ್ಟಿ ಇಲ್ಲದ ತನಕ, ಬಾಹ್ಯ ದೃಷ್ಟಿ ಇರುವ ತನಕ ಇಷ್ಟು ಆಳವಾಗಿ ಯೋಚಿಸಲಾರರು. ನಿಮ್ಮ ಬುದ್ಧಿಯಿಂದ ತಿಳಿದುಕೊಂಡ ಜ್ಞಾನದಿಂದ ಅನುಭೂತಿಯನ್ನು ಪಡೆಯಲಾರಿರಿ. ಏಕೆಂದರೆ ಬುದ್ಧಿಯು 'ಆತ್ಮ' ಹೀಗಿರುತ್ತದೆ ಎಂದು ವರ್ಣಿಸಲು ಸಾಧ್ಯವಿಲ್ಲ. ಅಸಲಿಗೆ ಆ ಬುದ್ಧಿಗೂ ಶಕ್ತಿಯನ್ನು ನೀಡುವುದು ಆತ್ಮವೇ. ಅದು ಬಾಹ್ಯ ವಿಷಯಗಳನ್ನು ಮಾತ್ರ ಗ್ರಹಿಸುತ್ತದೆ. ಅದಕ್ಕಾಗಿಯೇ ಧ್ಯಾನಕ್ಕೆ ಬರುವ ಮೊದಲು ನೀವು ಓದುತ್ತಿರುವ ಪುಸ್ತಕಗಳು ಸ್ವಲ್ಪ ಸ್ವಲ್ಪವಾಗಿ ಅರ್ಥವಾಗುತ್ತವೆ, ಆದರೆ ಧ್ಯಾನದ ಮೂಲಕ ಬುದ್ಧಿ ವಿಕಸನಗೊಂಡಂತೆಲ್ಲಾ ಅವುಗಳ ಆಂತರಿಕ ಅರ್ಥಗಳು ತಿಳಿಯುತ್ತಾ ಹೋಗುತ್ತವೆ.

ಧ್ಯಾನ ಮಾರ್ಗಕ್ಕೆ ಬಂದು ಬುದ್ಧಿಯನ್ನು ವಿಕಸನಗೊಳಿಸಿಕೊಳ್ಳದೆ ಮಾಡುವ ಪುಣ್ಯಕಾರ್ಯಗಳಿಂದ ಅಥವಾ ಪೂಜೆಗಳಿಂದ ಶಾಶ್ವತವಾದ ಆನಂದ ಸ್ಥಿತಿ ದೊರೆಯದು. ಆತ್ಮವನ್ನು ಆಶ್ರಯಿಸಿದರೆ ಮಾತ್ರ ಶಾಶ್ವತವಾದ ಆನಂದ ಸ್ಥಿತಿ ಲಭಿಸುತ್ತದೆ ಎಂಬುದು ತಿಳಿಯುತ್ತದೆ. ಈ ಆತ್ಮಾನುಭೂತಿ ಎನ್ನುವುದು ಅವರವರಿಗೆ ಅವರೇ ಆಂತರ್ಮುಖಿಗಳಾಗಿ ಆತ್ಮವನ್ನು ತಲುಪಿದಾಗ ಮಾತ್ರ ಪಡೆಯಲು ಸಾಧ್ಯ. ನೀವು ನಿರಾಕಾರವಾದ ಆತ್ಮವನ್ನು, ನಿರಾಕಾರನಾದ ಭಗವಂತನನ್ನು ಯಾರಿಗೆ ಅವರೇ ಆಂತರ್ಮುಖಿಗಳಾಗಿ ಅನುಭವಿಸಬೇಕು. ಆ ಪಡೆದ ಅನುಭೂತಿಯನ್ನು ಮಾತುಗಳಿಂದ ಹೇಳಲಾಗದು, ಅದು ವಾಕ್ಕಿಗೆ ನಿಲುಕದ್ದು, ದೃಷ್ಟಿಗೆ ಕಾಣದ್ದು, ಕಿವಿಗಳಿಗೆ ಕೇಳಿಸದ್ದು ಮತ್ತು ಬುದ್ಧಿಯಿಂದ ನಿರ್ಧರಿಸಲಾಗದ್ದು. ಕೊನೆಗೆ ನಿಮಗೆ 'ಥರ್ಡ್ ಐ' (ಮೂರನೇ ಕಣ್ಣು) ಬಂದರೂ

ಅದು ಕಾಣಿಸದು. ಏಕೆಂದರೆ ಈ ಇಂದ್ರಿಯಗಳೆಲ್ಲಕ್ಕೂ ಶಕ್ತಿಯನ್ನು ನೀಡುತ್ತಿರುವ ಆತ್ಮವು ಇಂದ್ರಿಯಗಳಿಗೆ ಅತೀತವಾದುದು. ಆದರೆ ನಿನ್ನ ಇಂದ್ರಿಯಗಳಿಗೆ ಶಕ್ತಿಯನ್ನು ಆತ್ಮವೇ ನೀಡುತ್ತದೆ. ಆದರೆ ಇಂದ್ರಿಯಗಳು ಆತ್ಮವನ್ನು ವ್ಯಕ್ತಪಡಿಸಲಾರವು. ಅದಕ್ಕಾಗಿಯೇ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದುದೇನೆಂದರೆ ಇಂದ್ರಿಯಗಳಿಗೆ ಶಕ್ತಿ ನೀಡುತ್ತಿರುವ ಆತ್ಮವು ಇಂದ್ರಿಯಾತೀತವಾದುದು, ಅದು ಮಾತುಗಳಲ್ಲಿ ಅಳೆಯಲಾಗದ್ದು ಮತ್ತು ಕಣ್ಣುಗಳಿಂದ ನೋಡಲಾಗದ್ದು. ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ "ನಾನು ಅಂದುಕೊಂಡಂತೆ ನಾನು ಇರಲು ಸಾಧ್ಯವಾಗುತ್ತಿಲ್ಲ ಎಂದರೆ ನನ್ನ ಸಾಧನೆಯಲ್ಲಿ ಲೋಪವಿದೆ, ನನ್ನ ಬುದ್ಧಿಯಲ್ಲಿ ಲೋಪವಿದೆ" ಅಂದರೆ ಗುರುವಿನ ಮಾತುಗಳನ್ನು ಗ್ರಹಿಸುವಷ್ಟು ಬುದ್ಧಿ ಇನ್ನೂ ವಿಕಸನಗೊಂಡಿಲ್ಲ ಎಂದು ನೀವು ಅರ್ಥಮಾಡಿಕೊಳ್ಳಬೇಕು. ಸರಿಯಾದ ಸಾಧನೆ ಮಾಡದಿದ್ದರೆ ನಿಮಗೆ ಆತ್ಮಾನುಭೂತಿ ಎಂದಿಗೂ ಉಂಟಾಗುವುದಿಲ್ಲ. ಅದಕ್ಕಾಗಿಯೇ ಸರಿಯಾದ ಸಾಧನೆ, ಸರಿಯಾದ ಜ್ಞಾನ ಎಂದು ಹೇಳುತ್ತಾರೆ. ಸರಿಯಾದ ಸಾಧನೆ ಎಂದರೆ ನಿಮ್ಮ ಸಾಧನೆಯು ಆತ್ಮಾನುಭೂತಿಯನ್ನು ಉಂಟುಮಾಡುವಂತಿರಬೇಕು. ನೀವು ಕೇಳುತ್ತಿರುವ ಜ್ಞಾನವೆಲ್ಲವೂ ಆತ್ಮನಿಗಾಗಿಯೇ ಪ್ರಯತ್ನಿಸಬೇಕು.

ಪ್ರಾಪಂಚಿಕವಾಗಿ ಬಯಸುತ್ತಿದ್ದೀರಿ ಎಂದರೆ ನಿಮ್ಮ ಸಾಧನೆ ಸರಿಯಿಲ್ಲ ಎಂದರ್ಥ. ಹಾಗಾದರೆ "ಶ್ವಾಸದ ಮೇಲೆ ಗಮನ" ಇಟ್ಟವನು ಸರಿಯಾದ ಜ್ಞಾನವನ್ನು ಪಡೆದು ಆತ್ಮಾನುಭೂತಿಗೇ ಪ್ರಯತ್ನಿಸುತ್ತಾನೆ. ಅದಕ್ಕಾಗಿಯೇ ಮಹಾತ್ಮರು ಒಂದು ಮಾತನ್ನು ಹೇಳಿದ್ದಾರೆ. ಪ್ರಾಪಂಚಿಕ ಆಸೆಗಳು ನಿಮಗೆ ಎಷ್ಟಿರುತ್ತವೋ ನೀವು ಅಷ್ಟೇ ಕೆಳಮಟ್ಟಕ್ಕೆ ಇಳಿದಂತೆ. ಆತ್ಮವೇ ಪರಮಾತ್ಮ, ಆದ್ದ-ರಿಂದ ನೀವು ಆ ಪರಮಾತ್ಮನಿಗಾಗಿ ಧ್ಯಾನ ಮಾಡಿದರೆ ನೀವು ಅಷ್ಟೇ ಎತ್ತರಕ್ಕೆ ಬೆಳೆಯುತ್ತೀರಿ ಎಂದರ್ಥ. ನಿಮ್ಮ ಜೀವನದಲ್ಲಿ ನೀವು ಬೆಳೆಯುತ್ತಿದ್ದೀರಾ? ಇಲ್ಲವೇ? ನಾನು ಇನ್ನು ಆಸೆಗಳಲ್ಲೇ ಇದ್ದೇನಾ? ಆಸೆಗಳನ್ನು ಕಡಿಮೆ ಮಾಡಿಕೊಳ್ಳುತ್ತಾ ನಾನು ಯಾರೆಂದು ತಿಳಿದುಕೊಳ್ಳುತ್ತಿದ್ದೇನಾ? ಗುರುಗಳು ನೀನು 'ಆತ್ಮ' ಎಂದು ಹೇಳಿದ್ದಾರೆ. ಹೌದಾ? ಅಲ್ವಾ? ಎನ್ನುವುದನ್ನು ತಿಳಿದುಕೊಳ್ಳಬೇಕು.

ಮುಖ್ಯವಾಗಿ ಜ್ಞಾನವನ್ನು ಪಡೆಯಲು ಬೇಕಾದುದು ಬುದ್ಧಿ. ಅಂದರೆ ಪ್ರಾಪಂಚಿಕ ಜ್ಞಾನವಿದ್ದರೆ ಅದು ಪರಿಮಿತ ಬುದ್ಧಿ. ಆಧ್ಯಾತ್ಮಿಕ ವಿಷಯಗಳು ನಿಮಗೆ ಅರ್ಥವಾಗುತ್ತಿವೆ ಎಂದರೆ ನಿಮ್ಮ ಬುದ್ಧಿ ಬೆಳೆಯುತ್ತಿದೆ ಎಂದು ತಿಳಿದುಕೊಳ್ಳಬೇಕು. ಆದುದರಿಂದ ನಾನು ಧ್ಯಾನವನ್ನು ಹೇಗೆ ಮಾಡುತ್ತಿದ್ದೇನೆ? ಎಷ್ಟು ಗಂಟೆಗಳು

ಕುಳಿತಿದ್ದೇನೆ ಎಂದಲ್ಲ, ಎಷ್ಟು ಶಕ್ತಿಯನ್ನು ಪಡೆಯುತ್ತಿದ್ದೇನೆ? ಎನ್ನುವುದನ್ನೂ ಗಮನಿಸಬೇಕು. ಆತ್ಮಶಕ್ತಿ ಹೇಗೆ ಬೆಳೆಯುತ್ತದೆ ಎಂದರೆ ಪ್ರಾಪಂಚಿಕ ಆಸೆಗಳಿಲ್ಲದೆ ಸಾಧನೆ ಮಾಡಲಾರದ್ದರೆ ನಿಮ್ಮ ಶಕ್ತಿ ಬೆಳೆಯುತ್ತಿರುತ್ತದೆ. ಆ ಪ್ರಾಪಂಚಿಕ ಆಸೆಗಳಿದ್ದಾಗ ನೀವು ತುಂಬಾ ಹೆಚ್ಚಾಗಿ ಶಕ್ತಿಯನ್ನು ಖರ್ಚು ಮಾಡುತ್ತಿರುತ್ತೀರಿ. ನೀವು ದಿನವಿಡೀ ಕುಳಿತು ಮೌನವಾಗಿ ನೀವು ಮಾಡುವ ಕೆಲಸಗಳನ್ನು ಗಮನಿಸಿದರೆ ನೀವು ಎಷ್ಟು ಶಕ್ತಿಯನ್ನು ಖರ್ಚು ಮಾಡುತ್ತಿದ್ದೀರಿ ಎಂದು ತಿಳಿಯುತ್ತದೆ!

ಇಂದ್ರಿಯಗಳು ಎಂದರೆ ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಅಂತರಿಂದ್ರಿಯ – ಇವೆಲ್ಲಕ್ಕೂ ಶಕ್ತಿಯನ್ನು ನೀಡಿ ನಡೆಸುತ್ತಿರುವುದು ಆತ್ಮವೇ. ಆದ್ದರಿಂದ ಆ ಆತ್ಮಶಕ್ತಿಯನ್ನು ಹೆಚ್ಚಿಸಿಕೊಂಡರೆ ನಾನು ಪ್ರಾಪಂಚಿಕ ಜೀವನಕ್ಕಿಂತ ಆಧ್ಯಾತ್ಮಿಕ ಜೀವನದಲ್ಲಿ ಉನ್ನತ ಸ್ಥಿತಿಯಲ್ಲಿ ಇರಬಲ್ಲೆ ಎಂಬ ನಂಬಿಕೆ ನಿಮಗೆ ಬರುತ್ತದೆ. ಆಗ ಕೆಲವೇ ದಿನಗಳಲ್ಲಿ ನೀವು ಆತ್ಮಾನುಭೂತಿಯನ್ನು ಪಡೆಯಬಹುದು. "ನೀವು ಈ ಕ್ಲಾಸ್ ಅನ್ನು ಆಸಕ್ತಿಯಿಂದ ಕುಳಿತು ಕೇಳುತ್ತಿದ್ದೀರಿ ಎಂದರೆ ನೀವು ಆತ್ಮ..." ಸ್ಥಿತಿಯಲ್ಲಿದ್ದಂತೆ! ಧ್ಯಾನ ಮಾಡುತ್ತಿದ್ದೀರಿ ಎಂದರೆ ಆತ್ಮಸ್ಥಿತಿಯಲ್ಲಿದ್ದಂತೆ! ಎಲ್ಲಿ ನನಗೆ ಹೊಸ ವಿಷಯ ಸಿಗುತ್ತದೆ ಎಂದು ನಿರಂತರವಾಗಿ ಅನ್ವೇಷಣೆ ಮಾಡುತ್ತಿದ್ದೀರಿ ಎಂದರೆ ಆತ್ಮಸ್ಥಿತಿಯಲ್ಲಿದ್ದಂತೆ! ಆತ್ಮಸ್ಥಿತಿಗೆ ತಲುಪಿದ್ದೀರಿ ಆದರೆ ಆತ್ಮಾನುಭೂತಿಯನ್ನು ಇನ್ನೂ ಪಡೆದಿಲ್ಲ. ಆದ್ದರಿಂದ ನಾನು ಆ ಆತ್ಮಾನುಭೂತಿಯನ್ನು ಪಡೆಯಬೇಕು ಎಂದು ಕೃಷಿ (ಪ್ರಯತ್ನ) ಮಾಡಬೇಕು.

ನಾನು ಆ ಆತ್ಮಾನುಭೂತಿಯನ್ನು ಪಡೆಯಬೇಕು, ಅಮೃತ ಪುತ್ರನಾಗಬೇಕು ಎಂಬ ಆಕಾಂಕ್ಷೆ ನಿಮ್ಮಲ್ಲಿದ್ದರೆ, ನೀವು ಕೂಡ ಈ ಜನ್ಮದಲ್ಲೇ ತಪ್ಪದೇ ಸಾಧಿಸಬಲ್ಲಿರಿ. ಒಬ್ಬ ಸಾಧಕನು ಧ್ಯಾನ ಮಾಡುವುದರಲ್ಲಿ ತೃಪ್ತಿ ಪಟ್ಟುಕೊಳ್ಳಬಾರದು. "ಪ್ರಾಪಂಚಿಕ ವಿಷಯಗಳಲ್ಲಿ ತೃಪ್ತಿ, ಆಧ್ಯಾತ್ಮಿಕ ವಿಷಯಗಳಲ್ಲಿ ಅತೃಪ್ತಿ ಇರಬೇಕು" ಎಂದು ಬುದ್ಧನು ಹೇಳಿದ್ದಾನೆ. ಖಾಲಿ ಸಮಯವಿದ್ದರೆ ಕಣ್ಣುಗಳು ಮುಚ್ಚಿಹೋಗುತ್ತವೆ, ಯಾರ ಮಾತೂ ಕೇಳಿಸುವುದಿಲ್ಲ. ಅದು ನಿದ್ರೆ ಅಂದುಕೊಳ್ಳಬೇಡಿ; ಕುಳಿತು ಧ್ಯಾನ ಮಾಡಲು 10 ನಿಮಿಷಗಳು ಸಾಕು. ಆದರೆ ಜ್ಞಾನ ಪೂರ್ತಿಯಾಗಿ ಬಂದರೆ ಹೊರತು ಆತ್ಮಾನುಭೂತಿ ಉಂಟಾಗುವುದಿಲ್ಲ ಎಂಬ ಎಚ್ಚರವನ್ನು ಮಾತ್ರ ಯಾವಾಗಲೂ ಕಳೆದುಕೊಳ್ಳಬಾರದು. ಈ ರೀತಿಯಾಗಿ ಆತ್ಮಾನುಭೂತಿಯನ್ನು ಪಡೆಯುತ್ತಾ ಆನಂದ ಸ್ಥಿತಿಯಲ್ಲಿ ಇರಲು ಪ್ರಯತ್ನಿಸಬೇಕು.



# ಧಾರ್ಮಿಕ ಜೀವನ ಎಂದರೆ?

## ಧಾರ್ಮಿಕ ಜೀವನ ಮತ್ತು ಧರ್ಮದ ಮಹತ್ವ

ಧಾರ್ಮಿಕ ಜೀವನ ಎಂದರೆ ಧರ್ಮಬದ್ಧವಾದ ಜೀವನ. ಅದಕ್ಕಾಗಿಯೇ ಬುದ್ಧನು "ಧರ್ಮಂ ಶರಣಂ ಗಚ್ಛಾಮಿ" ಎಂದು ಹೇಳಿದ್ದಾನೆ. ಅಂದರೆ ಯಾರು ಧರ್ಮವನ್ನು ಶರಣು ಹೊಂದುತ್ತಾರೋ ಅವರು ಶ್ರೇಷ್ಠರಾಗುತ್ತಾರೆ. ಧರ್ಮವನ್ನು ಶರಣು ಹೋದವನು ಮಾತ್ರ ಸತ್ಯವನ್ನು ತಿಳಿದುಕೊಳ್ಳಬಲ್ಲನು.

ನೀವು ಹೀಗೆ ಅಂದುಕೊಳ್ಳಬಹುದು: "ನಾನು ಆತ್ಮ ಎಂದರೆ ಭಗವಂತ ಎಂದು ತಿಳಿದುಕೊಂಡಿದ್ದೇನೆ, ವಿಗ್ರಹವು ದೇವರಲ್ಲ ಎಂದು ತಿಳಿದುಕೊಂಡಿದ್ದೇನೆ, ಸತ್ಯವನ್ನೂ ತಿಳಿದುಕೊಂಡಿದ್ದೇನೆ, ಆದರೆ ಆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು (ದರ್ಶಿಸಲು) ಏಕೆ ಸಾಧ್ಯವಾಗುತ್ತಿಲ್ಲ?" ಅದಕ್ಕೆ ಕಾರಣವೇನೆಂದರೆ, ಧರ್ಮವನ್ನು ಆಚರಿಸಿದಾಗ ಮಾತ್ರ ಸತ್ಯ ದರ್ಶನ ಸಾಧ್ಯ ಎಂದು ಮಹಾತ್ಮರು ಹೇಳಿದ್ದಾರೆ. ಹಾಗಾದರೆ ಧರ್ಮವನ್ನು ಆಚರಿಸುವುದು ಹೇಗೆ? ಅಸಲಿಗೆ ಧರ್ಮ ಎಂದರೆ ಏನು? ಎಂಬ ವಿಷಯಗಳನ್ನು ತಿಳಿದುಕೊಳ್ಳಬೇಕು.

"ನೀನು ಧರ್ಮವನ್ನು ರಕ್ಷಿಸಿದರೆ, ಆ ಧರ್ಮವೇ ದೇವರಾಗಿ ನಿನ್ನನ್ನು ರಕ್ಷಿಸುತ್ತದೆ." ಯಾವಾಗ ನೀವು ಧರ್ಮವನ್ನು ಆಚರಿಸುತ್ತೀರೋ, ಆಗ ಸತ್ಯಕ್ಕೆ ಹತ್ತಿರವಾಗುತ್ತೀರಿ. ಧರ್ಮ ಎಂದರೆ ನೀವು ಜೀವಿಸುವ ಒಂದು ಕಲೆ. ಪ್ರತಿ ವಿಷಯದಲ್ಲಿ, ಪ್ರತಿ ಕ್ಷಣವೂ ಧರ್ಮಬದ್ಧವಾದ ಜೀವನವನ್ನು ನಡೆಸುವುದೇ ಜೀವನ ಕಲೆ ಎಂದು ಹೇಳಲಾಗುತ್ತದೆ.

ರೂ. 60/-

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ
http: //www.youtube.com/pmckannada
● www.meditationeverywhere.org
●www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು–560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689

ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books